ಸಂಪುಟ: 05 ಸಂಚಿಕೆ: 120 ಪುಟಗಳು: 08 ಭಾನುವಾರ 13 ಜುಲೈ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ
ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಬಲಿಷ್ಠತೆ ಎನ್ನುವುದು ನಿಮ್ಮ ದೈಹಿಕ ಸಾಮರ್ಥ್ಯದಿಂದ ಬರುವಂಥದಲ್ಲ; ಅದು ಅದಮ್ಯ ಅಂತಃಶಕ್ತಿಯಿಂದ ಬರುವಂಥದ್ದು.

## ಬಯಲಾಯ್ತು ವಿಮಾನ ದುರಂತ ರಹಸ್ಯ

## ತನಿಖಾ ವರದಿಯಲ್ಲಿ ಪಕ್ಷಪಾತ: ಪೈಲಟ್ ಸಂಘದ ಟೀಕೆ ಎಂಜಿನ್ ಅನ್ನು ರೀಸ್ಟಾರ್ಟ್ ಮಾಡಲು ಪ್ರಯತ್ನ

• ಉದಯವಾಹಿನಿ, ನವದೆಹಲಿ

270ಕ್ಕೂ ಅಧಿಕ ಜನರ ಸಾವಿಗೆ ಕಾರಣವಾಗಿದ್ದ ಅಹಮದಾಬಾದ್ ವಿಮಾನ ದುರಂತದ ಕಾರಣ ಬಯಲಾಗಿದೆ. ಅಪಘಾತದ ಬಗ್ಗೆ ತನಿಖೆ ನಡೆಸಿದ್ದ ವಿಮಾನ ಅಪಘಾತಗಳ ತನಿಖಾ ಸಂಸ್ಥೆಯ (AAIB) ವರದಿ ಬಿಡುಗಡೆಯಾಗಿದೆ. ವಿಮಾನ ಹಾರಿದ ಕೆಲವೇ ಸೆಕೆಂಡುಗಳಲ್ಲಿ ಎರಡು ಇಂಜಿನ್‌ಗಳಿಗೆ ಇಂಧನ ಪೂರೈಕೆ ನಿಂತಿದೆ. ಅದರ ಸ್ವಿಚ್‌ಗಳು RUN ನಿಂದ CUT OFF ಆಗಿದ್ದವು. ಇದರಿಂದ ಇಂಧನ ಸರಬರಾಜಾಗದೆ, ವಿಮಾನ ಮೇಲಕ್ಕೆ ಹಾರಲು ಸಾಧ್ಯವಾಗಿಲ್ಲ ಎಂದು ತನಿಖಾ ವರದಿಯಲ್ಲಿ ಎಎಐಬಿ ತಿಳಿಸಿದೆ.

**ಪೈಲಟ್‌ಗಳ ಮಾತುಕತೆ ರೆಕಾರ್ಡ್:** ವಿಮಾನ ದುರಂತಕ್ಕೀಡಾಗುವ ಮೊದಲು ಪೈಲಟ್‌ಗಳಿಬ್ಬರು ಮಾತನಾಡಿಕೊಂಡಿದ್ದು, ಬ್ಲ್ಯಾಕ್‌ಬಾಕ್ಸ್‌ನಲ್ಲಿ ದಾಖಲಾಗಿದೆ. ಒಬ್ಬ ಪೈಲಟ್ 'ಇಂಧನವನ್ನು ಏಕೆ ಆಫ್ ಮಾಡಿದ್ದೀರಿ' ಎಂದು ಕೇಳುತ್ತಾರೆ. ಅದಕ್ಕೆ ಇನ್ನೊಬ್ಬ ಪೈಲಟ್ 'ನಾನು ಮಾಡಿಲ್ಲ' ಎಂದು ಹೇಳುತ್ತಾರೆ. ಇಂಧನ ಸ್ವಿಚ್‌ಗಳನ್ನು ಮರುಚಾಲನೆ ಮಾಡಿದರೂ, ಅವು ಸಕ್ರಿಯವಾಗಿಲ್ಲ ಎಂದು ತನಿಖಾ ವರದಿ ಹೇಳಿದೆ. ವಿಮಾನ ಟೇಕ್ ಆಫ್ ಆದ 30 ಸೆಕೆಂಡುಗಳ ನಂತರ ಭೀಕರವಾಗಿ ದುರಂತಕ್ಕೀಡಾಯಿತು. ಅಪಘಾತ ಸ್ಥಳದಲ್ಲಿ ಇಂಧನದ ಮಾದರಿ ಸಂಗ್ರಹಿಸಿ ಡಿಜಿಸಿಎ (ನಾಗರಿಕ ವಿಮಾನಯಾನ ನಿರ್ದೇಶನಾಲಯ) ಪ್ರಯೋಗಾಲಯದಲ್ಲಿ ಪರೀಕ್ಷಿಸಲಾಯಿತು. ಅದರಲ್ಲಿ ಯಾವುದೇ ಸಮಸ್ಯೆ ಕಂಡುಬಂದಿಲ್ಲ ಎಂದು ಎಎಐಬಿ ಮಾಹಿತಿ ನೀಡಿದೆ. ವಿಮಾನವು 1:38:39 ಸೆಕೆಂಡ್‌ಗೆ ಟೇಕ್‌ಆಫ್ ಆಯಿತು. 1:39:09 ಸೆಕೆಂಡ್‌ಗೆ ಅಪಘಾತಕ್ಕೀಡಾಗಿದೆ. 1:39:05 ಸೆಕೆಂಡ್‌ಗೆ ಪೈಲಟ್‌ಗಳಲ್ಲಿ ಒಬ್ಬರು 'ಮೇಡೇ ಮೇಡೇ ಮೇಡೇ' ಎಂದು ತುರ್ತು ಸಂದೇಶ ರವಾನಿಸಿದ್ದಾರೆ. ಇಷ್ಟು ಕಡಿಮೆ ಸಮಯದಲ್ಲಿ ಎಟಿಸಿಒ ಯಾವುದೇ ಪ್ರತಿಕ್ರಿಯೆ ಪಡೆಯಲಿಲ್ಲ; ಅಷ್ಟರಲ್ಲಿ ವಿಮಾನ ನಿಲ್ದಾಣದ ಪಕ್ಕದ ಹಾಸ್ಟೆಲ್ ಮೇಲೆ ಅಪ್ಪಳಿಸಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

**ಕಟ್ ಆಫ್ ಆದ ಇಂಧನ ಸ್ವಿಚ್‌ಗಳು:** ಕಟ್ ಆಫ್ ಆಗಿದ್ದ ಎರಡು ಸ್ವಿಚ್‌ಗಳನ್ನು ಆನ್ ಮಾಡಿದರೂ, ಒಂದು ಎಂಜಿನ್‌ಗೆ ಅಲ್ಪ ಪ್ರಮಾಣದಲ್ಲಿ ಇಂಧನ ಸಾಗಿದೆ. ಇನ್ನೊಂದಕ್ಕೆ ಸಂಪೂರ್ಣವಾಗಿ ಇಂಧನ ಸರಬರಾಜಾಗಿಲ್ಲ. 30 ಸೆಕೆಂಡುಗಳ ಒಳಗೆ ವಿಮಾನವು ಪತನಗೊಂಡಿದೆ. ದುರಂತದ ಸ್ಥಳದಲ್ಲಿ ಸಿಕ್ಕ ಅವಶೇಷಗಳನ್ನು ಸಂಗ್ರಹಿಸಿ, ಅವುಗಳನ್ನು ಮರು ಜೋಡಿಸಿ ತನಿಖೆ ಮಾಡಲಾಗಿದೆ. ಇಂಧನ ಪೂರೈಕೆ ಆಗದೇ ಇರುವುದು ದುರಂತಕ್ಕೆ ಪ್ರಮುಖ ಕಾರಣ ಎಂದು ತಿಳಿಸಿದೆ. ಎಎಐಬಿ ಪ್ರಾಥಮಿಕವಾಗಿ ಸಿಕ್ಕ ಎಲ್ಲಾ ಆಧಾರಗಳ ಮೇಲೆ ಹೆಚ್ಚುವರಿ ವಿವರಗಳನ್ನು ಸಂಗ್ರಹಿಸುತ್ತಿದೆ. ಇಎಎಫ್‌ಆರ್‌ನಿಂದ ಡೌನ್‌ಲೋಡ್ ಮಾಡಲಾದ ದತ್ತಾಂಶವನ್ನು ವಿಶ್ಲೇಷಿಸಲಾಗುತ್ತಿದೆ. ತನಿಖೆಯ ಈ ಹಂತದಲ್ಲಿ, B787-8 ಮತ್ತು/ಅಥವಾ GE GEnx-1B ಎಂಜಿನ್ ನಿರ್ವಾಹಕರು ಮತ್ತು ತಯಾರಕರ ಮೇಲೆ ಯಾವುದೇ ಕ್ರಮ ಜರುಗಿಸುವ ಅಗತ್ಯವಿಲ್ಲ ಎಂದು ಹೇಳಿದೆ. ವಿವಿಧ ಸಾಕ್ಷಿಗಳು ಮತ್ತು ಬದುಕುಳಿದ ಪ್ರಯಾಣಿಕರ ಹೇಳಿಕೆಗಳನ್ನು ತನಿಖಾಧಿಕಾರಿಗಳು ದಾಖಲಿಸಿದ್ದಾರೆ. ವಿಮಾನ ಸಿಬ್ಬಂದಿ ಮತ್ತು ಪ್ರಯಾಣಿಕರ ಮರಣೋತ್ತರ ಪರೀಕ್ಷೆಯ ವರದಿಗಳ ಸಂಪೂರ್ಣ ವಿಶ್ಲೇಷಣೆ ನಡೆಸಲಾಗುತ್ತದೆ. ತನಿಖಾ ತಂಡವು ಪಾಲುದಾರರಿಂದ ಪಡೆಯಲಾಗುತ್ತಿರುವ ಹೆಚ್ಚುವರಿ ಪುರಾವೆಗಳು, ದಾಖಲೆಗಳು ಮತ್ತು ಮಾಹಿತಿಯನ್ನು ಪರಿಶೀಲಿಸುತ್ತದೆ. ವಿಮಾನದಲ್ಲಿ 230 ಪ್ರಯಾಣಿಕರಿದ್ದರು. ಅದರಲ್ಲಿ 15 ಪ್ರಯಾಣಿಕರು ಬಿಸಿನೆಸ್ ಕ್ಲಾಸ್‌ನಲ್ಲಿದ್ದರು. ಇಬ್ಬರು ಮಕ್ಕಳು ಸೇರಿ 215 ಪ್ರಯಾಣಿಕರು ಎಕಾನಮಿ ಕ್ಲಾಸ್‌ನಲ್ಲಿದ್ದರು. ಮುಖ್ಯ ಪೈಲಟ್ 15,638 ಗಂಟೆಗಳಿಗಿಂತ ಹೆಚ್ಚು ಹಾರಾಟದ ಅನುಭವವನ್ನು ಹೊಂದಿದ್ದರೆ, ಎರಡನೇ ಪೈಲಟ್ 3,403 ಗಂಟೆಗಳಿಗಿಂತ ಹೆಚ್ಚು ಹಾರಾಟದ ಅನುಭವವನ್ನು ಹೊಂದಿದ್ದರು. ಜೂ.12ರಂದು 229 ಪ್ರಯಾಣಿಕರು, 12 ಸಿಬ್ಬಂದಿ ಒಳಗೊಂಡ ಏರ್ ಇಂಡಿಯಾದ ಬೋಯಿಂಗ್ ಡ್ರೀಮ್‌ಲೈನರ್ ಅಹಮದಾಬಾದ್‌ನಿಂದ ಲಂಡನ್‌ನ ಗ್ಯಾಟ್ವಿಕ್‌ಗೆ ತೆರಳುತ್ತಿತ್ತು. ಟೇಕ್ ಆಫ್ ಆದ 38 ಸೆಕೆಂಡ್‌ಗಳಲ್ಲಿ ಪತನಕ್ಕೀಡಾಗಿತ್ತು. ವಿಮಾನದಲ್ಲಿದ್ದ 242 ಪ್ರಯಾಣಿಕರ ಪೈಕಿ ಓರ್ವ ವ್ಯಕ್ತಿ ಬಚಾವಾಗಿ, ಉಳಿದವರು ಸಾವಿಗೀಡಾಗಿದ್ದರು.

1. ಏರ್ ಇಂಡಿಯಾ ವಿಮಾನ ದುರಂತದಲ್ಲಿ 270ಕ್ಕೂ ಜನರು ಸಾವು
2. ಬೋಯಿಂಗ್ 787-8 ಡ್ರೀಮ್‌ಲೈನರ್ ವಿಮಾನವು ಟೇಕ್ ಆಫ್ ಆದ ಕೆಲವೇ ಕ್ಷಣಗಳಲ್ಲಿ ಪತನ
3. 241 ಜನರಲ್ಲಿ ಕೇವಲ ಒಬ್ಬರು ಮಾತ್ರ ಬದುಕುಳಿದಿದ್ದರು ತನಿಖೆ ಪೂರ್ಣಗೊಂಡ ನಂತರವಷ್ಟೇ ಸತ್ಯಾಂಶ ತಿಳಿಯಲಿದೆ.



**ಇಂಜಿನ್‌ಗೆ ಇಂಧನ ಪೂರೈಕೆ ಆಗದಿರುವುದೇ ವಿಮಾನ ದುರಂತಕ್ಕೆ ಕಾರಣ**


**ತನಿಖಾ ವರದಿಯಲ್ಲಿ ಅಚ್ಚರಿಯ ಅಂಶ ಬಯಲು**



### ಎರಡೂ ಇಂಜಿನ್‌ಗಳಿಗೆ ಇಂಧನ ಪೂರೈಕೆ ಸ್ಥಗಿತ

ಟೇಕ್ ಆಫ್ ಆದ 3 ಸೆಕೆಂಡ್‌ಗಳ ನಂತರ, ಎರಡೂ ಇಂಜಿನ್‌ಗಳ ಫ್ಯೂಯಲ್ ಕಂಟ್ರೋಲ್ ಸ್ವಿಚ್‌ಗಳು ರನ್ ನಿಂದ ಕಟ್‌ಆಫ್ ಗೆ ಬದಲಾದವು. ಇದರಿಂದಾಗಿ ಥ್ರಸ್ಟ್ ಇದ್ದಕ್ಕಿದ್ದಂತೆ ಕಡಿಮೆಯಾಯಿತು. ಒಂದು ಪೈಲಟ್ ನೀವು ಏಕೆ ಕಟ್ ಆಫ್ ಮಾಡಿದ್ರಿ... ಎಂದು ಕೇಳುವುದು ಕೇಳಿಸುತ್ತದೆ. ಅದಕ್ಕೆ ಇನ್ನೊಬ್ಬ ಪೈಲಟ್ ನಾನು ಮಾಡಿಲ್ಲ ಎಂದು ಉತ್ತರಿಸುತ್ತಾರೆ. ಇದರಿಂದ ತಾಂತ್ರಿಕ ದೋಷ ಅಥವಾ ಆಕಸ್ಮಿಕವಾಗಿ ಸ್ವಿಚ್ ಆಫ್ ಆಗಿರಬಹುದು ಎಂದು ಶಂಕಿಸಲಾಗಿದೆ.


### ಒಂದು ಇಂಜಿನ್ ಮರುಪ್ರಾರಂಭಿಸಲು ವಿಫಲ



ಫ್ಲೈಟ್ ಡೇಟಾ ಪ್ರಕಾರ, ಇಂಜಿನ್ 1 ಅನ್ನು ಸ್ವಯಂಚಾಲಿತವಾಗಿ ಮರುಪ್ರಾರಂಭಿಸಲು ಪ್ರಯತ್ನಿಸಿ, ಅದು ಯಶಸ್ವಿಯಾಯಿತು. ಆದರೆ ಇಂಜಿನ್ 2 ಅನ್ನು ಮರುಪ್ರಾರಂಭಿಸಲು ಸಾಧ್ಯವಾಗಲಿಲ್ಲ.ರಾಮ್ ಏರ್ ಟರ್ಬೈನ್ (RAT) ಅನ್ನು ತುರ್ತು ವಿದ್ಯುತ್ ಮೂಲವಾಗಿ ಬಳಸಲಾಗುತ್ತದೆ. ಇದು ಟೇಕ್ ಆಫ್ ಆದ ತಕ್ಷಣವೇ ಕಾರ್ಯನಿರ್ವಹಿಸಲು ಪ್ರಾರಂಭಿಸಿತು. ಇದರಿಂದ ಅಗತ್ಯ ಸಿಸ್ಟಮ್‌ಗಳಿಗೆ ವಿದ್ಯುತ್ ಸಂಪೂರ್ಣವಾಗಿ ಸ್ಥಗಿತಗೊಂಡಿದೆ ಎಂದು ತಿಳಿದುಬರುತ್ತದೆ. RAT ಅಂದರೆ ವಿಮಾನದಲ್ಲಿನ ಎಲೆಕ್ಟ್ರಿಕಲ್ ಸಿಸ್ಟಮ್ ಕೈಕೊಟ್ಟಾಗ ಉಪಯೋಗಿಸುವ ಒಂದು ಸಾಧನ.

### ಅಪಘಾತದ ಸಂಪೂರ್ಣ ಕಥೆ ಹೇಳುತ್ತೆ ಈ ಫೋಟೋ

ಥ್ರಸ್ಟ್ ಲಿವರ್‌ಗಳನ್ನು ಥ್ರೊಟಲ್ ಲಿವರ್‌ಗಳು ಎಂದೂ ಕರೆಯುತ್ತಾರೆ. ಇವುಗಳನ್ನು ವಿಮಾನದ ಕಾಕ್‌ಪಿಟ್‌ನಲ್ಲಿ ಸ್ಥಾಪಿಸಲಾಗುತ್ತದೆ. ಎಂಜಿನ್‌ಗೆ ನೀಡಲಾದ ಇಂಧನದ ಪ್ರಮಾಣವನ್ನು ನಿಯಂತ್ರಿಸಲು ಪೈಲಟ್ ಇವುಗಳನ್ನು ಬಳಸುತ್ತಾರೆ. ಇದು ಎಂಜಿನ್‌ನ ಥ್ರಸ್ಟ್ ಔಟ್‌ಪುಟ್ ಅನ್ನು ನಿರ್ಧರಿಸುತ್ತದೆ. ಚಿತ್ರವು ಎರಡು ಭಾಗಗಳಲ್ಲಿದೆ. ಎಡಭಾಗದಲ್ಲಿರುವ ಹಾನಿಗೊಳಗಾದ ವಿಮಾನ ಕಾಕ್‌ಪಿಟ್‌ನಲ್ಲಿ ಥ್ರಸ್ಟ್ ಲಿವರ್‌ಗಳು ಮತ್ತು ಇಂಧನ ನಿಯಂತ್ರಣಗಳು ಗೋಚರಿಸುತ್ತವೆ. ವಿಮಾನ ಅಪಘಾತದಲ್ಲಿ ಥ್ರಸ್ಟ್ ಲಿವರ್‌ಗಳು ಸಂಪೂರ್ಣವಾಗಿ ನಾಶವಾಗಿವೆ. ಇದು ಗಂಭೀರ ಹಾನಿಯನ್ನು ಸೂಚಿಸುತ್ತದೆ. ಈ ಚಿತ್ರದಿಂದ, ಏರ್ ಇಂಡಿಯಾ ವಿಮಾನ ಹೇಗೆ ಅಪಘಾತಕ್ಕೀಡಾಯಿತು ಎಂಬುದನ್ನು ಅರ್ಥಮಾಡಿಕೊಳ್ಳಬಹುದು. ಕಟ್‌ಆಫ್ ಸ್ವಿಚ್ ಆಫ್ ಮಾಡಲಾಗಿದೆ ಎಂದು ವರದಿಯು ಸೂಚಿಸುತ್ತದೆ. ಇದರಿಂದಾಗಿ ಇಂಧನ ಪೂರೈಕೆ ನಿಂತಿದೆ.



## ವಿರೋಧದ ನಡುವೆಯೂ ಮಗನನ್ನು ಕಾಪಾಡಲು ಅಖಾಡಕ್ಕಿಳಿದ ಬಿಎಸ್‌ವೈ!

• ಉದಯವಾಹಿನಿ, ಬೆಂಗಳೂರು

ಮಾಜಿ ಸಿಎಂ ಬಿಎಸ್ ಯಡಿಯೂರಪ್ಪ ಅವರು ಇದೀಗ ಪೂರ್ಣ ಪ್ರಮಾಣದಲ್ಲಿ ಅಖಾಡಕ್ಕಿಳಿಯುತ್ತಿದ್ದಾರೆ. ಮಗನ ವಿರುದ್ಧ ಹಾಗೂ ಕುಟುಂಬದ ವಿರುದ್ಧ ನಾನಾ ರೀತಿಯ ಗಂಭೀರ ಆರೋಪಗಳ ಸುರಿಮಳೆಯ ನಡುವೆಯೂ ಬಿಎಸ್‌ವೈ ಪುತ್ರನನ್ನು ಕಾಪಾಡಲು ಪಣ ತೊಟ್ಟಿದ್ದಾರೆ. ಇದರ ಭಾಗ ಎಂಬಂತೆ ರಾಜ್ಯ ಬಿಜೆಪಿ ಕಚೇರಿಗೆ ಯಡಿಯೂರಪ್ಪ ನಿರಂತವಾಗಿ ಭೇಟಿ ನೀಡುತ್ತಿದ್ದು, ತನ್ನ ರಾಜಕೀಯ ಇರುವಿಕೆಯನ್ನು ತೋರಿಸುತ್ತಿದ್ದಾರೆ. ಬಿಜೆಪಿ ಬಣ ರಾಜಕೀಯ ದಿನದಿಂದ ದಿನಕ್ಕೆ ತೀವ್ರತೆಯನ್ನು ಪಡೆದುಕೊಳ್ಳುತ್ತಿದೆ. ಬಿವೈ ವಿಜಯೇಂದ್ರ ಅವರನ್ನು ಅಧ್ಯಕ್ಷ ಸ್ಥಾನದಿಂದ ಹೇಗಾದರು ಮಾಡಿ ಇಳಿಸಲೇಬೇಕು ಎಂದು ವಿರೋಧಿ ಬಣ ಪಣತೊಟ್ಟಿದೆ. ದಾವಣಗೆರೆಯಲ್ಲಿ ಜಿಎಂ ಸಿದ್ದೇಶ್ವರ ಅವರ ಹುಟ್ಟುಹಬ್ಬದ ಸಂದರ್ಭದಲ್ಲಿ ರೆಬೆಲ್ ಬಣದ ನಾಯಕರು ನೀಡಿದ ಹೇಳಿಕೆಗಳೇ ಇದಕ್ಕೆ ಸಾಕ್ಷಿಯಾಗಿವೆ. ಬಿಎಸ್‌ವೈ ವಿರುದ್ಧ ನೇರವಾಗಿ ಮಾಜಿ ಶಾಸಕ ಅರವಿಂದ ಲಿಂಬಾವಳಿ ತಿರುಗಿ ಬಿದ್ದಿದ್ದಾರೆ. ಕೆಜೆಪಿಗೆ ಹೋಗಿದ್ದ ಯಡಿಯೂರಪ್ಪ ಮರಳಿ ಬಿಜೆಪಿಗೆ ಬಂದಿದ್ಯಾಕೆ ಎಂದು ನೇರವಾಗಿಯೇ ಪ್ರಶ್ನಿಸಿದ್ದಾರೆ.

## ಗ್ಯಾರಂಟಿ ಯೋಜನೆಯಿಂದ ಮಹಿಳಾ ಸಬಲೀಕರಣ: ಸಿಎಂ ಸಿದ್ದರಾಮಯ್ಯ

• ಉದಯವಾಹಿನಿ, ಬೆಂಗಳೂರು

'ಮಹಿಳಾ ಸಬಲೀಕರಣಕ್ಕೆ ಶಕ್ತಿ, ಗೃಹಲಕ್ಷ್ಮಿಯಂತಹ ಯೋಜನೆಗಳು ಸಹಕಾರಿಯಾಗಿವೆ. ಸಮಸಮಾಜ ನಿರ್ಮಾಣ ಸಹಿಸದ ಕೆಲವರು, ಗ್ಯಾರಂಟಿ ಯೋಜನೆಗಳಿಂದ ಜನರು ಸೋಮಾರಿಗಳಾಗುತ್ತಿದ್ದಾರೆಂದು ಟೀಕಿಸುತ್ತಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಕರ್ನಾಟಕ ರಾಜ್ಯ ಅಹಲ್ಯಾಬಾಯಿ ಹೋಳ್ಕರ್ ಮಹಿಳಾ ಸಾಂಸ್ಕೃತಿಕ ಪರಿಷತ್ತು ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಅಹಲ್ಯಾಬಾಯಿ ಹೋಳ್ಕರ್ ಅವರ 300ನೇ ಜನ್ಮ ದಿನಾಚರಣೆ ಹಾಗೂ ಸಂಘದ ರಜತ ಮಹೋತ್ಸವ ಸಮಾರಂಭ ಉದ್ಘಾಟಿಸಿ, ಮಾತನಾಡಿದರು. 'ಹೆಣ್ಣು ಮಕ್ಕಳು ಶಿಕ್ಷಿತರಾಗಿ, ಆರ್ಥಿಕ ಮತ್ತು ಸಾಮಾಜಿಕವಾಗಿ ಸಬಲರಾಗಬೇಕು. ಈ ಕಾರಣಕ್ಕೆ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ, ಪ್ರತಿ ತಿಂಗಳು ರೂ.2 ಸಾವಿರ ಒದಗಿಸಲಾಗುತ್ತಿದೆ.

ಬಸ್‌ಗಳಲ್ಲಿ ಓಡಾಡುವುದರಿಂದ, ಉಚಿತ ಅಕ್ಕಿಯಿಂದ ಜನರು ಸೋಮಾರಿಗಳಾಗುತ್ತಾರಾ? ಅನುಭವದ ಆಧಾರದ ಮೇಲೆ ಉಚಿತ ಅಕ್ಕಿ ನೀಡುವ ಯೋಜನೆಯನ್ನು ಜಾರಿ ಮಾಡಿದ್ದೇನೆ. ಗೃಹಲಕ್ಷ್ಮಿ ಯೋಜನೆಯಡಿ 1.23 ಕೋಟಿ ಕುಟುಂಬಗಳ ಯಜಮಾನಿಗೆ ಪ್ರತಿ ತಿಂಗಳು ತಲಾ ರೂ. 2 ಸಾವಿರ ನೀಡುತ್ತಿದ್ದೇವೆ. ಇದು ಮಹಿಳಾ ಸಬಲೀಕರಣಕ್ಕೆ ಸಹಕಾರಿಯಾಗಿದೆ' ಎಂದರು.

## ಸೆ.1 ರಿಂದ ಬಸವ ಸಂಸ್ಕೃತಿ ಅಭಿಯಾನ: ಎಂ.ಬಿ.ಪಾಟೀಲ ಹೇಳಿಕೆ

• ಉದಯವಾಹಿನಿ, ಬೆಂಗಳೂರು

ಬಸವಣ್ಣನವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ರಾಜ್ಯ ಸರ್ಕಾರವು ಘೋಷಿಸಿ ಒಂದು ವರ್ಷವಾಗುತ್ತಿದ್ದು, ಅದನ್ನು ಸಂಭ್ರಮಿಸಲು ಪ್ರತಿ ಜಿಲ್ಲೆಯಲ್ಲಿ ಬಸವ ಸಂಸ್ಕೃತಿ ಅಭಿಯಾನ ನಡೆಸುತ್ತೇವೆ ಎಂದು ಲಿಂಗಾಯತ ಮಠಾಧಿಪತಿಗಳ ಒಕ್ಕೂಟವು ನಿರ್ಧರಿಸಿದೆ' ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅವರು ಹೇಳಿದರು. ಅವರ ಮನೆಯಲ್ಲಿ ಒಕ್ಕೂಟದ ಸ್ವಾಮೀಜಿಗಳು ಶನಿವಾರ ಸಭೆ ನಡೆಸಿದರು. ಸಭೆ ನಂತರ ಮಾತನಾಡಿದ ಪಾಟೀಲ ಅವರು, 'ಒಂದು ತಿಂಗಳು ಈ ಅಭಿಯಾನ ನಡೆಸಬೇಕು ಮಠಾಧಿಪತಿಗಳು ನಿರ್ಧರಿಸಿದರು. ಬಸವಣ್ಣನವರ ಜನ್ಮಸ್ಥಳವಾದ ಬಸವನ ಬಾಗೇವಾಡಿಯಲ್ಲಿ ಸೆಪ್ಟೆಂಬರ್ 1ರಂದು ಅಭಿಯಾನಕ್ಕೆ ಚಾಲನೆ ನೀಡಲಾಗುತ್ತದೆ' ಎಂದರು. 'ಅಭಿಯಾನದ ಭಾಗವಾಗಿ ಬಸವರಥವು ಎಲ್ಲಾ ಪ್ರಮುಖ ಜಿಲ್ಲೆಗಳಲ್ಲೂ ಸಂಚರಿಸಿ ಅಕ್ಟೋಬರ್ 1ರಂದು ಬೆಂಗಳೂರು ತಲುಪಲಿದೆ. ಅಂದು ಲಕ್ಷಾಂತರ ಲಿಂಗಾಯತ ಅನುಯಾಯಿಗಳನ್ನು ಸೇರಿಸಿ ಸಮಾರಂಭ ನಡೆಸಲಾಗುವುದು ಎಂದರು.

## ನಾಯಿಗಳ ಹೆಸರಿನಲ್ಲೂ ಲೂಟಿಗೆ ಯೋಜನೆ: ಆರ್.ಅಶೋಕ ಟೀಕೆ

• ಉದಯವಾಹಿನಿ, ಬೆಂಗಳೂರು

'ಬಿಬಿಎಂಪಿ ಮೂಲಕ ಬೀದಿನಾಯಿಗಳಿಗೆ ಬಿರಿಯಾನಿ ನೀಡುವ ಯೋಜನೆಯ ಹಿಂದೆ ಇರುವುದು ತೆರಿಗೆ ಹಣ ಲೂಟಿ ಹೊಡೆಯುವ ಉದ್ದೇಶ ಮಾತ್ರ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕಿಸಿದರು. ಬೀದಿನಾಯಿಗಳ ಉಪಟಳದಿಂದ ಮಕ್ಕಳಿಗೆ ತೊಂದರೆಯಾಗುತ್ತಿದೆ. ಬೀದಿ ನಾಯಿಗಳ ಸಂಖ್ಯೆ ಕಡಿಮೆ ಮಾಡಬೇಕು ಎಂಬ ಉದ್ದೇಶದ ಯೋಜನೆ ಬಿಬಿಎಂಪಿಯಲ್ಲಿದೆ. ಅದನ್ನು ಮೊದಲು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲಿ ಎಂದರು. ಬೀದಿನಾಯಿಗಳ ಬಗ್ಗೆ ಇವರಿಗೆ ಕಾಳಜಿ ಪ್ರಾಮಾಣಿಕವೇ ಆಗಿದ್ದರೆ, ಅವುಗಳಿಗಾಗಿ ಒಂದು ಆಸ್ಪತ್ರೆ ನಿರ್ಮಿಸಬಹುದಿತ್ತು. ಬೀದಿ ಬದಿಯಲ್ಲಿ ಬಿದ್ದಿರುವ ನಾಯಿ ಅಥವಾ ಅಪಘಾತಕ್ಕೊಳಗಾದ ನಾಯಿಗಳನ್ನು ತಂದು ಚಿಕಿತ್ಸೆ ನೀಡಬಹುದಿತ್ತು ಎಂದರು.

## ಶಾಸಕರ ಜೊತೆ ಸುರ್ಜೇವಾಲ ಸಭೆಯ ಬೆನ್ನಲ್ಲೇ ಸಚಿವರಿಗೆ ಟೆನ್ಷನ್!

• ಉದಯವಾಹಿನಿ, ಬೆಂಗಳೂರು

**ಶಾಸಕರ ಜೊತೆ ಒನ್ ಟು ಒನ್ ಮಾತುಕತೆ**

ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಶಾಸಕರ ಜೊತೆ ಒನ್ ಟು ಒನ್ ಸಭೆಗಳನ್ನು ನಡೆಸುತ್ತಿದ್ದಾರೆ. ಈಗಾಗಲೇ ಎರಡು ಸುತ್ತಿನ ಸಭೆಗಳು ನಡೆದಿವೆ. ಇನ್ನು ಒಂದು ಸುತ್ತಿನ ಸಭೆ ನಡೆಯಬೇಕಾಗಿದೆ. ಈ ನಡುವೆ ಶಾಸಕರು ಕೆಲವು ಸಚಿವರ ವಿರುದ್ಧ ದೂರುಗಳನ್ನು ನೀಡಿದ್ದಾರೆ. ಇದರಿಂದ ಸಚಿವರಿಗೆ ಟೆನ್ಷನ್ ಶುರುವಾಗಿದ್ದು, ಸಂಪುಟ ಪುನಾರಚನೆಯ ಸಂದರ್ಭದಲ್ಲಿ ಇದು ಹಿನ್ನಡೆ ಆಗುವ ಆತಂಕ ಅವರನ್ನು ಕಾಡುತ್ತಿದೆ.

ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಎರಡು ವರ್ಷಗಳು ತುಂಬಿವೆ. ಇಂತಹ ಸಂದರ್ಭದಲ್ಲಿ ಸಚಿವ ಸಂಪುಟ ಪುನಾರಚನೆ ಆಗಬೇಕು ಎಂಬ ಕೂಗು ಕೇಳಿಬರುತ್ತಿದೆ. ಸಾಕಷ್ಟು ಶಾಸಕರು ಸಂಪುಟಕ್ಕೆ ಸೇರ್ಪಡೆಯಾಗಲು ಆಕಾಂಕ್ಷಿಗಳಾಗಿದ್ದಾರೆ. ಇಂತಹ ಸಂದರ್ಭದಲ್ಲಿ ಸಚಿವರ ವಿರುದ್ಧ ಉಸ್ತುವಾರಿ ಮುಂದೆ ದೂರಿನ ಮಹಾಪೂರ ಹರಿದುಬಂದಿದೆ. ದಾವಣಗೆರೆ, ಬಳ್ಳಾರಿ, ದಕ್ಷಿಣ ಕನ್ನಡ, ಕೋಲಾರ ಸೇರಿದಂತೆ ಕೆಲವು ಜಿಲ್ಲೆಗಳ ಶಾಸಕರು ಸಚಿವರ ಕಾರ್ಯವೈಖರಿಯ ಬಗ್ಗೆ ತಮ್ಮ ಅಸಮಾಧಾನ ಹೊರಹಾಕಿದ್ದಾರೆ. ಇದನ್ನು ಸುರ್ಜೇವಾಲ ಅವರು ಲಿಖಿತ ರೂಪದಲ್ಲಿ ದಾಖಲು ಮಾಡಿಕೊಂಡಿದ್ದಾರೆ. ಮತ್ತೆ ಕೆಲವು ಶಾಸಕರು ಮಾಡಿರುವ ಆರೋಪಗಳನ್ನು ಲಿಖಿತ ರೂಪದಲ್ಲಿ ನೀಡುವಂತೆ ಸೂಚನೆ ನೀಡಿದ್ದಾರೆ.



**ಸಚಿವರಿಗೆ ಟೆನ್ಷನ್!:** ರಾಜ್ಯದಲ್ಲಿ ಸಚಿವ ಸಂಪುಟ ಪುನಾರಚನೆಯ ಚರ್ಚೆಗಳು ಬಹಳ ನಡೆಯುತ್ತಿವೆ. ಕೆಲವು ಸಚಿವರನ್ನು ಕೈಬಿಡಲು ಹೈಕಮಾಂಡ್ ನಾಯಕರು ಮುಂದಾಗಿದ್ದಾರೆ. ಎಲ್ಲವೂ ಅಂದುಕೊಂಡಂತೆ ನಡೆದರೆ ಇನ್ನೆರಡು ತಿಂಗಳಲ್ಲಿ ಈ ಪ್ರಕ್ರಿಯೆಗಳಿಗೆ ಹೈಕಮಾಂಡ್ ಚಾಲನೆ ನೀಡಬಹುದು. ಆದರೆ ಸಂಪುಟ ಪುನಾರಚನೆ ಸಂದರ್ಭದಲ್ಲಿ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಹೈಕಮಾಂಡ್‌ಗೆ ಕೊಡುವ ವರದಿ ಮಹತ್ವ ಪಡೆದುಕೊಂಡಿದೆ.

ಕಾಂಗ್ರೆಸ್ ಎಲ್ಲಾ ಶಾಸಕರ ಜೊತೆಗೆ ಒನ್ ಟು ಒನ್ ಮಾತುಕತೆ ನಡೆಸಲಿರುವ ಸುರ್ಜೇವಾಲ ಅವರು ಬಳಿಕ ಸಿಎಂ ಸಿದ್ದರಾಮಯ್ಯ ಹಾಗೂ ಡಿಕೆ ಶಿವಕುಮಾರ್ ಅವರ ಜೊತೆಗೂ ಮಾತುಕತೆ ನಡೆಸಲಿದ್ದಾರೆ. ಶಾಸಕರ ಅಭಿಪ್ರಾಯಗಳನ್ನು ಅವರ ಜೊತೆಗೂ ಹಂಚಿಕೊಳ್ಳಲಿದ್ದಾರೆ. ಅಲ್ಲದೆ, ಕೆಲವು ಶಾಸಕರು ಮಾಡಿರುವ ನಿರ್ದಿಷ್ಟ ಆರೋಪಗಳನ್ನು ಹೈಕಮಾಂಡ್ ಗಮನಕ್ಕೆ ತರುವ ಸಾಧ್ಯತೆ ಇದೆ. ಹೀಗಾಗಿ ಸಚಿವರಿಗೆ ಆತಂಕ ಶುರುವಾಗಿದೆ. ಶಾಸಕರ ಸಚಿವರ ಕಾರ್ಯವೈಖರಿಯ ಬಗ್ಗೆ ಸುರ್ಜೇವಾಲ ಬಳಿ ದೂರು ನೀಡಿರುವುದರಿಂದ ಸಂಪುಟ ಪುನಾರಚನೆಯ ವೇಳೆ ಇದು ಎಫೆಕ್ಟ್ ಆಗಲಿದ್ಯಾ ಎಂಬ ಆತಂಕ ಶುರುವಾಗಿದೆ. ಹೀಗಾಗಿ ಕೆಲವು ಸಚಿವರುಗಳು ಕೂಡಾ ಸುರ್ಜೇವಾಲ ಅವರನ್ನು ಪ್ರತ್ಯೇಕವಾಗಿ ಭೇಟಿ ಮಾಡುವ ಸಾಧ್ಯತೆ ಇದೆ. ಕಳೆದ ವಾರ ಸಚಿವ ಈಶ್ವರ್ ಖಂಡ್ರೆ ಅವರು ಸುರ್ಜೇವಾಲ ಅವರನ್ನು ಭೇಟಿ ಮಾಡಿದ್ದರು. ಪ್ರತ್ಯೇಕವಾಗಿ ಮಾತುಕತೆ ನಡೆಸಿದ್ದರು. ಜಿಲ್ಲೆಯಲ್ಲಿ ನಡೆಯುತ್ತಿರುವ ರಾಜಕೀಯ ಬೆಳವಣಿಗೆಗಳ ಬಗ್ಗೆ ಮಾಹಿತಿ ನೀಡಿದ್ದರು. ಅವರು ವಿರುದ್ಧದ ಆರೋಪಗಳಿಗೆ ಸ್ಪಷ್ಟನೆ ನೀಡಿದ್ದರು.

## ನಾಯಕತ್ವ ಬದಲಾವಣೆ, ಡಿ.ಕೆ ಶಿವಕುಮಾರ್ ಆತುರದಲ್ಲೂ ಇಲ್ಲ, ಆತಂಕದಲ್ಲೂ ಇಲ್ಲ

### ● ಶಿವಕುಮಾರ್ ಪಕ್ಷದ ಪ್ರಾಮಾಣಿಕ ಕಾರ್ಯಕರ್ತ, ಶಾಸಕರ ಬಲಾಬಲ ಪ್ರದರ್ಶಿಸುವ ವ್ಯಕ್ತಿತ್ವ ಅವರದಲ್ಲ

• ಉದಯವಾಹಿನಿ, ಬೆಂಗಳೂರು

'ಕೆಪಿಸಿಸಿ ಅಧ್ಯಕ್ಷರು ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಆತುರದಲ್ಲೂ ಇಲ್ಲ, ಆತಂಕದಲ್ಲೂ ಇಲ್ಲ'' ಎಂದು ಬಮೂಲ್ ಅಧ್ಯಕ್ಷರಾದ ಡಿ.ಕೆ. ಸುರೇಶ್ ಅವರು ಸ್ಪಷ್ಟಪಡಿಸಿದರು.

ಸದಾಶಿವನಗರ ನಿವಾಸದಲ್ಲಿ ಶನಿವಾರ ಮಾಧ್ಯಮಗಳ ಪ್ರಶ್ನೆಗಳಿಗೆ ಸುರೇಶ್ ಅವರು ಪ್ರತಿಕ್ರಿಯೆ ನೀಡಿದರು. ನಾಯಕತ್ವ ಬದಲಾವಣೆ ಬಗ್ಗೆ ಮಾತನಾಡಬಾರದು ಎಂದು ಹೈಕಮಾಂಡ್ ನಿರ್ದೇಶನವಿದ್ದರೂ ಸಿಎಂ ಮೂರು ಬಾರಿ ನಾನೇ 5 ವರ್ಷ ಸಿಎಂ ಎಂದು ಹೇಳಿರುವ ಬಗ್ಗೆ ಕೇಳಿದಾಗ, ಕಾಂಗ್ರೆಸ್ ಪಕ್ಷದಲ್ಲಿ ಯಾವುದೇ ಜಗಳವಿಲ್ಲ. ಕಾಂಗ್ರೆಸ್ ಪಕ್ಷದ ವರಿಷ್ಠರು, ಮುಖ್ಯಮಂತ್ರಿಗಳು, ಅಧ್ಯಕ್ಷರು ಹಾಗೂ ಡಿಸಿಎಂ ಆಗಿರುವ ಡಿ.ಕೆ. ಶಿವಕುಮಾರ್ ಅವರು ಕೂಡ ಈಗಾಗಲೇ ಈ ವಿಚಾರವಾಗಿ ಸ್ಪಷ್ಟನೆ ನೀಡಿದ್ದು, ಸಿದ್ದರಾಮಯ್ಯ ಅವರು ನಾಯಕತ್ವದಲ್ಲಿ ಮುಂದುವರಿಯಲಿದ್ದಾರೆ ಎಂದು ಹೇಳಿದ್ದಾರೆ'' ಎಂದರು.

**ಪಕ್ಷದ ಸೂಚನೆಯಂತೆ ಡಿಕೆಶಿ ಕೆಲಸ**

ಆದರೂ ಮಾಧ್ಯಮಗಳಿಗೆ ಯಾಕೆ ಗೊಂದಲವಿದೆ ಎಂದು ಗೊತ್ತಿಲ್ಲ. ಶಿವಕುಮಾರ್ ಅವರು ಪಕ್ಷ ಕೊಟ್ಟಿರುವ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ಪಕ್ಷದ ಕಾರ್ಯಕರ್ತನಾಗಿ ಮುನ್ನಡೆಸುತ್ತಿದ್ದಾರೆ. ಪಕ್ಷದ ಸೂಚನೆಯಂತೆ ಅವರು ಕೆಲಸ ಮಾಡುತ್ತಿದ್ದಾರೆ. ಇದರ ಹೊರತಾಗಿ ಹೆಚ್ಚಿನ ವಿಚಾರ ಏನೂ ಇಲ್ಲ. ಸಧ್ಯಕ್ಕೆ ಮುಖ್ಯಮಂತ್ರಿ ಹುದ್ದೆ ಖಾಲಿ ಇಲ್ಲ. ಪದೇ ಪದೇ ಈ ವಿಚಾರ ಯಾಕೆ ಚರ್ಚೆಯಾಗುತ್ತಿದೆ ಗೊತ್ತಿಲ್ಲ ಎಂದರು.

ಇದೇ ನನ್ನ ಕೊನೆ ಚುನಾವಣೆ ಎಂದಿದ್ದ ಸಿದ್ದರಾಮಯ್ಯ ಅವರು ಈಗ 2028ಕ್ಕೂ ನನ್ನದೇ ನೇತೃತ್ವದಲ್ಲಿ ಚುನಾವಣೆ ಎಂದು ಹೇಳಿರುವ ಬಗ್ಗೆ ಕೇಳಿದಾಗ, ಸಿದ್ದರಾಮಯ್ಯ ಅವರು ಹಿರಿಯ ನಾಯಕರು. ರಾಜಕೀಯದಲ್ಲಿ ನಿವೃತ್ತಿ ಇಲ್ಲ. ರಾಜಕೀಯ ಇಚ್ಛಾಶಕ್ತಿ ಇರಬೇಕು. ಮುಖ್ಯಮಂತ್ರಿಗಳಿಗೆ ಇಚ್ಛಾಶಕ್ತಿ ಇದೆ. ಹೀಗಾಗಿ ಅವರು ಕೆಲವು ವಿಚಾರವನ್ನು ನಿಮ್ಮ ಜೊತೆ ಹಂಚಿಕೊಂಡಿರಬಹುದು ಎಂದು ತಿಳಿಸಿದರು.



### ಶಿವಕುಮಾರ್ ಪಕ್ಷದ ಪ್ರಾಮಾಣಿಕ ಕಾರ್ಯಕರ್ತ

ಡಿ.ಕೆ. ಶಿವಕುಮಾರ್ ಅವರಿಗೆ ಹೆಚ್ಚಿನ ಶಾಸಕರ ಬೆಂಬಲ ಇಲ್ಲ ಎಂಬ ಹೇಳಿಕೆ ಬಗ್ಗೆ ಕೇಳಿದಾಗ, ''ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷರಾಗಿದ್ದಾರೆ. ಶಾಸಕರ ಬೆಂಬಲ ಕೇಳುವ ಸಮಯವಲ್ಲ. ಸಿದ್ದರಾಮಯ್ಯ ಅವರು 2 ವರ್ಷಗಳಿಂದ ಮುಖ್ಯಮಂತ್ರಿ ಹುದ್ದೆಯನ್ನು ವಹಿಸಿಕೊಂಡು ಕೆಲಸ ಮಾಡುತ್ತಿದ್ದಾರೆ. ಅವರು ಮುಂದುವರಿಯುತ್ತಿರುವಾಗ ಈ ವಿಚಾರ ಚರ್ಚೆಯಾಗುತ್ತಿರುವ ಬಗ್ಗೆ ನಮಗೆ ಗೊತ್ತಿಲ್ಲ. ನೀವು ಈ ವಿಚಾರ ಚರ್ಚೆ ಮಾಡುತ್ತಿರುವವರನ್ನೇ ಕೇಳಿ. ಶಿವಕುಮಾರ್ ಅವರದ್ದು ಬಲಾಬಲ ಪ್ರದರ್ಶನ ಮಾಡುವ ವ್ಯಕ್ತಿತ್ವವಿಲ್ಲ. ಶಿವಕುಮಾರ್ ಅವರು ಕಾಂಗ್ರೆಸ್ ಪಕ್ಷದ ಪ್ರಾಮಾಣಿಕ ಕಾರ್ಯಕರ್ತ. ಕಾಂಗ್ರೆಸ್ ವರಿಷ್ಠರಿಗೆ ಗೌರವ ನೀಡುವ ವ್ಯಕ್ತಿತ್ವ ಹೊಂದಿರುವವರು. ಅವರು ಬೇರೆಯವರಿಗೆ ಮಾರ್ಗದರ್ಶಕರಾಗಿ ಕೆಲಸ ಮಾಡುತ್ತಿದ್ದಾರೆ'' ಎಂದರು.

ಮುಖ್ಯಮಂತ್ರಿ ಕುರ್ಚಿ ಖಾಲಿ ಇಲ್ಲ ಎಂದ ಮೇಲೆ ಸಿಎಂ ಪದೇ ಪದೇ ನಾನೇ ಸಿಎಂ ಎಂದು ಹೇಳುವ ಅಗತ್ಯವಿದೆ ಎಂದು ಕೇಳಿದಾಗ, ಈ ವಿಚಾರವಾಗಿ ಮಾತನಾಡಲು ನಾನು ಬಹಳ ಸಣ್ಣವನು ಎಂದರು.

ಡಿ.ಕೆ. ಶಿವಕುಮಾರ್ ಅವರು ನಂಬುವ ಗುರುಗಳೇ ಈ ಅವಧಿಯಲ್ಲಿ ಅವರು ಸಿಎಂ ಆಗುತ್ತಾರೆ ಎಂದು ಹೇಳಿದ್ದಾರೆ ಎಂದು ಕೇಳಿದಾಗ, ನನಗೆ ಈ ವಿಚಾರ ಗೊತ್ತಿಲ್ಲ. ಪ್ರತಿಯೊಬ್ಬರಿಗೂ ಒಬ್ಬೊಬ್ಬರು ಸಿಎಂ ಆಗಲಿ ಎಂದು ಆಸೆ ಪಡುತ್ತಾರೆ. ಪ್ರತಿ ಜಿಲ್ಲೆ, ಸಮುದಾಯದವರು ನಮ್ಮವರು ಸಿಎಂ ಆಗಲಿ ಎಂದು ಆಶಯ ವ್ಯಕ್ತಪಡಿಸುವುದು ಸಹಜ. ಇದು ಇಂದು ನಡೆದಿರುವ ವಿಚಾರವಲ್ಲ. ಪ್ರತಿ ಅವಧಿಯಲ್ಲೂ ಇಂತಹ ಬೆಳವಣಿಗೆ ನಡೆದುಕೊಂಡು ಬಂದಿದೆ. ಇಂತಹ ಅಭಿಪ್ರಾಯವನ್ನು ತಪ್ಪು ಎಂದು ಹೇಳಲು ಆಗುವುದಿಲ್ಲ ಎಂದರು.

ಈಗಾಗಲೇ ಎರಡು ಬಾರಿ ಇಡಿ ವಿಚಾರಣೆ ಎದುರಿಸಿದ್ದೀರಿ ಅವರ ಉದ್ದೇಶವೇನು ಎಂದು ತಿಳಿಯಿತೇ ಎಂದು ಕೇಳಿದಾಗ, ನನಗೆ ಕಾರಣ ಗೊತ್ತಿಲ್ಲ. ಆದರೆ ನನಗೆ ಕೇಳಿದ ಪ್ರಶ್ನೆಗಳಿಗೆ ಉತ್ತರ ನೀಡಿದ್ದೇನೆ. ಮತ್ತೆ ವಿಚಾರಣೆಗೆ ಕರೆದಾಗ ಬರಬೇಕು ಎಂದು ತಿಳಿಸಿದ್ದಾರೆ. ಜವಾಬ್ದಾರಿಯುತ ಪ್ರಜೆಯಾಗಿ ವಿಚಾರಣೆಗೆ ಸಹಕಾರ ನೀಡಲು ಸಿದ್ಧನಿದ್ದೇನೆ ಎಂದು ತಿಳಿಸಿದರು.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹9,971/Gram24ct ₹9,140/Gram22ct ಬೆಳ್ಳಿ: ₹115.00/Gram

# ವರ್ಗಾವಣೆ ಸಮಸ್ಯೆ ತರಬೇಡಿ: ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್

• ಉದಯವಾಹಿನಿ, ಬೆಂಗಳೂರು

ಪೊಲೀಸ್ ಇಲಾಖೆಗೆ ಕೆಟ್ಟ ಹೆಸರು ತರುವಂತಹ ಕೆಲಸ ಮಾಡಬಾರದು ಹಾಗೂ ಇಲಾಖೆ ಕುರಿತು ನಕಾರಾತ್ಮಕವಾಗಿ ಮಾತನಾಡಬಾರದು ಎಂದು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಹೇಳಿದ್ದಾರೆ. ನಗರದ ಅಡುಗೋಡಿಯ ಸಿಎಆರ್ ಕವಾತು ಮೈದಾನದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಮಾಸಿಕ ಕವಾಯತಿನಲ್ಲಿ ವಂದನೆ ಸ್ವೀಕರಿಸಿ ಮಾತನಾಡಿದ ಅವರು, ಅಶಿಸ್ತು ತೋರಿದವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಇಲಾಖೆಯಲ್ಲಿ ಕೆಲಸ ಮಾಡುವಾಗ ಇಲಾಖೆ ಬಗ್ಗೆಯೇ ಚಿಂತೆ ಮಾಡಬೇಕು. ಬೇರೆ ಇಲಾಖೆಗೆ ಸಂಬಂಧಿಸಿದ ಕೆಲಸಗಳಲ್ಲಿ ಹಸ್ತಕ್ಷೇಪ ಮಾಡಿದರೆ, ಅಂತಹ ಪೊಲೀಸ್ ಸಿಬ್ಬಂದಿಗೆ ಕುತ್ತು ಎದುರಾಗಲಿದೆ' ಎಂದು ಎಚ್ಚರಿಕೆ ನೀಡಿದರು.

ಪೊಲೀಸರಿಗೆ ದಕ್ಷತೆ, ಪ್ರಾಮಾಣಿಕತೆ, ನಿಷ್ಠೆಯ ಗುಣಗಳೇ ಶೋಭೆ. ಸಮಗ್ರತೆ, ರಕ್ಷಣೆ, ಧೈರ್ಯ, ಸಂವೇದನೆ, ನ್ಯಾಯ-ನೀತಿಯ ಪ್ರತೀಕದಂತೆ ಅವರ ವ್ಯಕ್ತಿತ್ವವಿರಬೇಕು. ಖಾಕಿ ಧರಿಸಿದಾಗ ರೂಢಿಸಿಕೊಳ್ಳುವ ಶಿಸ್ತನ್ನು ನಿವೃತ್ತಿಯಾಗುವವರೆಗೂ ಕಾಪಾಡಿಕೊಳ್ಳಬೇಕು. ಜೊತೆಗೆ ಆರೋಗ್ಯದ ಕಡೆಗೂ ಗಮನಹರಿಸಬೇಕು ಮತ್ತು ಕುಟುಂಬಕ್ಕೂ ಸಮಯ ನೀಡಬೇಕು ಎಂದು ಸಲಹೆ ನೀಡಿದರು. ಪೊಲೀಸ್ ಇಲಾಖೆಗೆ ಸರ್ಕಾರ ಹಲವು ಸೌಲಭ್ಯಗಳನ್ನು ನೀಡಿದೆ. ಮುಂದೆಯೂ ನೀಡಲಿದೆ. ಆಡುಗೋಡಿಯ ಮೈದಾನವನ್ನು ಕೆಎಸ್‌ಆರ್‌ಪಿ ಮೈದಾನದಂತೆ ಉತ್ತಮವಾಗಿ ಇಟ್ಟುಕೊಳ್ಳಬೇಕು ಎಂದು ಸೂಚಿಸಿದರು.

ಸಿದ್ದಿಕ್ಕಿ ವಶಕ್ಕೆ ಪಡೆದು ವಿಚಾರಣೆ 2013ರಲ್ಲಿ ಬಿಜೆಪಿ ರಾಜ್ಯ ಕಚೇರಿ ಬಳಿ ಬಾಂಬ್ ಸ್ಫೋಟಿಸಿದ್ದ ಪ್ರಕರಣದ ಪ್ರಮುಖ ಆರೋಪಿ ಅಬೂಬಕ್ಕರ್ ಸಿದ್ದಿಕಿ ಅನ್ನು ಬಂಧಿಸಿರುವ ತಮಿಳುನಾಡು ಪೊಲೀಸರನ್ನು ರಾಜ್ಯ ಭಯೋತ್ಪಾದಕ ನಿಗ್ರಹ ದಳ (ಎಟಿಸಿ) ಅಧಿಕಾರಿಗಳು ಭೇಟಿಯಾಗಿ ಮಾಹಿತಿ ಕಲೆ ಹಾಕಿದ್ದಾರೆ.

ತಮಿಳುನಾಡು ಪೊಲೀಸರೊಂದಿಗೆ ಸಂಪರ್ಕದಲ್ಲಿದ್ದು ಅವರ ವಿಚಾರಣೆಯ ಬಳಿಕ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುವುದು ಎಂದು ಸೀಮಂತ್ ಕುಮಾರ್ ಸಿಂಗ್ ತಿಳಿಸಿದ್ದಾರೆ. ತಮಿಳುನಾಡು ಮೂಲದ ಅಲ್ ಉಮ್ಮಾ ಸಂಘಟನೆಯ ಸದಸ್ಯನಾಗಿ ಅಬೂಬಕ್ಕರ್ ಸಿದ್ದಿಕಿ ಗುರುತಿಸಿಕೊಂಡಿದ್ದ. 1998ರಲ್ಲಿ ಕೊಯಮತ್ತೂರು ಬಳಿ ಬಾಂಬ್ ಸ್ಫೋಟಿಸಿ ಬಿಜೆಪಿ ನಾಯಕ ಲಾಲ್ ಕೃಷ್ಣ ಅಡ್ವಾಣಿ ಅವರ ಹತ್ಯೆಗೆ ಯತ್ನಿಸಿದ್ದ ಬಳಿಕ ಅಲ್ ಉಮ್ಮಾ ಸಂಘಟನೆಯನ್ನು ನಿಷೇಧಿಸಲಾಗಿತ್ತು. 2013ರಲ್ಲಿ ಬೆಂಗಳೂರಿನ ಬಿಜೆಪಿ ಕಚೇರಿ ಬಳಿ ಬಾಂಬ್ ಸ್ಫೋಟಿಸಿದ್ದ ಪ್ರಕರಣದ ಹಿಂದೆ ಅಬೂಬಕ್ಕರ್ ಸಿದ್ದಿಕಿಯ ಕೈವಾಡವಿರುವುದನ್ನು ಸಿಸಿಬಿ ಪೊಲೀಸರು ಪತ್ತೆಹಚ್ಚಿದ್ದರು. ಆಂಧ್ರಪ್ರದೇಶದ ಅನ್ನಮಯ್ಯ ಜಿಲ್ಲೆಯಲ್ಲಿದ್ದ ಆರೋಪಿಯನ್ನು ತಮಿಳುನಾಡು ಪೊಲೀಸರು ಬಂಧಿಸಿದ್ದು ಶೀಘ್ರದಲ್ಲೇ ವಶಕ್ಕೆ ಪಡೆಯಲು ನ್ಯಾಯಾಲಯದ ಮೊರೆ ಹೋಗಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ. 2013ರ ಏಪ್ರಿಲ್ 17ರಂದು ಮಲ್ಲೇಶ್ವರದಲ್ಲಿರುವ ಬಿಜೆಪಿ ರಾಜ್ಯ ಘಟಕದ ಕಚೇರಿ ಬಳಿ ಹಳೆಯ ಬೈಕ್‌ನಲ್ಲಿ ಬಾಂಬ್ ಇರಿಸಿ ಸ್ಫೋಟಿಸಲಾಗಿತ್ತು. ಸ್ಫೋಟದಿಂದ ಪೊಲೀಸ್ ಸಿಬ್ಬಂದಿ ಕಾಲೇಜು ವಿದ್ಯಾರ್ಥಿನಿ ಸಹಿತ 16 ಜನ ಗಾಯಗೊಂಡಿದ್ದರು. ಪ್ರಕರಣದ ತನಿಖೆ ನಡೆಸಿದ್ದ ಬೆಂಗಳೂರು ಸಿಸಿಬಿ ಪೊಲೀಸರು ಅಬೂಬಕ್ಕರ್ ಸಿದ್ದಿಕಿ ತಲೆ ಮರೆಸಿಕೊಂಡಿರುವುದಾಗಿ ಆರೋಪಪಟ್ಟಿ ಸಲ್ಲಿಸಿದ್ದರು.



ಉದಯವಾಹಿನಿ ಚಿತ್ರ

> 'ಸಮಸ್ಯೆಗಳಿದ್ದರೆ ಹಿರಿಯ ಅಧಿಕಾರಿಗಳು ನನ್ನ ಗಮನಕ್ಕೆ ತರಬೇಕು. ವರ್ಗಾವಣೆ ಸಮಸ್ಯೆಯನ್ನು ಅಧಿಕಾರಿಗಳ ಮುಂದೆ ತರಬೇಡಿ. ಬೆಂಗಳೂರಿನಲ್ಲಿ ಅತ್ಯುತ್ತಮ ಮೂಲಸೌಕರ್ಯಗಳಿವೆ. ಒಂದು ಠಾಣೆಯಿಂದ ಮತ್ತೊಂದು ಠಾಣೆಗೆ ವರ್ಗಾವಣೆಯಾದರೆ ಅಲ್ಲಿ ದಕ್ಷತೆಯಿಂದ ಕೆಲಸ ಮಾಡಿ ವೃತ್ತಿ ಅನುಭವವನ್ನು ಮತ್ತಷ್ಟು ಶ್ರೀಮಂತಗೊಳಿಸಿಕೊಳ್ಳಬೇಕು. ಉತ್ತರ ಕರ್ನಾಟಕದಂತಹ ಊರುಗಳಿಂದ ಬಂದಿರುವ ಹಲವಾರು ಪೊಲೀಸರು ನಗರದಲ್ಲಿ ಕೆಲಸ ಮಾಡುತ್ತಿದ್ದಾರೆ. ಪೊಲೀಸ್ ಇಲಾಖೆಗೆ ಸೇರಿದ ನಂತರ ತರಬೇತಿ ಸಮಯದಲ್ಲಿ ನೀಡಲಾಗಿರುವ ಸಲಹೆಗಳನ್ನು ಪಾಲಿಸಿ ಎಂದು ತಿಳಿಸಿದರು.

# ಡೆಂಗಿ, ಚಿಕೂನ್‌ಗುನ್ಯಾ ನಿಯಂತ್ರಣಕ್ಕೆ ಅಭಿಯಾನ

• ಉದಯವಾಹಿನಿ, ಬೆಂಗಳೂರು

ಸಾಂಕ್ರಾಮಿಕ ರೋಗಗಳಾದ ಡೆಂಗಿ ಹಾಗೂ ಚಿಕೂನ್ ಗುನ್ಯಾ ನಿಯಂತ್ರಣಕ್ಕೆ ವಿಶೇಷ ಅಭಿಯಾನ ಕೈಗೊಳ್ಳುವಂತೆ ಸೂಚಿಸಿರುವ ಆರೋಗ್ಯ ಇಲಾಖೆ, ಈ ಅಭಿಯಾನಕ್ಕಾಗಿ ರೂ.7.25 ಕೋಟಿ ವೆಚ್ಚ ಮಾಡುವ ಪ್ರಸ್ತಾವಕ್ಕೆ ಅನುಮೋದನೆ ನೀಡಿ ಆದೇಶ ಹೊರಡಿಸಿದೆ. ರೋಗಗಳ ನಿಯಂತ್ರಣಕ್ಕೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಪ್ರತಿ ಜಿಲ್ಲೆಗೆ ಒಬ್ಬರಂತೆ ಕೀಟ ಸಂಗ್ರಹಕಾರರನ್ನು ನೇಮಿಸಿಕೊಳ್ಳಬೇಕು. ರೋಗ ಹರಡುವ ವೈರಾಣುಗಳನ್ನು ಪತ್ತೆ ಮಾಡಲು ತಂತ್ರಜ್ಞಾನದ ಅಳವಡಿಕೆ, ಈಡಿಸ್ ಲಾರ್ವಾ ನಿರ್ಮೂಲನೆಗೆ ಸ್ವಯಂ ಸೇವಕರ ನಿಯೋಜನೆ, ಡೆಂಗಿ ಪರೀಕ್ಷೆಗೆ ಕಿಟ್‌ಗಳ ಖರೀದಿ ಸೇರಿ ವಿವಿಧ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

# ರಂಭಾಪುರಿ ಶ್ರೀಗಳಿಗೆ, ಸಿಎಂ ಕೌಂಟರ್

## ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯಡಿಯಲಿ ತರಲಾದ ಅನ್ನಭಾಗ್ಯ ಯೋಜನೆ

• ಉದಯವಾಹಿನಿ, ಬೆಂಗಳೂರು

ಕಾಂಗ್ರೆಸ್ ಸರ್ಕಾರದ ಗ್ಯಾರಂಟಿಗಳಿಂದ ಜನರು ಸೋಮಾರಿಯಾಗುತ್ತಿದ್ದಾರೆ ಎನ್ನುವ ಬಾಳೆಹೊನ್ನೂರು ರಂಭಾಪುರಿ ಮಠದ ಶ್ರೀಗಳ ಹೇಳಿಕೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಸಮಾಧಾನ ವ್ಯಕ್ತ ಪಡಿಸಿದ್ದಾರೆ. ರಾಜ್ಯದ ಯಾವುದೇ ಜನರು ಉಪವಾಸದಿಂದ ಇರಬಾರದು ಎನ್ನುವ ಕಾರಣಕ್ಕಾಗಿ ತರಲಾದ ಯೋಜನೆಯಿದು ಎಂದು ಸಿಎಂ ಹೇಳಿದ್ದಾರೆ.

ಬೆಳಗಾವಿಯಲ್ಲಿ ಮಾತನಾಡುತ್ತಿದ್ದ ರಂಭಾಪುರಿ ವೀರ ಸಿಂಹಾಸನ ಮಹಾ ಪೀಠದ ಬ್ರಹ್ಮ ಸಿದ್ದಲಿಂಗ ಶಿವಾಚಾರ್ಯ ಶ್ರೀಗಳು ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸಬೇಕೆಂದು ನಾವು ಹೇಳುತ್ತಿಲ್ಲ. ಆದರೆ, ಇದರಿಂದ ಅಭಿವೃದ್ಧಿ ಕೆಲಸಗಳು ನಿಲ್ಲಬಾರದು ಎನ್ನುವುದಷ್ಟೇ ನಮ್ಮ ಕಾಳಜಿ. ಸರ್ಕಾರ ಕೊಡುತ್ತಿರುವ ಬಿಟ್ಟಿ ಯೋಜನೆಗಳಿಂದ ಜನರು ಭವಿಷ್ಯ ಉಜ್ವಲವಾಗುವುದಿಲ್ಲ ಎಂದು ಶ್ರೀಗಳು ಹೇಳಿದ್ದರು. ಯಾವ ಕಾರಣಕ್ಕಾಗಿ ಗ್ಯಾರಂಟಿಯ ಬಗ್ಗೆ ಮಾತನಾಡಿದ್ದರೋ ಗೊತ್ತಿಲ್ಲ, ಆದರೆ, ಗ್ಯಾರಂಟಿಯಿಂದ ಜನರು ಸೋಮಾರಿಯಾಗುತ್ತಿದ್ದಾರೆ ಎಂದು ಹೇಳಿದ್ದಾರೆ.

ನನ್ನ ಮೇಲಿನ ಭಿನ್ನಾಭಿಪ್ರಾಯದಿಂದ ಆ ರೀತಿ ಹೇಳಿದ್ದಾರೋ ಗೊತ್ತಿಲ್ಲ ಎಂದು ಶ್ರೀಗಳ ಹೆಸರು ಹೇಳದೇ, ಸಿದ್ದರಾಮಯ್ಯ ಅಸಮಾಧಾನ ವ್ಯಕ್ತ ಪಡಿಸಿದ್ದಾರೆ. ಕುರುಬರಿಗೆ ಅಕ್ಷರ ಹತ್ತಲ್ಲ, ಶಿಕ್ಷಣ ಏಕೆ ಎಂದು ನಮ್ಮ ಅಜ್ಜಿ ಹೇಳುತ್ತಿದ್ದರು.

ಆದರೆ, ನಾನು ಶಾಲೆಗೆ ಹೋಗಿ ಕಾನೂನು ಪದವಿ ಪಡೆದು ಮುಖ್ಯಮಂತ್ರಿಯೂ ಆದೆ. ನಾನು ಶಾಲೆಗೆ ಹೋಗಿ ಶಿಕ್ಷಣ ಕಲಿಯುವ ಅವಕಾಶ ಉಪಯೋಗಿಸಿಕೊಳ್ಳದಿದ್ದರೆ ನಾನೂ ಹಸು, ಕುರಿ ಕಾಯುತ್ತಾ ಇರಬೇಕಾಗಿತ್ತು.

ಆದ್ದರಿಂದ ರಾಣಿ ಅಹಲ್ಯಾ ಬಾಯಿ ಅವರ ಶಿಕ್ಷಣ ಕ್ರಾಂತಿ ಎಲ್ಲರಿಗೂ ಈ ಮಹಿಳಾ ಸಂಘಟನೆಗೂ ಪ್ರೇರಣೆ ಆಯಿತು. ಇತಿಹಾಸ ಗೊತ್ತಿಲ್ಲದವರು ಭವಿಷ್ಯ ರೂಪಿಸಲು ಸಾಧ್ಯವಿಲ್ಲ ಎಂದು ಸಿಎಂ ಸಿದ್ದರಾಮಯ್ಯ ಅಭಿಪ್ರಾಯ ಪಟ್ಟರು.

ನಮ್ಮ ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳಿಂದ ಯಾರೂ ಸೋಮಾರಿಗಳಾಗುವುದಿಲ್ಲ. ಬದಲಿಗೆ ಸಾಮಾಜಿಕವಾಗಿ ಸಬಲರಾಗುತ್ತಾರೆ. ಮಹಿಳೆಯರ ಸಬಲೀಕರಣಕ್ಕೆ ನಮ್ಮ ಸರ್ಕಾರ ಗೃಹಲಕ್ಷ್ಮಿ, ಶಕ್ತಿ ಯೋಜನೆ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ರೂಪಿಸಿ ಜಾರಿ ಮಾಡಿದ್ದಾಗಿದೆ. ಇದರಿಂದ ಸಮಾಜಕ್ಕೆ, ಮಹಿಳಾ ಕುಲಕ್ಕೆ ಶಕ್ತಿ ಬಂದಿದೆಯೇ ಹೊರತು ಯಾರೂ ಸೋಮಾರಿಗಳಾಗಿಲ್ಲ ಎಂದು, ಪರೋಕ್ಷವಾಗಿ ಶ್ರೀಗಳ ಹೇಳಿಕೆಗೆ ಅಸಮಾಧಾನ ವ್ಯಕ್ತ ಪಡಿಸಿದರು.



> ಗ್ಯಾರಂಟಿ ಯೋಜನೆಗಳಿಂದ ಜನರಲ್ಲಿ ದುಡಿಯುವ ಮನೋಭಾಗ ಕಮ್ಮಿಯಾಗಿ, ಸೋಮಾರಿತನ ಹೆಚ್ಚುತ್ತದೆ ಎನ್ನುವ ಹೇಳಿಕೆಯನ್ನು ರಂಭಾಪುರಿ ಶ್ರೀಗಳು ಹೇಳಿದ್ದರು. ಶ್ರೀಗಳು ನಮ್ಮವರು, ಆದರೆ ಅವರ ಮಾತನ್ನು ನಾನು ಒಪ್ಪುವುದಿಲ್ಲ. ಬಡತನ ಎನ್ನುವುದು ಎಲ್ಲಾ ಕಡೆಯಿದೆ, ಶ್ರೀಗಳಿಗೆ ನಮಗೂ ಗೊತ್ತಾಗದಂತಹ ಸಮಸ್ಯೆಗಳು ಬಹಳಷ್ಟಿವೆ ಎಂದು ಸಚಿವ ಎಂಬಿ ಪಾಟೀಲ್ ಹೇಳಿದ್ದಾರೆ.

### ರಾಣಿ ಅಹಲ್ಯಾ ಬಾಯಿ ಹೋಳ್ಕರ್ 300ನೇ ಜನ್ಮ ದಿನಾಚರಣೆ

ರವೀಂದ್ರ ಕಲಾ ಕ್ಷೇತ್ರದಲ್ಲಿ ನಡೆದ ರಾಣಿ ಅಹಲ್ಯಾ ಬಾಯಿ ಹೋಳ್ಕರ್ ಅವರ 300ನೇ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಸಿಎಂ ಸಿದ್ದರಾಮಯ್ಯ, ಶಿಕ್ಷಣ-ಸಂಘಟನೆ-ಹೋರಾಟ ಅಂಬೇಡ್ಕರ್ ಅವರು ಶೋಷಿತ ಜಾತಿ-ಸಮುದಾಯಗಳಿಗೆ ಕೊಟ್ಟಿರುವ ಮಂತ್ರ. ಶೂದ್ರರು ಮತ್ತು ಮಹಿಳೆಯರು ಅಕ್ಷರ ಸಂಸ್ಕೃತಿಯಿಂದ ವಂಚಿತರಾಗಿದ್ದರು. ಆದರೆ ಅಂಬೇಡ್ಕರ್ ಅವರ ಕಾರಣದಿಂದ ಶೂದ್ರ ಮತ್ತು ಮಹಿಳಾ ಕುಲಕ್ಕೆ ಶಿಕ್ಷಣ ಕಲಿಯುವ ಅವಕಾಶ ಒದಗಿ ಬಂತು. ಇದಕ್ಕೆ ನಮ್ಮ ಸಂವಿಧಾನ ನೀಡಿದ ಕಡ್ಡಾಯ ಶಿಕ್ಷಣ ಕಾನೂನು ನೆರವಾಯಿತುಎಂದು ಹೇಳಿದ್ದಾರೆ.

# ಮನೆ ಜಪ್ತಿ ವೇಳೆ ಕುಸಿದು ಬಿದ್ದು ವ್ಯಕ್ತಿ ಸಾವು



ಉದಯವಾಹಿನಿ ಚಿತ್ರ

• ಉದಯವಾಹಿನಿ,ಕೆ.ಆರ್.ಪುರ

ಸಾಲ ವಾಪಸ್ ನೀಡದ ಕಾರಣ ಬ್ಯಾಂಕ್ ಸಿಬ್ಬಂದಿ ಮನೆ ಜಪ್ತಿ ಮಾಡುವ ವೇಳೆ, ಒತ್ತಡಕ್ಕೆ ಒಳಗಾದ ವ್ಯಕ್ತಿಯೊಬ್ಬರು ಕುಸಿದು ಬಿದ್ದು ಮೃತಪಟ್ಟಿರುವ ಘಟನೆ ಮಹದೇವಪುರ ಠಾಣೆ ವ್ಯಾಪ್ತಿಯ ಮಹೇಶ್ವರಿನಗರದಲ್ಲಿ ನಡೆದಿದೆ.

ಮಹೇಶ್ವರಿನಗರದ ನಿವಾಸಿ ಆನಂದ್ ವೇಲನ್ (63) ಮೃತ ವ್ಯಕ್ತಿ. ಸಣ್ಣ ಉದ್ಯಮ ನಡೆಸುವ ಸಲುವಾಗಿ ರಾಜಾಜಿನಗರದ ಡೆವಲಪ್‌ಮೆಂಟ್ ಕ್ರೆಡಿಟ್ ಬ್ಯಾಂಕ್‌ನಲ್ಲಿ 2017ರಲ್ಲಿ ರೂ.30 ಲಕ್ಷ ಸಾಲ ಪಡೆದಿದ್ದರು. ರೂ. 27 ಲಕ್ಷ ಸಾಲ ಪಾವತಿ ಮಾಡಿದ್ದರು. ಬಾಕಿ ಹಣ ಪಾವತಿ ಮಾಡಿರಲಿಲ್ಲ. ಬ್ಯಾಂಕ್ ಸಿಬ್ಬಂದಿ ಮನೆ ಜಪ್ತಿ ಮಾಡಲು ಮುಂದಾದಾಗ ಆಘಾತಕ್ಕೆ ಒಳಗಾದ ಆನಂದ್ ಸ್ಥಳದಲ್ಲಿಯೇ ಕುಸಿದು ಬಿದ್ದರು. ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲಿಯೇ ಅವರು ಮೃತಪಟ್ಟರು. ಡಿಸಿಬಿ ಬ್ಯಾಂಕ್ ಸಿಬ್ಬಂದಿ ನೋಟಿಸ್ ನೀಡದೆ ಮನೆ ಜಪ್ತಿ ಮಾಡಲು ಬಂದಿದ್ದರು. ಇದರಿಂದ ಆಘಾತಕ್ಕೆ ಒಳಗಾದ ತಂದೆ ಸ್ಥಳದಲ್ಲಿಯೇ ಕುಸಿದು ಬಿದ್ದರು. ಬ್ಯಾಂಕ್ ಸಿಬ್ಬಂದಿ ಸಹಾಯಕ್ಕೆ ಬಾರದೆ ಮನೆಯಿಂದ ತೆರಳಿದರು. ತಂದೆ ಸಾವಿಗೆ ಬ್ಯಾಂಕ್ ಸಿಬ್ಬಂದಿಯೇ ಕಾರಣ ಎಂದು ಆನಂದ್ ವೇಲನ್ ಕುಟುಂಬದವರು ಆರೋಪಿಸಿದರು.

# ಕೆಸಿಇಟಿ ಆಯ್ಕೆ ನಮೂದಿಸಲು 12 ತಾಸು ಕಾಯಬೇಕಾದ ಪರಿಸ್ಥಿತಿ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಪೋರ್ಟಲ್‌ನಲ್ಲಿ ನಿರಂತರ ಸರ್ವರ್ ವೈಫಲ್ಯಗಳಿಂದಾಗಿ ಕರ್ನಾಟಕದಾದ್ಯಂತ ಸಾವಿರಾರು ಕೆಸಿಇಟಿ ಆಕಾಂಕ್ಷಿಗಳು ತಮ್ಮ ಆಯ್ಕೆ ನಮೂದನ್ನು ಪೂರ್ಣಗೊಳಿಸಲು ಅಡೆತಡೆಗಳನ್ನು ಎದುರಿಸುತ್ತಿದ್ದು, ವಿದ್ಯಾರ್ಥಿಗಳು ಆತಂಕಕ್ಕೀಡಾಗಿದ್ದಾರೆ. ತಾಂತ್ರಿಕ ದೋಷಗಳನ್ನು ತಕ್ಷಣ ಪರಿಹರಿಸಬೇಕು ಅಥವಾ ಗಡುವನ್ನು ವಿಸ್ತರಿಸಬೇಕು ಎಂದು ವಿದ್ಯಾರ್ಥಿಗಳು ಒತ್ತಾಯಿಸುತ್ತಿದ್ದಾರೆ. ಇದಕ್ಕೆ ಪ್ರತಿಕ್ರಿಯೆಯಾಗಿ, ಕೆಇಎ ಆಯ್ಕೆ ನಮೂದು ಗಡುವನ್ನು ಜುಲೈ 15 ರಿಂದ ಜುಲೈ 18 ರವರೆಗೆ ವಿಸ್ತರಿಸಿದೆ. ಈ ವರ್ಷ ಕೆಸಿಇಟಿಗೆ ಹಾಜರಾದ ಎರಡನೇ ವರ್ಷದ ವಿದ್ಯಾರ್ಥಿ ಮೋಹನ್ (ಹೆಸರು ಬದಲಾಯಿಸಲಾಗಿದೆ) ಜುಲೈ 8ರ ಮಧ್ಯರಾತ್ರಿ ಕೆಇಎ ಆಯ್ಕೆ ನಮೂದು ಲಿಂಕ್ ಕಳುಹಿಸಿದ ತಕ್ಷಣ ಸಮಸ್ಯೆ ಪ್ರಾರಂಭವಾಯಿತು ಎಂದು ಹೇಳಿದ್ದಾರೆ. ಅಂದಿನಿಂದ, ಅವರು ಮತ್ತು ಇತರ ಅನೇಕರು ಪೋರ್ಟಲ್‌ನ್ನು ಸರಿಯಾಗಿ ಪ್ರವೇಶಿಸಲು ಸಾಧ್ಯವಾಗುತ್ತಿಲ್ಲ ಎಂದು ಆರೋಪಿಸಲಾಗಿದೆ. ನಾನು ಬೆಳಿಗ್ಗೆ 10.30 ರಿಂದ ರಾತ್ರಿ 10 ರವರೆಗೆ ಸೈಬರ್ ಕೇಂದ್ರದಲ್ಲಿ ಕುಳಿತುಕೊಂಡಿದ್ದೆ, ಮತ್ತು ನಾನು 17 ಕಾಲೇಜುಗಳನ್ನು ಮಾತ್ರ ಪ್ರವೇಶಿಸಲು ಸಾಧ್ಯವಾಯಿತು. ಸರ್ವರ್ ಕ್ರ್ಯಾಶ್ ಆಗುತ್ತಲೇ ಇರುತ್ತದೆ ಅಥವಾ ನಿರ್ವಹಣೆಗೆ ಒಳಗಾಗುತ್ತದೆ. ಇಂದು ಮತ್ತೆ, ಸರ್ವರ್ ಸ್ಥಿರವಾಗಿರುತ್ತದೆ ಎಂದು ಅಧಿಕಾರಿಗಳು ಭರವಸೆ ನೀಡಿದ್ದರಿಂದ ನಾವು ಬೆಳಿಗ್ಗೆ 10 ಗಂಟೆಗೆ ಬಂದೆವು. ಆದರೆ ಮಧ್ಯಾಹ್ನ 2 ಗಂಟೆಯ ಹೊತ್ತಿಗೆ ಅದು ಇನ್ನೂ ನಿರ್ವಹಣೆಯಲ್ಲಿದೆ ಎಂದು ಅವರು ಹೇಳಿದರು. ನಂತರ ಅವರು ಅದನ್ನು ಸಂಜೆ 6 ಗಂಟೆಗೆ ಮುಂದೂಡಿದರು, ಎಂದು ಮೋಹನ್ ಹೇಳಿದರು.

# UPI ಡೇಟಾ ಆಧರಿಸಿ ಜಿಎಸ್‌ಟಿ ನೋಟೀಸ್: ತೆರಿಗೆ ಇಲಾಖೆ

• ಉದಯವಾಹಿನಿ, ಬೆಂಗಳೂರು

ವಾಣಿಜ್ಯ ತೆರಿಗೆ ಇಲಾಖೆಯಿಂದ ಸಣ್ಣ ವ್ಯಾಪಾರಿಗಳಿಗೆ ನೋಟೀಸ್ ಜಾರಿ ಮಾಡಿರುವುದಕ್ಕೆ ಸ್ಪಷ್ಟೀಕರಣ ನೀಡಿರುವ ರಾಜ್ಯ ಸರ್ಕಾರ, ಸರಕು ಮತ್ತು ಸೇವಾ ತೆರಿಗೆ ಕಾನೂನುಗಳ ಅಂಗೀಕಾರವನ್ನು ಖಚಿತ ಪಡಿಸಿಕೊಳ್ಳಲು ಏಕೀಕೃತ ಪಾವತಿ ಇಂಟರ್ಫೇಸ್ ಸೇವಾ ಪೂರೈಕೆದಾರರಿಂದ ಸಂಗ್ರಹಿಸಿದ ಅಂಕಿಅಂಶ ಆಧರಿಸಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದೆ.

ಜುಲೈ 1,2017 ರಿಂದ ಜಾರಿಯಲ್ಲಿರುವ ಜಿಎಸ್‌ಟಿ ಕಾಯ್ದೆ ಪ್ರಕಾರ, ವಾರ್ಷಿಕ ವಹಿವಾಟು 40 ಲಕ್ಷ ರೂಪಾಯಿ (ಸರಕುಗಳಿಗೆ) ಅಥವಾ 20 ಲಕ್ಷ (ಸೇವೆಗಳಿಗೆ) ಮೀರುವ ಪೂರೈಕೆದಾರರು ಜಿಎಸ್‌ಟಿ ತೆರಿಗೆ ವಿಧಾನಕ್ಕೆ ನೋಂದಾಯಿಸಿಕೊಳ್ಳಬೇಕಾಗುತ್ತದೆ. ತೆರಿಗೆ ವಿಧಿಸಬಹುದಾದ ವಸ್ತುಗಳ ಮೇಲೆ ಮಾತ್ರ ತೆರಿಗೆ ಅನ್ವಯಿಸುತ್ತಿದ್ದರೂ, ಈ ವಹಿವಾಟು ತೆರಿಗೆ ವಿಧಿಸಬಹುದಾದ ಮತ್ತು ವಿನಾಯಿತಿ ಪಡೆದ ಸರಕು ಮತ್ತು ಸೇವೆಗಳಿಗೆ ಅನ್ವಯವಾಗುತ್ತದೆ. ಬ್ರೆಡ್‌ನಂತಹ ಅಗತ್ಯ ವಸ್ತುಗಳು ಜಿಎಸ್‌ಟಿಯಿಂದ ವಿನಾಯಿತಿ ಪಡೆದಿದ್ದರೂ, ಪ್ಯಾಕ್ ಮಾಡಿದ ಸ್ನ್ಯಾಕ್ಸ್‌ಗಳಿಗೆ ಶೇಕಡಾ 5ರಷ್ಟು ತೆರಿಗೆ ಹೇರಲಾಗುತ್ತದೆ.

2021-22 ರಿಂದ 2024-25 ರವರೆಗಿನ ಯುಪಿಐ ಆಧಾರಿತ ವಹಿವಾಟು ದತ್ತಾಂಶವು ಅನೇಕ ವ್ಯಾಪಾರಿಗಳು ನಗದು ಮತ್ತು ಇತರ ಪಾವತಿ ವಿಧಾನಗಳನ್ನು ಹೊರತುಪಡಿಸಿ, ಯುಪಿಐ ಮೂಲಕ 40 ಲಕ್ಷಕ್ಕೂ ಹೆಚ್ಚು ಪಡೆದಿದ್ದಾರೆ ಎಂದು ತೋರಿಸಿದೆ, ಅಂದರೆ ಇನ್ನೂ ಹೆಚ್ಚಿನ ಒಟ್ಟು ವಹಿವಾಟನ್ನು ಸೂಚಿಸುತ್ತದೆ.

# ಸಿಎಂ ಮೇಲಿನ ಹೊಟ್ಟೆ ಉರಿಗೆ ಇಲ್ಲಸಲ್ಲದ ಆರೋಪ

• ಉದಯವಾಹಿನಿ, ಬೆಂಗಳೂರು

ಸಿದ್ದರಾಮಯ್ಯ ಮೇಲಿನ ಹೊಟ್ಟೆ ಉರಿಗೆ ಇಲ್ಲಸಲ್ಲದ ಆರೋಪ ಮಾಡ್ತಿದ್ದಾರೆ. ಯಾವುದೇ ಆರೋಪಗಳು ಸಿಎಂ ಅವರ ಹತ್ತಿರವೂ ಸುಳಿಯೋದಿಲ್ಲ ಎಂದು ಸಿಎಂ ಪರ ಸಚಿವ ಬೈರತಿ ಸುರೇಶ್ ಬ್ಯಾಟಿಂಗ್ ಮಾಡಿದ್ದಾರೆ.

ಅಹಲ್ಯ ಬಾಯಿ ಹೋಳ್ಕರ್ ಅವರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶದಲ್ಲಿ ಪ್ರಾಮಾಣಿಕ ಸಿಎಂ ಯಾರಾದ್ರು ಇದ್ದರೆ ಅವರು ಸಿದ್ದರಾಮಯ್ಯ. ಸಿಎಂ ಮೇಲೆ ಏನೇನೋ ಆರೋಪ ಮಾಡಿ ಗಾಳಿಯಲ್ಲಿ ಗುಂಡು ಹೊಡೆಯೋ ಕೆಲಸ ಬೇರೆ ರಾಜಕಾರಣಿಗಳು ಮಾಡ್ತಾರೆ. ಆದ್ರೆ ಈ ಆರೋಪಗಳು ಸಿದ್ದರಾಮಯ್ಯ ಅವರ ಹತ್ತಿರವೂ ಬರುವುದಿಲ್ಲ. ಸಿಎಂ ಮೇಲಿನ ಹೊಟ್ಟೆ ಉರಿಗೆ ಆರೋಪ ಮಾಡ್ತಾರೆ ಎಂದು ಕಿಡಿಕಾರಿದ್ದಾರೆ.

ಹಿಂದೆ ಅನೇಕರು ಈ ಸಮಾಜದವರು ಮಂತ್ರಿ ಆಗಿದ್ದರು. ಆದರೆ ಅವರು ಯಾರು ಏನು ಮಾಡಿಲ್ಲ. ಇದೆಲ್ಲವನ್ನೂ ಮಾಡಿದ್ದು ಸಿದ್ದರಾಮಯ್ಯ ಮಾತ್ರ. ನಮ್ಮ ಸಮಾಜದ ಕೆಲವರಿಗೆ ಸಿದ್ದರಾಮಯ್ಯ ಕಂಡರೆ ಜಲಸ್, ಹೊಟ್ಟೆ ಉರಿಯಿಂದ ಅವರ ವಿರುದ್ಧ ಮಾತಾಡ್ತಾರೆ. ಸಿದ್ದರಾಮಯ್ಯ ಅವರು ಮಾಡಿದ 1% ಕೆಲಸವನ್ನು ಸಮುದಾಯದ ಯಾವ ನಾಯಕರು ಮಾಡಿಲ್ಲ ಎಂದಿದ್ದಾರೆ. ಸಿದ್ದರಾಮಯ್ಯ ಅವರು 42 ವರ್ಷ ರಾಜಕಾರಣದಲ್ಲಿ ತಮ್ಮದೇ ಛಾಪು ಮೂಡಿಸಿದ್ದಾರೆ. ಅವರ ವಿರುದ್ಧ ಏನೇ ಆಪಾದನೆ ಮಾಡಿದ್ರು ದಾಖಲೆಗಳು ಇರಲ್ಲ. ಮುಂಚೆ ರಾಜಕಾರಣದಲ್ಲಿ ಕುರುಬ ಎಂದು ಹೇಳಲು ಆಗುತ್ತಿರಲಿಲ್ಲ. ಈಗ ನಾನು ಕುರುಬ ಎಂದು ಹೇಳಲು ಹೆಮ್ಮೆಯಿದೆ. ಯಾಕೆಂದರೆ ಸಿದ್ದರಾಮಯ್ಯ ಅವರು ಜನಪರ ಯೋಜನೆ ಕೊಟ್ಟಿದ್ದಾರೆ. ಸಿದ್ದರಾಮಯ್ಯ ಅವರು ಕುರುಬ ಸಮುದಾಯದಲ್ಲಿ ಹುಟ್ಟಿರುವುದು ಪುಣ್ಯ ಎಂದು ಹಾಡಿ ಹೊಗಳಿದ್ದಾರೆ.



> 16 ಬಜೆಟ್ ಮಂಡಿಸಿದವರು ಸಿಎಂ. ದೇವರಾಜ್ ಅರಸ್ ದಾಖಲೆ ಮುರಿದು ಸಿಎಂ ಆಗಿದ್ದಾರೆ. ನಿಮ್ಮ ಪ್ರೀತಿ ವಿಶ್ವಾಸ ಸಿಎಂ ಮೇಲಿರಲಿ. ನಿಮ್ಮ ಆಶೀರ್ವಾದ ಇರೋವರೆಗೂ ಸಿದ್ದರಾಮಯ್ಯ ಅವರಿಗೆ ಯಾರು ಏನು ಮಾಡೋಕೆ ಆಗೊಲ್ಲ. ನಾನು ಅವರ ಕ್ಯಾಬಿನೆಟ್‌ನಲ್ಲಿ ಮಂತ್ರಿ ಆಗಿರೋದು ನನ್ನ ಪುಣ್ಯ ಎಂದು ಹೇಳಿದ್ದಾರೆ.

> ಸಿದ್ದರಾಮಯ್ಯ ಯಾರಿಗೆ ಸಹಾಯ ಮಾಡಿದ್ರು ಅದರ ಕ್ರೆಡಿಟ್ ತಗೊಳ್ಳೊಲ್ಲ. ನನ್ನನ್ನು ಮಂತ್ರಿ ಮಾಡೋವಾಗ ಹಿಂದಿನ ದಿನವೂ ನನಗೆ ಹೇಳಿರಲಿಲ್ಲ. ಸಿದ್ದರಾಮಯ್ಯ ಅವರ ಆಶೀರ್ವಾದದಿಂದ ಅನೇಕರು ಶಾಸಕರು, ಮಂತ್ರಿಗಳು ಆಗಿದ್ದಾರೆ. ನಿಮ್ಮ ಸಹಕಾರ ಸಿದ್ದರಾಮಯ್ಯಗೆ ಇರಲಿ ಎಂದು ಜನರಲ್ಲಿ ಮನವಿ ಮಾಡಿದ್ದಾರೆ.

# ಪೊಲೀಸರ ವಿರುದ್ಧ ಎಫ್‌ಐಆರ್‌ಗೆ ಶಿಫಾರಸು

• ಉದಯವಾಹಿನಿ, ಬೆಂಗಳೂರು

ಚಿನ್ನಸ್ವಾಮಿ ಸ್ಟೇಡಿಯಂ ಬಳಿ ಸಂಭವಿಸಿದ್ದ ಕಾಲ್ತುಳಿತದಲ್ಲಿ 11 ಮಂದಿ ಮೃತಪಟ್ಟಿರುವ ಪ್ರಕರಣ ಸಂಬಂಧ ಸರ್ಕಾರಕ್ಕೆ ಸಲ್ಲಿಸಿದ ನ್ಯಾ. ಮೈಕಲ್ ಕುನ್ಹಾ ಅವರ ವರದಿಯಲ್ಲಿ ಮತ್ತಷ್ಟು ಸ್ಫೋಟಕ ಅಂಶ ಬಹಿರಂಗವಾಗಿದೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸಂಭವಿಸಿದ ಕಾಲ್ತುಳಿತ ಪ್ರಕರಣ ಸಂಬಂಧ ಕರ್ತವ್ಯ ಲೋಪ ಮಾಡಿದ ಅಧಿಕಾರಿಗಳ ವಿರುದ್ಧ ಇಲಾಖಾ ತನಿಖೆಗೆ ಶಿಫಾರಸು ಮಾಡಿದೆ. ಆರ್‌ಸಿಬಿ, ಡಿಎನ್‌ಎ, ಕೆಎಸ್‌ಸಿಎ ಮತ್ತು ಪೊಲೀಸರ ವಿರುದ್ಧ ದಂಡನೀಯ ಪ್ರಕರಣ ದಾಖಲು ಮಾಡಬಹುದು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಘಟನೆಗೆ ಕೆಎಸ್‌ಸಿಎ, ಡಿಎನ್‌ಎ, ಆರ್‌ಸಿಬಿ ಹಾಗೂ ಪೊಲೀಸರು ನೇರ ಹೊಣೆಯಾಗಿದ್ದಾರೆ. ಕಾರ್ಯಕ್ರಮ ನಡೆಸುವುದು ಅಸಾಧ್ಯವೆಂದು ಗೊತ್ತಿದ್ದರೂ ಎಲ್ಲರೂ ಶಾಮೀಲಾಗಿ ಕಾರ್ಯಕ್ರಮ ನಡೆಸಿದರು. ಈ ಎಲ್ಲರ ಕರ್ತವ್ಯ ಲೋಪ, ನಿರ್ಲಕ್ಷ್ಯತನದ ಪರಮಾವಧಿ ಎದ್ದು ಕಾಣುತ್ತಿದೆ. ಬಂದೋಬಸ್ತ್ ವ್ಯವಸ್ಥೆ ಸಮರ್ಪಕವಾಗಿರಲಿಲ್ಲ ಎಂಬ ವಿಚಾರ ತನಿಖೆಯಲ್ಲಿ ಬಯಲಾಗಿದೆ. ಅಲ್ಲದೇ ಕ್ರೀಡಾಂಗಣದ ಒಳಗೆ 79 ಪೊಲೀಸರು ಮಾತ್ರ ಇದ್ದರು. ಹೊರಗೆ ಪೊಲೀಸರು ಇರಲಿಲ್ಲ. ತುರ್ತು ವಾಹನ, ಅಂಬುಲೆನ್ಸ್ ವ್ಯವಸ್ಥೆ ಅಪೂರ್ಣವಾಗಿತ್ತು. 3:25ಕ್ಕೆ ಕಾಲ್ತುಳಿತ ಸಂಭವಿಸಿದ್ದರೂ. 5:30ರವರೆಗೆ ಪೊಲೀಸ್ ಕಮಿಷನರ್‌ಗೆ ಮಾಹಿತಿ ಇಲ್ಲ. 4 ಗಂಟೆಗೆ ಜಂಟಿ ಪೊಲೀಸ್ ಆಯುಕ್ತರು ಕ್ರೀಡಾಂಗಣಕ್ಕೆ ಬಂದಿದ್ದರು. ಈ ವರದಿಯನ್ನು ಸರ್ಕಾರದ ಸಚಿವ ಸಂಪುಟ ಅಂಗೀಕರಿಸಿದರೆ ದಾಖಲಾಗಿರುವ ಪ್ರಕರಣದಲ್ಲಿ ಈ ಅಧಿಕಾರಿಗಳನ್ನು ಆರೋಪಿಗಳಾಗಿ ಸೇರಿಸುವುದು.

ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ದೊಡ್ಡ ಮಟ್ಟದ ಕಾರ್ಯಕ್ರಮವನ್ನು ಮಾಡಿದ್ದು ಸರಿಯಲ್ಲ.

ಗೇಟ್‌ಗಳು ಅತ್ಯಂತ ಚಿಕ್ಕದಾಗಿತ್ತು. ಕ್ರೀಡಾಂಗಣದಲ್ಲಿ ಫೈರ್ ಸೇಫ್ಟಿ ವ್ಯವಸ್ಥೆ ಇರಲಿಲ್ಲ. 1,650 ಪೊಲೀಸ್ ಅಧಿಕಾರಿಗಳು ಭದ್ರತೆಗೆ ನಿಯೋಜನೆ ಆಗಿತ್ತು ಎಂಬುದು ಸುಳ್ಳು. 800ಕ್ಕಿಂತ ಕಡಿಮೆ ಜನರ ಭದ್ರತೆಗೆ ನಿಯೋಜನೆ ಆಗಿದ್ದರು ಎಂದು ವರದಿಯಲ್ಲಿ ತಿಳಿದುಬಂದಿದೆ.

ಸಂಜೆ 5:30ರ ಬಳಿಕ ಯಾವುದೇ ಅಹಿತಕರ ಘಟನೆ ನಡೆದಿಲ್ಲ. 5:30ಕ್ಕೆ ವಿಧಾನಸೌಧದ ಬಳಿಯ ಕಾರ್ಯಕ್ರಮ ಮುಗಿದಿದೆ. ವಿಧಾನಸೌಧದ ಬಳಿ ಇದ್ದ ಜನ ಸ್ಟೇಡಿಯಂ ಬಳಿ ಬಂದಿಲ್ಲ. ಕರ್ತವ್ಯ ಲೋಪವೆಸಗಿದ ಅಧಿಕಾರಿಗಳ ವಿರುದ್ಧ ತನಿಖೆಗೆ ಹಾಗೂ ಪೊಲೀಸರ ವಿರುದ್ಧ ಎಫ್‌ಐಆರ್‌ಗೆ ಕುನ್ಹಾ ವರದಿಯಲ್ಲಿ ಶಿಫಾರಸು ಮಾಡಲಾಗಿದೆ.



ಉದಯವಾಹಿನಿ ಚಿತ್ರ

**ಚಿನ್ನಸ್ವಾಮಿ ಕಾಲ್ತುಳಿತ ಪ್ರಕರಣ**

# ಬುಡಕಟ್ಟು ವ್ಯವಹಾರಗಳ ಸಚಿವಾಲಯದಿಂದ ಪ್ರಾದೇಶಿಕ ಪ್ರಕ್ರಿಯೆ

• ಉದಯವಾಹಿನಿ, ಬೆಂಗಳೂರು

ಬುಡಕಟ್ಟು ವ್ಯವಹಾರಗಳ ಸಚಿವಾಲಯವು ಆದಿ ಕರ್ಮಯೋಗಿ ಅಭಿಯಾನದ ಅಡಿ ಮೊದಲ ಪ್ರಾದೇಶಿಕ ಪ್ರಕ್ರಿಯೆ ಪ್ರಯೋಗಾಲಯವನ್ನು ಆರ್‌ಪಿಎಲ್ ಪ್ರಾರಂಭಿಸಿತು. ಈ ಕಾರ್ಯಕ್ರಮವು ಬುಡಕಟ್ಟು ವ್ಯವಹಾರಗಳ ಸಚಿವಾಲಯದ ಉನ್ನತ ಅಧಿಕಾರಿಗಳು, ದಕ್ಷಿಣ ರಾಜ್ಯಗಳ ಹಿರಿಯ ಅಧಿಕಾರಿಗಳು ಮತ್ತು ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರಪ್ರದೇಶ ಮತ್ತು ತೆಲಂಗಾಣದ ನಾಮನಿರ್ದೇಶಿತ ರಾಜ್ಯ ಮಾಸ್ಟರ್ ತರಬೇತುದಾರರನ್ನು (ಎಸ್‌ಎಂಟಿ) ಒಂದೆಡೆ ಸೇರಲು ವೇದಿಕೆ ಒದಗಿಸಿತು. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಮಾತನಾಡಿ, ಭೂ ಹಕ್ಕುಗಳು, ಜೀವನೋಪಾಯ ಮತ್ತು ಶಿಕ್ಷಣ ಸೇರಿದಂತೆ ಮಾನವ ಅಭಿವೃದ್ಧಿ ಸೂಚಕಗಳತ್ತ ಗಮನ ಹರಿಸಬೇಕು. ಎಸ್‌ಐಆರ್‌ಡಿ ಮೈಸೂರು, ವಿಸ್ತರಣಾ ತರಬೇತಿ ಕೇಂದ್ರಗಳು ಪಂಚಾಯತ್ ಮಟ್ಟದ ಸೌಲಭ್ಯಗಳಂತಹ ತರಬೇತಿ ಮೂಲಸೌಕರ್ಯಗಳ ಮೂಲಕ ಎಎಂಟಿಗಳು, ಡಿಎಂಟಿಗಳನ್ನು ಸಬಲೀಕರಣಗೊಳಿಸಲು ರಾಜ್ಯ ಸರ್ಕಾರ ಸಂಪೂರ್ಣ ಸಾಂಸ್ಥಿಕ ಬೆಂಬಲವನ್ನು ನೀಡುತ್ತದೆ' ಎಂದರು.

# ಮತ್ತೆ ಬರಲಿದೆ ಬಸ್ ಆದ್ಯತಾ ಪಥ

## ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ಆರ್. ರಾಮಚಂದ್ರನ್ ಹೇಳಿಕೆ

• ಉದಯವಾಹಿನಿ, ಬೆಂಗಳೂರು

ಮೂರು ವರ್ಷಗಳ ಹಿಂದೆ ಸ್ಥಗಿತಗೊಂಡಿದ್ದ ಬಸ್ ಆದ್ಯತಾ ಪಥವನ್ನು ಮತ್ತೆ ತರಲು ಬಿಎಂಟಿಸಿ ಚಿಂತನೆ ನಡೆಸಿದೆ. ನಗರದ ಕೆಲವು ಭಾಗಗಳಲ್ಲಿ ಹಿಂದೆ ಬಸ್ ಗಳಿಗಾಗಿಯೇ ಪ್ರತ್ಯೇಕ ಮಾರ್ಗ ಮಾಡಲಾಗಿತ್ತು. ಇದರಿಂದ ಸಮಯ ಮತ್ತು ಇಂಧನ ಉಳಿತಾಯವಾಗುತ್ತಿತ್ತು. ಕೆ.ಆರ್.ಪುರ ಮತ್ತು ಕೇಂದ್ರ ರೇಷ್ಮೆ ಮಂಡಳಿ ಜಂಕ್ಷನ್ ನಡುವಿನ ಹೊರವರ್ತುಲ ರಸ್ತೆಯಲ್ಲಿ ನಮ್ಮ ಮೆಟ್ರೊ ನೀಲಿ ಮಾರ್ಗದ ಕಾಮಗಾರಿಗಾಗಿ 2022ರಲ್ಲಿ ಬಸ್ ಆದ್ಯತಾ ಪಥ ಸ್ಥಗಿತಗೊಳಿಸಲಾಗಿತ್ತು. ಕ್ರಮೇಣ ಉಳಿದ ಭಾಗಗಳಲ್ಲಿಯೂ ಆದ್ಯತಾ ಪಥಕ್ಕೆ ಆದ್ಯತೆ ಇಲ್ಲವಾಗಿತ್ತು.

ಹೊರ ವರ್ತುಲ ರಸ್ತೆಯಲ್ಲಿ ಬಸ್ ಆದ್ಯತಾ ಪಥ ಹೇಗೆ ನಿರ್ವಹಿಸುವುದು ಎಂದು ಬಿಎಂಆರ್‌ಸಿಎಲ್ ಬಿಬಿಎಂಪಿ, ಡಲ್ಟ್, ಬೆಂಗಳೂರು ಸಂಚಾರ ಪೊಲೀಸ್ ಸೇರಿದಂತೆ ಸಂಬಂಧಪಟ್ಟ ವಿವಿಧ ಇಲಾಖೆ ಸಂಸ್ಥೆಗಳೊಂದಿಗೆ ಮಾತುಕತೆ ನಡೆಸಲಾಗುವುದು. ಈ ಬಗ್ಗೆ ಈಗಾಗಲೇ ಪತ್ರ ವ್ಯವಹಾರ ನಡೆಸಲಾಗಿದೆ ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ಆರ್. ರಾಮಚಂದ್ರನ್ ತಿಳಿಸಿದ್ದಾರೆ.

ಮೆಟ್ರೊ ಕಾಮಗಾರಿಗಳು ಮುಗಿಯುವ ಹೊತ್ತಿಗೆ ರಸ್ತೆಗಳು ಹಿಂದಿನ ರೀತಿಯಲ್ಲಿ ಇರುವುದಿಲ್ಲ. ಪರಿಸ್ಥಿತಿ ಬದಲಾಗಿರುತ್ತದೆ. ರಸ್ತೆಗಳನ್ನು ಪುನರ್‌ನಿರ್ಮಿಸಬೇಕಾಗುತ್ತದೆ. ಆಗ ಬಸ್ ಆದ್ಯತಾ ಪಥಕ್ಕೆ ಯೋಜನೆಯನ್ನು ಮರು ವಿನ್ಯಾಸಗೊಳಿಸಬೇಕಾಗಿದೆ ಎಂದು ಅವರು ವಿವರಿಸಿದ್ದಾರೆ. ಕೆ.ಆರ್.ಪುರ ಮತ್ತು ಕೇಂದ್ರ ರೇಷ್ಮೆ ಮಂಡಳಿ ನಡುವಿನ 17 ಕಿ.ಮೀ. ರಸ್ತೆಯಲ್ಲಿ ಆದ್ಯತಾ ಪಥಕ್ಕೆ ಗಮನ ನೀಡಲಾಗುವುದು. ಐದು ವರ್ಷಗಳ ಹಿಂದಿನ ಸಮೀಕ್ಷೆಯ ದತ್ತಾಂಶಗಳನ್ನು ಇಟ್ಟುಕೊಂಡು ಯೋಜನೆ ರೂಪಿಸಲು ಸಾಧ್ಯವಿಲ್ಲ. ಅದಕ್ಕಾಗಿ ಮತ್ತೊಮ್ಮೆ ಸಮೀಕ್ಷೆ, ಅಧ್ಯಯನ ನಡೆಸಬೇಕಾಗುತ್ತದೆ ಎಂದು ತಿಳಿಸಿದ್ದಾರೆ.

ಹೊರವರ್ತುಲ ರಸ್ತೆಯಲ್ಲಿ ಬಿಎಂಟಿಸಿ ಸಂಸ್ಥೆಯ 300ಕ್ಕೂ ಅಧಿಕ ಬಸ್‌ಗಳು ಹೊರವರ್ತುಲ ರಸ್ತೆಯಲ್ಲಿ ಸಂಚರಿಸುತ್ತಿವೆ. ಹಿಂದೆ ಆದ್ಯತಾ ಪಥ ಇದ್ದಾಗ ಈ ಮಾರ್ಗದಲ್ಲಿ ಪ್ರಯಾಣದ ಅವಧಿ ಕನಿಷ್ಠ 15 ನಿಮಿಷಗಳಷ್ಟು ಕಡಿಮೆಯಾಗುತ್ತಿತ್ತು. ಇಂಧನ ಬಳಕೆಯೂ ಕಡಿಮೆ ಇತ್ತು. ಆದ್ಯತಾ ಪಥ ಮತ್ತೆ ಆರಂಭಗೊಂಡರೆ ಬಸ್‌ಗಳು ಬೇಗ ಸಂಚರಿಸಲು ಅನುಕೂಲವಾಗುತ್ತದೆ. ವಾಹನದಟ್ಟಣೆಯ ರಸ್ತೆಯಲ್ಲಿ ಸಿಲುಕುವ ಪ್ರಮೇಯ ತಪ್ಪಲಿದೆ ಎಂದು ಬಿಎಂಟಿಸಿಯ ಮುಖ್ಯ ಸಂಚಾರ ವ್ಯವಸ್ಥಾಪಕ (ಕಾರ್ಯಾಚರಣೆ) ಜಿ.ಟಿ. ಪ್ರಭಾಕರ್ ರೆಡ್ಡಿ ಹೇಳಿದರು. ಸಾರ್ವಜನಿಕ ಸಾರಿಗೆ ಬಳಕೆಯಾಗಲಿ 'ಬಸ್ ಆದ್ಯತಾ ಪಥ ಮತ್ತೆ ನಿರ್ಮಾಣವಾಗುವ ಬಗ್ಗೆ ನಮಗೆ ಯಾವುದೇ ಮಾಹಿತಿ ಬಂದಿಲ್ಲ. ಆದರೆ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ಸಾರ್ವಜನಿಕ ಸಾರಿಗೆಯನ್ನು ಜನರು ಹೆಚ್ಚು ಬಳಸುವಂತಾಗಲು ಆದ್ಯತಾ ಪಥ ಮುಖ್ಯ' ಎಂದು ಪೂರ್ವ ವಿಭಾಗದ ಸಂಚಾರ ಉಪ ಪೊಲೀಸ್ ಆಯುಕ್ತ ಸಾಹಿಲ್ ಬಾಗ್ಲಾ ಈ ಬಗ್ಗೆ ಪ್ರತಿಕ್ರಿಯಿಸಿದರು.



ಉದಯವಾಹಿನಿ ಚಿತ್ರ

**ಐದು ವರ್ಷಗಳ ಹಿಂದಿನ ಸಮೀಕ್ಷೆ**

> ಹೊರವರ್ತುಲ ರಸ್ತೆಯಲ್ಲಿ ವಾಹನದಟ್ಟಣೆ ಕಡಿಮೆಯಾಗಬೇಕಿದ್ದರೆ ಐಟಿ ಪಾರ್ಕ್‌ಗಳ ಉದ್ಯೋಗಿಗಳು ಬಿಎಂಟಿಸಿ ಬಸ್‌ನಂಥ ಸಾರ್ವಜನಿಕ ಸಾರಿಗೆ ಕಡೆಗೆ ಮುಖ ಮಾಡಬೇಕು ಎಂದು ಬೆಂಗಳೂರು ನಗರದ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಹೇಳಿದರು. ವಿಮಾನ ನಿಲ್ದಾಣಕ್ಕೆ ಉತ್ತಮ ವೋಲ್ವೊ ಬಸ್‌ಗಳು ಸಂಚರಿಸುತ್ತಿವೆ. ಟೆಕ್ ಪಾರ್ಕ್‌ಗಳ ಕಡೆಗೂ ಇಂಥದ್ದೇ ಬಸ್‌ಗಳನ್ನು ನಿಯೋಜಿಸಬೇಕು. ಖಾಸಗಿ ವಾಹನಗಳಲ್ಲಿ ಸಂಚರಿಸುತ್ತಿರುವ ಟೆಕ್ ಪಾರ್ಕ್‌ಗಳ ಉದ್ಯೋಗಿಗಳಲ್ಲಿ ಶೇ 20ರಷ್ಟು ಜನರು ಬಸ್‌ಗಳಲ್ಲಿ ಸಂಚರಿಸಿದರೆ ವಾಹನದಟ್ಟಣೆ ಗಣನೀಯವಾಗಿ ಕಡಿಮೆಯಾಗಲಿದೆ ಎಂದು ತಿಳಿಸಿದರು.

# ರಸ್ತೆಯಲ್ಲಿ ಚಲಿಸುತ್ತಿದ್ದ ಕಾರಿನ ಮೇಲೆ ಬಿದ್ದ ಮರ: ಚಾಲಕ

• ಉದಯವಾಹಿನಿ, ಬೆಂಗಳೂರು

ನಗರದಲ್ಲಿ ಸುರಿದ ಭಾರಿ ಮಳೆಗೆ ಶೇಷಾದ್ರಿಪುರ ಕಾನೂನು ಕಾಲೇಜು ಹಿಂಭಾಗದ ರಸ್ತೆಯಲ್ಲಿ ಚಲಿಸುತ್ತಿದ್ದ ಕಾರಿನ ಮೇಲೆ ಮರ ಬಿದ್ದಿದ್ದು, ಚಾಲಕ ಸೇರಿ ಮೂವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಮರ ಬಿದ್ದ ರಭಸಕ್ಕೆ ಕಾರಿನ ಗಾಜು ಸಂಪೂರ್ಣ ಜಖಂ ಆಗಿದ್ದು, ಪ್ರಯಾಣಿಕರಿಗೆ ಪೆಟ್ಟಾಗಿಲ್ಲ.



ಎರಡು ವಿದ್ಯುತ್ ಕಂಬಗಳು ತುಂಡಾಗಿವೆ. ಇದರಿಂದಾಗಿ ಕೆಲಕಾಲ ಸಂಚಾರ ಅಸ್ತವ್ಯಸ್ತವಾಗಿತ್ತು. ಸ್ಥಳಕ್ಕೆ ಬಿಬಿಎಂಪಿ, ಅರಣ್ಯ ಇಲಾಖೆ, ಬೆಸ್ಕಾಂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ, ಮರಗಳನ್ನು ತೆರವುಗೊಳಿಸಿದ್ದಾರೆ. ಬೆಸ್ಕಾಂ ಸಿಬ್ಬಂದಿ ವಿದ್ಯುತ್ ಕಂಬ ದುರಸ್ತಿಗೊಳಿಸಿದ್ದಾರೆ.


# ನಗರಾಭಿವೃದ್ಧಿ ಸಚಿವರಾದ ಬಿ.ಎಸ್.ಸುರೇಶ್ ರವರ ಭರವಸೆ ಮೇರೆಗೆ ಪಾಲಿಕೆ ನೌಕರರ ಪ್ರತಿಭಟನೆ ತಾತ್ಕಾಲಿಕ ಮುಂದೂಡಿಕೆ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘದವತಿಯಿಂದ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಹಮ್ಮಿಕೊಂಡಿರುವ ಪ್ರತಿಭಟನೆ/ಮುಷ್ಕರವನ್ನು ತಾತ್ಕಾಲಿಕವಾಗಿ ಮುಂದೂಡಿರುವ ಬಗ್ಗೆ.

ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘದ ವತಿಯಿಂದ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಹಮ್ಮಿಕೊಂಡಿರುವ ಪ್ರತಿಭಟನೆ/ಮುಷ್ಕರಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ನಿರ್ದೇಶನದ ಮೇರೆಗೆ ನಗರಾಭಿವೃದ್ಧಿ ಸಚಿವರಾದ ಬಿ.ಎಸ್.ಸುರೇಶ್ ರವರು ಪತ್ರದ ಮೂಲಕ ದಿನಾಂಕ:11-07-2025 ರಲ್ಲಿ ತಿಳಿಸಿರುವಂತೆ, ದಿನಾಂಕ: 15-07-2025 ಮಂಗಳವಾರ ಸಂಘದ ಪದಾಧಿಕಾರಿಗಳ ಜೊತೆ ಸಭೆ ಕರೆದು ಚರ್ಚಿಸಿ/ತೀರ್ಮಾನಿಸಿ ನಿಯಮಾನುಸಾರ ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳುವುದಾಗಿ ಇಂದೇ ಪ್ರತಿಭಟನೆ/ಮುಷ್ಕರವನ್ನು ಅಂತ್ಯಗೊಳಿಸಿ ಈ ಕೂಡಲೇ ಕರ್ತವ್ಯಕ್ಕೆ ಹಾಜರಾಗಬೇಕೆಂದು ತಿಳಿಸಿರುವ ಹಿನ್ನಲೆಯಲ್ಲಿ, ತಮ್ಮ ಆದೇಶ ಮೇರೆಗೆ ಇಂದು ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘದ ಪದಾಧಿಕಾರಿಗಳೊಂದಿಗೆ ಗೂಗಲ್ ಮೀಟ್ ಮೂಲಕ ಸಭೆಮಾಡಿ ಸಭೆಯ ನಿರ್ಣಯ/ತೀರ್ಮಾನದಂತೆ ಈ ತಕ್ಷಣದಿಂದ ಜಾರಿಗೆ ಬರುವಂತೆ ತಾತ್ಕಾಲಿಕವಾಗಿ ಪ್ರತಿಭಟನೆ/ಮುಷ್ಕರವನ್ನು ಮುಂದೂಡಲಾಗುವುದು.

ಹಾಗೂ ನಮ್ಮ ನ್ಯಾಯಾಯುತ ಬೇಡಿಕೆಗಳು ಈಡೇರಿಸದೆ ಇದ್ದಲ್ಲಿ ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘದ ಪದಾಧಿಕಾರಿಗಳ ಜೊತೆ ಚರ್ಚಿಸಿ/ತೀರ್ಮಾನಿಸಿ ಮುಂದಿನ ಹೋರಾಟದ ಬಗ್ಗೆ ನಿಲುವು ಪ್ರಕಟಿಸಲಾಗುವುದೆಂದು ಈ ಮೂಲಕ ತಿಳಿಯಪಡಿಸುತ್ತಾ ಮನವಿ ಮಾಡಿಕೊಳ್ಳುತ್ತೇವೆ.



ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘ

# ನೀರಾವರಿ ಯೋಜನೆ ರೂಪಿಸಲು ಡಿಪಿಆರ್ ತಯಾರಿಗೆ ಸೂಚನೆ

## ಕಬಿನಿ ಜಲಾಶಯದ ವ್ಯಾಪ್ತಿಯ ಕೃಷಿ ಪ್ರದೇಶಗಳಿಗೆ ಕಟ್ಟು ಪದ್ಧತಿ ಮಾದರಿಯಲ್ಲಿ ನೀರು ಬಿಡುಗಡೆಗೆ ನಿರ್ಧಾರ

• ಉದಯವಾಹಿನಿ, ಮೈಸೂರು

ಕಬಿನಿ ಜಲಾಶಯದ ವ್ಯಾಪ್ತಿಯ ಕೃಷಿ ಪ್ರದೇಶಗಳಿಗೆ ಕಟ್ಟು ಪದ್ಧತಿ ಮಾದರಿಯಲ್ಲಿ ನೀರು ಹರಿಸಲು ನಿರ್ಧರಿಸಲಾಗಿದೆ. ಕಾಡಾ ಕಚೇರಿ ಸಭಾಂಗಣದಲ್ಲಿ ಶನಿವಾರ ಕಬಿನಿ ಜಲಾಶಯದ ಅಚ್ಚುಕಟ್ಟು ಪ್ರದೇಶದ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ಈ ನಿರ್ಧಾರ ಪ್ರಕಟಿಸಿದ ಸಮಿತಿ ಅಧ್ಯಕ್ಷರೂ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಎಚ್.ಸಿ. ಮಹದೇವಪ್ಪ ಅವರು, ಜುಲೈ 25ರಿಂದ ಕಬಿನಿ ವ್ಯಾಪ್ತಿಯ ನಾಲೆಗಳಿಗೆ ನೀರು ಹರಿಸಲಾಗುವುದು, ಎಂದು ಹೇಳಿದರು. ಕಟ್ಟು ಪದ್ಧತಿಯ ಆಧಾರದಲ್ಲಿ ಖಾರೀಫ್ -2025ರ ಬೆಳೆಗಳಿಗೆ ಒಟ್ಟು 110 ದಿನಗಳ ನಾಲ್ಕು ಅವಧಿಯಲ್ಲಿ ನಾಲೆಗಳಿಗೆ ನೀರು ಹರಿಸಲಾಗುತ್ತದೆ. ಜುಲೈ 25ರಿಂದ 25 ದಿನಗಳ ಕಾಲ ನೀರು ಹರಿಸಲಾಗುತ್ತದೆ. ಮತ್ತೆ ಆಗಸ್ಟ್ 29ರಿಂದ 15 ದಿನಗಳ ಕಾಲ, ಸೆ.23ರಿಂದ 15 ದಿನಗಳ ಕಾಲ ಮತ್ತು ಅಕ್ಟೋಬರ್ 23ರಿಂದ 20 ದಿನಗಳ ಕಾಲ ನಾಲೆಗಳಿಗೆ ನೀರು ಹರಿಸಲಾಗುವುದು. ಉಳಿದ ದಿನಗಳಲ್ಲಿ ನಾಲೆಗೆ ನೀರು ಹರಿಸುವುದನ್ನು ನಿಲ್ಲಿಸಲಾಗುವುದು ಎಂದು ಸಮಿತಿಯ ಸದಸ್ಯ ಕಾರ್ಯದರ್ಶಿ ಹಾಗೂ ಕಬಿನಿ ಮತ್ತು ವರುಣಾ ನಾಲಾ ವೃತ್ತದ ಅಧೀಕ್ಷಕ ಎಂಜಿನಿಯರ್ ಕೆ. ಮಹೇಶ್ ಅವರು ನೀಡಿದ ಮಾಹಿತಿಗೆ ಸಚಿವರು ಸಮ್ಮತಿ ಸೂಚಿಸಿದರು.



ಇದರಿಂದ ಕಬಿನಿ ಎಡ ದಂಡೆ ಮತ್ತು ಬಲ ದಂಡೆ ನಾಲೆಗಳ ಒಟ್ಟು 1,08,060 ಎಕರೆ ಅಚ್ಚುಕಟ್ಟು ಪ್ರದೇಶದ ಖಾರೀಫ್ ಬೆಳೆಗೆ ಅನುಕೂಲವಾಗಲಿದೆ, ಎಂದು ಹೇಳಿದರು. ಕಬಿನಿ ಜಲಾಶಯದಲ್ಲಿ 18.36 ಟಿಎಂಸಿ ಸಂಗ್ರಹಣೆಯಿದ್ದು, ನೀರಾವರಿ ಬಳಕೆಗಾಗಿ 8.54 ಟಿಎಂಸಿ ಇರುತ್ತದೆ. ಕಬಿನಿ ಜಲಾಶಯದ ಎಡ ಮತ್ತು ಬಲದಂಡೆ ನಾಲೆಗಳ 1,08,060 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಬೇಕಾಗಿದ್ದು, ಕಬಿನಿ ಬಲ ಮತ್ತು ಎಡ ದಂಡೆ ನಾಲೆಗಳಿಗೆ 2390 ಕ್ಯುಸೆಕ್ ಹಾಗೂ ಕುಡಿಯುವ ನೀರು ಮತ್ತು ಅಣೆಕಟ್ಟು ನಾಲೆಗೆ 800 ಕ್ಯುಸೆಕ್ ನೀರನ್ನು 120 ದಿನಗಳ ಅವಧಿಗೆ ಹರಿಸಲು 33 ಟಿಎಂಸಿ ನೀರಿನ ಅವಶ್ಯಕತೆ ಇರುತ್ತದೆ.

> ಕಬಿನಿ ಜಲಾಶಯದ ಅಭಿವೃದ್ಧಿಗೆ ಮತ್ತೆ ಹೆಚ್ಚುವರಿ ಅನುದಾನಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಕಬಿನಿ ಭಾಗದಲ್ಲಿ ಆದ್ಯತೆ ಮೇರೆಗೆ ಕಾಮಗಾರಿಗಳನ್ನು ನಡೆಸಬೇಕು
> -ಡಾ.ಎಚ್.ಸಿ.ಮಹದೇವಪ್ಪ, ಜಿಲ್ಲಾಉಸ್ತುವಾರಿ ಸಚಿವರು

**ಬಾಗಿನ ಅರ್ಪಿಸಿ ನೀರು ಬಿಡಿ**

ಕಬಿನಿ ಜಲಾಶಯಕ್ಕೆ ಬಾಗಿನ ಅರ್ಪಿಸಿ ಅನಂತರ ನಾಲೆಗಳಿಗೆ ನೀರು ಬಿಡುಗಡೆ ಮಾಡಬೇಕು. ಕಬಿನಿ ಜಲಾಶಯ ನಿರ್ಮಾಣಗೊಂಡು 5 ದಶಕಗಳಾಗಿದ್ದು, ಕಬಿನಿ ಜಲಾಶಯವನ್ನು ಆಧುನೀಕರಣ ಮಾಡಬೇಕು ಎಂದು ಶಾಸಕ ಅನಿಲ್ ಚಿಕ್ಕಮಾದು ಸಭೆಯ ಗಮನಕ್ಕೆ ತಂದರು.

ಕಳೆದ ಹತ್ತು ವರ್ಷಗಳಲ್ಲಿ ಕನಿಷ್ಠ 41.01 ಟಿಎಂಸಿ ಹಾಗೂ ಗರಿಷ್ಠ 196.81 ಟಿಎಂಸಿ ನಷ್ಟು ನೀರಿನ ಒಳಹರಿವು ಇದ್ದು, ಸರಾಸರಿ 119.91 ಟಿಎಂಸಿ ನಷ್ಟು ನೀರಿನ ಒಳಹರಿವು ಕಬಿನಿ ಜಲಾಶಯಕ್ಕೆ ಇರುತ್ತದೆ. ಸದ್ಯದ ಸರಾಸರಿ ಒಳಹರಿವು ಆಧಾರದ ಮೇರೆಗೆ ಕಟ್ಟು ಪದ್ಧತಿಯಲ್ಲಿ ನಾಲೆಗಳಿಗೆ ಮತ್ತು ಕೆರೆಗಳಿಗೆ ನೀರನ್ನು ಹರಿಸಬಹುದಾಗಿದೆ, ಎಂದು ಸಭೆಗೆ ಅಧಿಕಾರಿಗಳು ಮಾಹಿತಿ ನೀಡಿದರು.

**ಉದ್ಬೂರು ಕೆರೆ ತುಂಬಿಸಿ**

ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮಾತನಾಡಿ, ಮೈಸೂರು ತಾಲ್ಲೂಕಿನ ಉದ್ಬೂರು ಕೆರೆಯನ್ನು ತುಂಬಿಸಬೇಕು. ಈ ಕೆರೆಯಿಂದ ಸಾವಿರಾರು ಎಕರೆ ಪ್ರದೇಶಗಳಿಗೆ ನೀರು ಹರಿಯಲಿದೆ. ತಕ್ಷಣವೇ ನೀರು ಹರಿಸಬೇಕು ಎಂದು ಒತ್ತಾಯಿಸಿದರು.

**ಶಾಶ್ವತ ನೀರಾವರಿಗೆ ಯೋಜನೆ:** ಸಚಿವ ಡಾ.ಎಚ್.ಸಿ.ಮಹದೇವಪ್ಪ ಮಾತನಾಡಿ, ಕಬಿನಿ ಜಲಾಶಯದ ವ್ಯಾಪ್ತಿಯ ಅಚ್ಚುಕಟ್ಟು ಪ್ರದೇಶಗಳಿಗೆ ನೀರು ಒದಗಿಸುವ ಹಾಗೂ ಕೈಬಿಟ್ಟು ಹೋಗಿರುವ ಪ್ರದೇಶಗಳಿಗೆ ನೀರು ಹರಿಸಲು ಶಾಶ್ವತ ಯೋಜನೆ ರೂಪಿಸಲು ಡಿಪಿಆರ್ ತಯಾರಿಸಿ, ಎಂದು ಹೇಳಿದರು. ಕಬಿನಿ ಜಲಾಶಯದಿಂದ ಅಚ್ಚುಕಟ್ಟು ಪ್ರದೇಶಗಳ ಕೊನೆಯ ಭಾಗಕ್ಕೆ ನೀರು ತಲುಪಿಸುವುದು. ತಾರಕ, ನುಗು ಜಲಾಶಯವನ್ನು ಬಳಸಿಕೊಳ್ಳಬೇಕು. ಹಾಗಾಗಿ, ವಿಸ್ತೃತವಾದ ಯೋಜನಾ ವರದಿಯನ್ನು ಸಿದ್ಧಪಡಿಸಿ, ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

# ಸಿದ್ದರಾಮಯ್ಯ ಬಳಿಕ ಡಿ.ಕೆ.ಶಿವಕುಮಾರ್‌ಗೇ ಅವಕಾಶ ಕೊಡಲಿ: ಶಾಸಕ ಬಾಲಕೃಷ್ಣ

• ಉದಯವಾಹಿನಿ, ಬಿಡದಿ



ಸಿದ್ದರಾಮಯ್ಯ ಅವರು ಸಿಎಂ ಆಗಿ ಐದು ವರ್ಷ ಇರುತ್ತಾರೊ ಅಥವಾ ಹತ್ತು ವರ್ಷ ಇರುತ್ತಾರೊ ಗೊತ್ತಿಲ್ಲ. ಅವರ ನಂತರ ಡಿ.ಕೆ.ಶಿವಕುಮಾರ್ ಅವರಿಗೆ ಅವಕಾಶ ಕೊಡಬೇಕಷ್ಟೆ ಎಂದು ಮಾಗಡಿ ಶಾಸಕ ಎಚ್.ಸಿ.ಬಾಲಕೃಷ್ಣ ಹೇಳಿದರು. ಎಲ್ಲರಿಗೂ ಎಲ್ಲಾ ರೀತಿಯ ಬಲವಿರುವುದಿಲ್ಲ. ಇಲ್ಲಿ ಬಲಾಬಲದ ಪ್ರಶ್ನೆಯೇ ಬರಲ್ಲ. ಬದಲಿಗೆ ಪಕ್ಷದ ಹೈಕಮಾಂಡ್ ತೀರ್ಮಾನವೇ ಅಂತಿಮ ಎಂದು ಅವರು ಸ್ಪಷ್ಟಪಡಿಸಿದರು. ಐದು ವರ್ಷ ನಾನೇ ಸಿ.ಎಂ, ಡಿಕೆಶಿಗೆ ಶಾಸಕರ ಬಲ ಕಡಿಮೆ ಇದೆ ಎಂಬ ಸಿದ್ದರಾಮಯ್ಯ ಹೇಳಿಕೆ ಕುರಿತು ಸುದ್ದಿಗಾರರ ಪ್ರಶ್ನೆಗೆ ಅವರು ಪ್ರತಿಕ್ರಿಯಿಸಿದರು.

ಅವರು, ಶಿವಕುಮಾರ್ ಅವರಿಗೆ ಶಾಸಕರ ಬಲ ಇದೆಯೋ ಇಲ್ಲವೋ ಅಂತ ನಾನು ಹೇಳಲ್ಲ. ಎಲ್ಲರಿಗೂ ಎಲ್ಲಾ ರೀತಿಯ ಬಲ ಇರುವುದಿಲ್ಲ. ಸಿದ್ದರಾಮಯ್ಯ ಅವರಿಗೆ ಈಗ ಹೆಚ್ಚು ಶಾಸಕರ ಬಲವಿರಬಹುದು. ನಂತರದ ಸ್ಥಾನದಲ್ಲಿ ನಾವಿದ್ದೇವೆ ಎಂದರು. ಸ್ವಾಮೀಜಿಗಳು, ಮುಖಂಡರು ಕಾರ್ಯಕರ್ತರಿಗೆ ಶಿವಕುಮಾರ್ ಸಿಎಂ ಆಗಬೇಕೆಂಬ ಅಭಿಲಾಷೆ ಇದೆ.

ಪಕ್ಷಕ್ಕಾಗಿ ಶ್ರಮಪಟ್ಟಿರುವುದರಿಂದ ಅವಕಾಶ ಸಿಗಬೇಕು ಎನ್ನುವುದು ಜನಜನಿತ. ಸಿದ್ದು ಅವರನ್ನು ಇಳಿಸಿ ನಾಳೆಯೇ ಡಿಕೆಶಿ ಅವರನ್ನು ಸಿಎಂ ಮಾಡಿ ಅಂತ ಕೇಳಲ್ಲ. ಏನಿದ್ದರೂ ಹೈಕಮಾಂಡ್ ತೀರ್ಮಾನಿಸಬೇಕು ಎಂದು ತಿಳಿಸಿದರು.


ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರ ಜತೆ ರಾಜಕೀಯ ಕುರಿತು ಚರ್ಚಿಸಿಲ್ಲ. ಕ್ಷೇತ್ರದ ಅಭಿವೃದ್ಧಿ ಬಗ್ಗೆ ಮಾತನಾಡಿದ್ದೇನೆ. ಸಚಿವ ಸಂಪುಟ ವಿಸ್ತರಣೆ ವಿಷಯವನ್ನು ನಾಯಕರು ಮತ್ತು ಹೈಕಮಾಂಡ್ ನೋಡಿಕೊಳ್ಳುತ್ತಾರೆ. ನನಗೂ ಸಚಿವನಾಗುವ ಆಸೆ ಇದೆ. ಆದರೆ, ಎಲ್ಲವನ್ನೂ ನಿರ್ಧರಿಸುವುದು ಹೈಕಮಾಂಡ್ ಎಂದರು.

# ಬೂತ್ ಮಟ್ಟದ ಅಧಿಕಾರಿಯಾಗಿ ನಿಯೋಜನೆ ಬೇಡ

• ಉದಯವಾಹಿನಿ, ಬಾಗೇಪಲ್ಲಿ

ಅಂಗನವಾಡಿ ಕಾರ್ಯಕರ್ತೆಯರಿಗೆ ಬೂತ್ ಮಟ್ಟದ ಅಧಿಕಾರಿಗಳನ್ನು ನಿಯೋಜಿಸಬಾರದು ಎಂದ ಒತ್ತಾಯಿಸಿ ತಾಲ್ಲೂಕು ಅಂಗನವಾಡಿ ನೌಕರರ ಸಂಘದ ನೇತೃತ್ವದಲ್ಲಿ ಮುಖಂಡರು ಗುರುವಾರ ಶಿರಸ್ತೇದಾರ್ ಮಂಜುನಾಥ್ ಹಾಗೂ ಶಿಶು ಕಲ್ಯಾಣ ಯೋಜನಾಧಿಕಾರಿ ರಾಮಚಂದ್ರ ಅವರಿಗೆ ಮನವಿ ಪತ್ರ ಸಲ್ಲಿಸಿದರು. ಅಂಗನವಾಡಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷೆ ಜಿ.ಎಂ.ಲಕ್ಷ್ಮೀದೇವಮ್ಮ ಮಾತನಾಡಿ, ಬಾಗೇಪಲ್ಲಿ ತಾಲ್ಲೂಕಿನಲ್ಲಿ 75 ಅಂಗನವಾಡಿ ಕಾರ್ಯಕರ್ತೆಯರನ್ನು ಚುನಾವಣಾ ಕಾರ್ಯಗಳಿಗೆ ಬೂತ್ ಮಟ್ಟದ ಅಧಿಕಾರಿಗಳನ್ನು ನಿಯೋಜನೆ ಮಾಡಲಾಗಿದೆ. ಇದರಿಂದ ನಮಗೆ ತೊಂದರೆ ಆಗಲಿದೆ ಎಂದು ತಿಳಿಸಿದರು.

ಆದರೆ ಚುನಾವಣಾ ಆಯೋಗದ ಸುತ್ತೋಲೆಯಲ್ಲಿ ಪ್ರಜಾಪ್ರತಿನಿಧಿ ಕಾಯ್ದೆ ಅನ್ವಯ ಬೂತ್ ಮಟ್ಟದ ಅಧಿಕಾರಿಗಳನ್ನು ನೇಮಕ ಮಾಡುವ ಸಂಧರ್ಭದಲ್ಲಿ ಗ್ರೂಪ್ ಸಿ ದರ್ಜೆಯ ಸರ್ಕಾರಿ ಹಾಗೂ ಸ್ಥಳೀಯ ಸಂಸ್ಥೆಗಳ ಕಾಯಂ ನೌಕರರನ್ನು ನೇಮಿಸಬೇಕು. ಒಂದು ವೇಳೆ ನೌಕರರು ಇಲ್ಲದಿದ್ದಲ್ಲಿ ಗುತ್ತಿಗೆ ಶಿಕ್ಷಕರು,



ಉದಯವಾಹಿನಿ ಚಿತ್ರ

ಕೇಂದ್ರ ಸರ್ಕಾರದ ನೌಕರರು ಅಥವಾ ಅಂಗನವಾಡಿ ಕಾರ್ಯಕರ್ತೆಯರನ್ನು ನೇಮಕ ಮಾಡಲು ನಿರ್ದೇಶನ ನೀಡಿದೆ. ಆದರೆ ವಿವಿಧ ಇಲಾಖೆಗಳಲ್ಲಿ ಗ್ರೂಪ್ ಸಿ ನೌಕರರು, ಖಾಯಂ ಶಿಕ್ಷಕರನ್ನು ನೇಮಕ ಮಾಡದೇ, ಅಂಗನವಾಡಿ ನೌಕರರನ್ನು ನಿಯೋಜನೆ ಮಾಡಿರುವುದು ಸರಿಯಲ್ಲ ಎಂದು ಆಕ್ಷೇಪಿಸಿದರು.

ಸರ್ಕಾರದ ಐಸಿಡಿಎಸ್ ಯೋಜನೆಗಳಲ್ಲಿ ಅಂಗನವಾಡಿ ಮಕ್ಕಳಿಗೆ ನಿರ್ಮಿಸಬೇಕಾದ ಶಾಲಾ ಪೂರ್ವ ಶಿಕ್ಷಣಕ್ಕೆ ಹಾಗೂ ಮಕ್ಕಳ ಲಾಲನೆ, ಪಾಲನೆಗಳು ಮಾಡಲು ತೊಂದರೆ ಆಗಿದೆ. ಗರ್ಭಿಣಿ, ಬಾಣಂತಿಯರಿಗೆ ಸಕಾಲಕ್ಕೆ ಪೌಷ್ಟಿಕ ಆಹಾರ, ಪ್ರತಿದಿನದ ಅಂಕಿ-ಅಂಶಗಳನ್ನು ಆನ್‌ಲೈನ್‌ನಲ್ಲಿ ಕಳಿಸಲು ತೊಂದರೆ ಆಗಿದೆ. ಇದರಿಂದ ಅಂಗನವಾಡಿ ನೌಕರರನ್ನು ಬೂತ್ ಮಟ್ಟದ ಅಧಿಕಾರಿಗಳನ್ನು ನೇಮಕ ಮಾಡಿರುವುದನ್ನು ವಾಪಸ್ ಪಡೆಯಬೇಕು ಎಂದು ಮನವಿ ಮಾಡಿದರು.

**ಗ್ರೂಪ್ ಸಿ ನೌಕರರನ್ನು ನೇಮಕ ಮಾಡಿಕೊಳ್ಳಿ**

ಅಂಗನವಾಡಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷೆ ಕೆ.ರತ್ನಮ್ಮ, ತಾಲ್ಲೂಕಿನಲ್ಲಿ ಬೂತ್ ಮಟ್ಟದ ಅಧಿಕಾರಿಗಳ ಅಂಗನವಾಡಿ ಕಾರ್ಯಕರ್ತೆಯರ ಪೈಕಿ ವಯಸ್ಸಾದ, ಅಂಗವಿಕಲರು ಮತ್ತು ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವ ಅಂಗನವಾಡಿ ನೌಕರರನ್ನು ನೇಮಿಸಲಾಗಿದೆ. ಇದರಿಂದ ನೌಕರರು ಮಾನಸಿಕ ಒತ್ತಡಕ್ಕೆ ಸಿಲುಕಿ, ಅನಾರೋಗ್ಯದಿಂದ ಬಳಲುವಂತೆ ಮಾಡಿದೆ. ಇದರಿಂದ ಬೂತ್ ಮಟ್ಟದ ಅಧಿಕಾರಿಗಳನ್ನು ನೇಮಕ ಮಾಡಿರುವ ಅಂಗನವಾಡಿ ನೌಕರರನ್ನು ಬದಲಾಯಿಸಿ, ಗ್ರೂಪ್ ಸಿ ನೌಕರರನ್ನು ನೇಮಕ ಮಾಡಿಕೊಳ್ಳುವಂತೆ ಮನವಿ ಮಾಡಿದರು.

# ಆರ್ಥಿಕ ಸಂಕಷ್ಟದಲ್ಲಿ ನರೇಗಾ ನೌಕರರು

• ಉದಯವಾಹಿನಿ, ಮಂಡ್ಯ

ಆರು ತಿಂಗಳಿಂದ ವೇತನ ಪಾವತಿಯಾಗದಿರುವುದನ್ನು ಖಂಡಿಸಿ ನರೇಗಾ ನೌಕರರ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ತಾಲ್ಲೂಕು ಪಂಚಾಯಿತಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು. 3,632 ನೌಕರರು ನರೇಗಾ ಯೋಜನೆಯಡಿ ವಿವಿಧ ಹುದ್ದೆಗಳಲ್ಲಿ ಹೊರಗುತ್ತಿಗೆಯಡಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಉದ್ಯೋಗ ಖಾತ್ರಿ ಯೋಜನೆಯ ಸಮರ್ಪಕ ಅನುಷ್ಠಾನದಲ್ಲಿ ಭಾಗಿಯಾಗಿರುವ ನಮಗೆ ಅನ್ಯಾಯವಾಗಿದೆ. ವೇತನ ನೀಡದಿದ್ದರೆ ಮುಂದಿನ ದಿನಗಳಲ್ಲಿ ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಪ್ರತಿಭಟನೆ ನಡೆಸುತ್ತೇವೆ ಎಂದು ಎಚ್ಚರಿಕೆ ನೀಡಿದರು.

ನೌಕರರಿಗೆ ಕಳೆದ ಜನವರಿಯಿಂದ ಇಲ್ಲಿಯವರೆಗೆ ವೇತನ ಪಾವತಿಯಾಗಿಲ್ಲ. ಇದರಿಂದ ನೌಕರರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಕುಟುಂಬ ನಿರ್ವಹಣೆ, ದಿನಸಿ ಖರೀದಿ, ಮಕ್ಕಳ ಶಾಲಾ ಪ್ರವೇಶಾತಿ,



ಉದಯವಾಹಿನಿ ಚಿತ್ರ

**6 ತಿಂಗಳ ವೇತನಕ್ಕಾಗಿ ಪ್ರತಿಭಟನೆ**


ಕುಟುಂಬ ಸದಸ್ಯರ ವೈದ್ಯಕೀಯ ವೆಚ್ಚ, ಪ್ರಯಾಣವೆಚ್ಚ, ಸಾಲಗಳ ಮರುಪಾವತಿ, ಇಎಂಐ ಸೇರಿದಂತೆ ಅನೇಕ ಖರ್ಚುಗಳನ್ನು ನಿಭಾಯಿಸಲು ತೊಂದರೆ ಉಂಟಾಗುತ್ತಿದೆ ಎಂದು ಕಿಡಿಕಾರಿದರು.

ಸಕಾಲದಲ್ಲಿ ವೇತನ ಪಾವತಿಯಾಗದಿರುವುದರಿಂದ ಸ್ನೇಹಿತರು, ಸಂಬಂಧಿಕರಲ್ಲಿ ಸ್ವಾಭಿಮಾನ ಅಡವಿಟ್ಟು ಕೈಚಾಚುವ ಪರಿಸ್ಥಿತಿ ನಿರ್ಮಾಣವಾಗಿದೆ. ಖಾಸಗಿ ಲೇವಾದೇವಿಗಾರರಿಂದ ಅನಿವಾರ್ಯವಾಗಿ ಸಾಲ ಮಾಡಿ ಕುಟುಂಬ ನಿರ್ವಹಿಸುವ ದಿನನಿತ್ಯದ ಆಗುಹೋಗುಗಳನ್ನು ನೋಡಿಕೊಳ್ಳುವ ಪರಿಸ್ಥಿತಿ ಉಂಟಾಗಿದೆ ಎಂದು ದೂರಿದರು. ಬಾಕಿ ವೇತನ ಪಾವತಿ ವಿಚಾರವಾಗಿ ಮೇಲಧಿಕಾರಿಗಳು ಕೇಂದ್ರ ಸರ್ಕಾರದಿಂದ ಅನುದಾನ ಬಂದಿಲ್ಲವೆಂದು ಇಲ್ಲಿಯವರೆಗೆ ಮಾಹಿತಿ ನೀಡುತ್ತಿದ್ದರು. ಪ್ರಸ್ತುತ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಅನುದಾನ ಬಿಡುಗಡೆಯಾಗಿದೆ. ರಾಜ್ಯದಿಂದ ಜಿಲ್ಲಾ ಕೇಂದ್ರಕ್ಕೆ ಅನುದಾನ ಬಿಡುಗಡೆಯಾಗಬೇಕಿದೆ. ಆದರೆ, ಹೊಸ ತಂತ್ರಾಂಶದಲ್ಲಿ ವೇತನ ಪಾವತಿ ಮಾಡಲು ತಾಂತ್ರಿಕ ಸಮಸ್ಯೆ ಬಗೆಹರಿಯದೇ ಇರುವುದರಿಂದ ವೇತನ ಪಾವತಿ ವಿಳಂಬವಾಗುತ್ತಿದೆ ಎಂದು ಹೇಳುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

# ಸರ್ಕಾರಿ ಕಚೇರಿಗಳಲ್ಲಿ ಅನಗತ್ಯ ಕಿರಿಕಿರಿ

• ಉದಯವಾಹಿನಿ, ಪಾವಗಡ

ಸರ್ಕಾರಿ ಕಚೇರಿಗಳಲ್ಲಿ ಅನಗತ್ಯವಾಗಿ ಕಿರಿಕಿರಿ ನೀಡುತ್ತಿರುವವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಒತ್ತಾಯಿಸಿ ಸರ್ಕಾರಿ ನೌಕರರ ಸಂಘದ ತಾಲ್ಲೂಕು ಘಟಕದ ಪದಾದಿಕಾರಿಗಳು ತಹಶೀಲ್ದಾರ್ ವರದರಾಜು ಅವರಿಗೆ ಮನವಿ ಸಲ್ಲಿಸಿದರು. ಆರ್‌ಟಿಐ, ಭ್ರಷ್ಟಚಾರ ನಿಗ್ರಹ, ಇತ್ಯಾದಿ ಹೆಸರುಗಳಲ್ಲಿ ಕಚೇರಿಗೆ ಬರುವ ಕೆಲ ನೌಕರರು ಕೆಲಸ ಮಾಡುವುದಕ್ಕೂ ಬಿಡದೆ ಲೈವ್ ವಿಡಿಯೋ ಮಾಡಿ ಜಾಲತಾಣಗಳಲ್ಲಿ ಹರಿಬಿಡುತ್ತಿದ್ದಾರೆ. ಇದರಿಂದ ಸರ್ಕಾರಿ ನೌಕರರಿಗೆ ಕಿರಿಕಿರಿಯಾಗುತ್ತಿದೆ. ಪ್ರಾಮಾಣಿಕ, ಪಾರದರ್ಶಕವಾಗಿ ಕೆಲಸ ಮಾಡಲೂ ಸಾಧ್ಯವಾಗದ ಸ್ಥಿತಿ ಇದೆ ಎಂದು ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳು ಆರೋಪಿಸಿದರು. ತಾಲ್ಲೂಕು ಘಟಕದ ಅಧ್ಯಕ್ಷ ರವಿಕುಮಾರ್ ಮಾತನಾಡಿ, ಸರ್ಕಾರಿ ಕಚೇರಿಗಳಿಗೆ ಬರುವ ಕೆಲವರು ಆರ್‌ಟಿಐ, ಭ್ರಷ್ಟಾಚಾರ ನಿಗ್ರಹ ಇತ್ಯಾದಿ ಹೆಸರು ಹೇಳಿಕೊಂಡು ಸರ್ಕಾರಿ ನೌಕಕರ ಕರ್ತವ್ಯಕ್ಕೆ ಅಡ್ಡಿಪಡಿಸುತ್ತಿದ್ದಾರೆ. ಮಹಿಳಾ ನೌಕರರು ಸೇರಿದಂತೆ ನೌಕರರ ವಿಡಿಯೊ ಮಾಡಿ



ಉದಯವಾಹಿನಿ ಚಿತ್ರ

ಹರಿಬಿಟ್ಟು, ಕಚೇರಿಗಳ ವಾತಾವರಣ ಹದಗೆಡಿಸುತ್ತಿದ್ದಾರೆ.

ನೌಕರರು ಕೆಲಸ ಮಾಡಲೂ ಸಾಧ್ಯವಾಗದ ಸ್ಥಿತಿ ನಿರ್ಮಿಸುತ್ತಿದ್ದಾರೆ ಎಂದು ಆರೋಪಿಸಿದರು. ನೌಕರರನ್ನು ಬೆದರಿಸುವುದು, ಹಣಕ್ಕೆ ಬೇಡಿಕೆ ಇಡುವುದು, ಅವರಿಗೆ ಬೇಕಾದ ರೀತಿ ಕಡತಗಳನ್ನು ಸಿದ್ಧಡಿಸುವಂತೆ ಒತ್ತಡ ಹೇರುತ್ತಿದ್ದಾರೆ. ಇದರಿಂದ ನೌಕರರಿಗೆ ಮಾನಸಿಕವಾಗಿ ಹಿಂಸೆ ಆಗುತ್ತಿದ್ದು, ಕಚೇರಿಗಳಲ್ಲಿ ಕೆಲಸ ನಿರ್ವಹಿಸುವುದು ಕಷ್ಟವಾಗುತ್ತಿದೆ ಎಂದು ದೂರಿದರು. ಮನವಿ ಸ್ವೀಕರಿಸಿದ ತಹಶೀಲ್ದಾರ್ ವರದರಾಜು, ಸರ್ಕಾರಿ ನೌಕರರ ಸಮಸ್ಯೆ ಬಗ್ಗೆ ಮೇಲಧಿಕಾರಿಗಳಿಗೆ ಮಾಹಿತಿ ನೀಡಿ ಸಮಸ್ಯೆ ಬಗೆಹರಿಸಲು ಪ್ರಯತ್ನ ಮಾಡುವುದಾಗಿ ತಿಳಿಸಿದರು.

# ಒತ್ತುವರಿ ತೆರವಿಗೆ ನಾಲ್ಕು ದಿನ ಕಾಲಾವಕಾಶ

• ಉದಯವಾಹಿನಿ, ಬಂಗಾರಪೇಟೆ

ಇಲ್ಲಿನ ಕೆರೆಕೋಡಿ ವಾರ್ಡ್‌ನಲ್ಲಿ ರಸ್ತೆ ಒತ್ತುವರಿ ಮಾಡಿಕೊಂಡು ನಿರ್ಮಿಸಲಾಗಿರುವ ಮನೆಗಳ ತೆರವಿಗೆ ತಹಶೀಲ್ದಾರ್ ಎಸ್. ವೆಂಕಟೇಶಪ್ಪ ನಾಲ್ಕು ದಿನ ಕಾಲಾವಕಾಶ ನೀಡಿದ್ದಾರೆ. ಕೆರೆಕೋಡಿ ಗ್ರಾಮದಿಂದ ತಮ್ಮೇನಹಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ 20 ಅಡಿ ಅಗಲದ ರಸ್ತೆಯನ್ನು ಗ್ರಾಮಸ್ಥರು ಒತ್ತುವರಿ ಮಾಡಿಕೊಂಡು, ಮನೆ ಕಟ್ಟಿಕೊಂಡಿದ್ದಾರೆ. ಇದರಿಂದ ಸಾರ್ವಜನಿಕರು ಹಾಗೂ ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿದ್ದು, ಈ ಕುರಿತು ಕೃಷ್ಣಮೂರ್ತಿ ಲೋಕಾಯುಕ್ತದಲ್ಲಿ ದೂರು ದಾಖಲಿಸಿದ್ದರು. ಹೀಗಾಗಿ, ಸ್ಥಳಕ್ಕೆ ಭೇಟಿ ನೀಡಿದ್ದ ಲೋಕಾಯುಕ್ತ ಅಧಿಕಾರಿಗಳು, ಸರ್ವೆ ಕಾರ್ಯ ನಡೆಸಿ, ಒತ್ತುವರಿಯಾಗಿದ್ದರೆ, ತೆರವುಗೊಳಿಸಬೇಕು ಎಂದು ತಹಶೀಲ್ದಾರ್‌ಗೆ ಸೂಚಿಸಿದ್ದರು. ಈ ಪ್ರಕಾರ, ಕಂದಾಯ ಇಲಾಖೆ ಸರ್ವೆ ನಡೆಸಿದ್ದು, ಬಂಡಿ ರಸ್ತೆಯನ್ನು ಒತ್ತುವರಿ ಮಾಡಿಕೊಂಡು ಮನೆ ಕಾಂಪೌಂಡ್ ನಿರ್ಮಿಸಿಕೊಂಡಿರುವುದು ಸಾಬೀತಾಗಿದೆ. ಒತ್ತುವರಿ ತೆರವುಗೊಳಿಸಲು ಒತ್ತುವರಿದಾರರಿಗೆ ಮೂರು ಬಾರಿ ನೋಟಿಸ್



ಉದಯವಾಹಿನಿ ಚಿತ್ರ

ನೀಡಲಾಗಿತ್ತು. ಆದರೆ, ಒತ್ತುವರಿ ತೆರವುಗೊಳಿಸದ ಕಾರಣ, ತಹಶೀಲ್ದಾರ್ ವೆಂಕಟೇಶಪ್, ಪುರಸಭೆ ಮುಖ್ಯಾಧಿಕಾರಿ ಸತ್ಯನಾರಾಯಣ ಅವರು ಪೊಲೀಸ್ ಬಂದೋಬಸ್‌ನಲ್ಲಿ ತೆರವು ಕಾರ್ಯಾಚರಣೆಗೆ ಬಂದರು. ಮಣ್ಣು ತೆಗೆಯುವ ಯಂತ್ರ (ಜೆಸಿಬಿ)ದಿಂದ ಒತ್ತುವರಿ ತೆರವು ಮಾಡಿದರೆ, ಮನೆಗಳಿಗೆ ಹಾನಿಯಾಗುತ್ತದೆ. ಹೀಗಾಗಿ, ಒತ್ತುವರಿ ತೆರವಿಗೆ ಕಾಲಾವಕಾಶ ನೀಡುವಂತೆ ಗ್ರಾಮಸ್ಥರು ಮನವಿ ಮಾಡಿದರು. ಹೀಗಾಗಿ, ಒತ್ತುವರಿ ತೆರವಿಗೆ ನಾಲ್ಕು ದಿನ ಕಾಲಾವಕಾಶ ನೀಡಲಾಗಿದೆ.

# ಜ್ಞಾನದ ಬೆಳಕಿನೆಡೆಗೆ ಕೊಂಡೊಯ್ಯುವ ಶಕ್ತಿ ಗುರು

• ಉದಯವಾಹಿನಿ, ನಾಗಮಂಗಲ

ಅಪೂರ್ಣತ್ವದಿಂದ ಪೂರ್ಣತ್ವದೆಡೆಗೆ ಕೊಂಡೊಯ್ಯುವ, ಅಜ್ಞಾನದಿಂದ ನಮ್ಮನ್ನು ಜ್ಞಾನದ ಬೆಳಕೆನೆಡೆಗೆ ಕೊಂಡೊಯ್ಯುವ ನಿಜವಾದ ಶಕ್ತಿಯೇ ಗುರು ಎಂದು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು. ತಾಲ್ಲೂಕಿನ ಆದಿಚುಂಚನಗಿರಿ ಮಠದ ಬಿ.ಜಿ.ಎಸ್ ಸಭಾಂಗಣದಲ್ಲಿ ಗುರುಪೂರ್ಣಿಮೆಯ ಅಂಗವಾಗಿ ಆಯೋಜಿಸಿದ್ದ ಗುರುವಂದನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಆಶೀರ್ವಚನ ಅವರು ನೀಡಿದರು.

ಸಾಧಕರಿಗೆ ಅನುಕೂಲವಾಗಲಿ ಎಂಬ ನಿಟ್ಟಿನಲ್ಲಿ ಹಿರಿಯರು ಜ್ಞಾನವನ್ನು ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ ಎಂದು ನಾಲ್ಕು ಭಾಗಗಳಾಗಿ ಮಾಡಿದ್ದಾರೆ. ನಮ್ಮ ಬದುಕನ್ನು ಸುಂದರವಾಗುವಂತೆ ಮಾರ್ಗದರ್ಶನ ನೀಡಿದ ಗುರುಗಳನ್ನು ಸ್ಮರಿಸುವುದು ಎಲ್ಲರ ಕರ್ತವ್ಯವಾಗಿದೆ. ಜ್ಞಾನದ ಬೆಳಕು ಬುದ್ಧರು ಬೋಧನೆಯನ್ನು ಪ್ರಾರಂಭಮಾಡಿದ್ದು ಗುರು ಪೂರ್ಣಿಮೆಯ ದಿನವೇ. ಸಂನ್ಯಾಸವನ್ನು ಸ್ವೀಕರಿಸಿರುವವರ ಬದುಕು ಕತ್ತಿಯ ಮೇಲಿನ ನಡಿಗೆಯಂತೆ. ಸಮಾಜವನ್ನು ತಿದ್ದುವ, ಸರಿದಾರಿಯಲ್ಲಿ ಕೊಂಡೊಯ್ಯುವ ಹಾದಿಯಲ್ಲಿ



ಉದಯವಾಹಿನಿ ಚಿತ್ರ

ಸಂನ್ಯಾಸಿಗಳಿಗೆ ಹೆಚ್ಚು ಪರೀಕ್ಷೆ ಎದುರಾಗುತ್ತದೆ ಎಂದರು.

ಜಿಲ್ಲಾಧಿಕಾರಿ ಕುಮಾರ ಮಾತನಾಡಿ, ಆಧುನಿಕ ಸಮಾಜದಲ್ಲಿ ಗುರುವಿಗಾಗಿ ಹಂಬಲಿಸುವ ಮನಸ್ಥಿತಿಯೂ ಕಡಿಮೆಯಾಗಿದೆ. ನಮ್ಮ ಸನಾತನ ಪರಂಪರೆಯನ್ನು ನೋಡಿದಾಗ ಗುರುವನ್ನು ಸ್ಮರಿಸುವುದು ಒಂದು ದಿನಕ್ಕೆ ಸೀಮಿತವಲ್ಲ. ಗುರುವು ಪ್ರತಿ ಕ್ಷಣವೂ ಕೂಡ ಶಿಷ್ಯರ ಏಳಿಗೆಗಾಗಿ ಶ್ರಮಿಸುತ್ತಾರೆ. ಅಂತ ಗುರುವನ್ನು ಪ್ರತಿಕ್ಷಣವೂ ಸ್ಮರಿಸಿದರೂ ಕಡಿಮೆಯೇ. ಆ ನಿಟ್ಟಿನಲ್ಲಿ ಗುರುಗಳ ಮಹತ್ವವನ್ನು ಎಲ್ಲರೂ ಅರಿಯಬೇಕಿದೆ. ಗುರುಶಿಷ್ಯರ ಬಾಂಧವ್ಯ ಇಂದು ಕುಸಿಯುತ್ತಿದೆ. ನಾವು ಬೆಲೆಯುಳ್ಳ ವಸ್ತುಗಳನ್ನು ಖರೀದಿಸಬಹುದು. ಆದರೆ ನಮ್ಮ ಮೌಲ್ಯವನ್ನು ನಾವು ಬೆಳೆಸಿಕೊಳ್ಳಬೇಕು ಎಂದರು.

**ಗುರುಶಿಷ್ಯರ ಬಾಂಧವ್ಯ ಕುಸಿತ**

ಗುರುಪೂರ್ಣಿಮೆ ಅಂಗವಾಗಿ ಆದಿಚುಂಚನಗಿರಿ ಮಠದಲ್ಲಿ ಮುಂಜಾನೆಯಿಂದಲೇ ಹೋಮ ಹವನಗಳು ಜರುಗಿದವು. ಶ್ರೀಕಾಲಭೈರವೇಶ್ವರಸ್ವಾಮಿ ಸೇರಿದಂತೆ ಕ್ಷೇತ್ರಾಧಿದೇವತೆಗಳಾದ ಚಂದ್ರಮೌಳೇಶ್ವರ ಸ್ವಾಮಿ, ಗಂಗಾಧರೇಶ್ವರಸ್ವಾಮಿ, ಮಾಳಮ್ಮದೇವಿ ಮತ್ತು ಸ್ತಂಭಾಂಬಿಕೆ ದೇವಿಗೆ ನಿರ್ಮಲಾನಂದನಾಥ ಸ್ವಾಮೀಜಿ ಪೂಜೆ ಸಲ್ಲಿಸಿದರು.

# ಸೂರು ಕೊಡಿ ಇಲ್ಲವೇ, ದಯಾಮರಣ ನೀಡಿ

## ಸರಕಾರಿ ಜಾಗದಲ್ಲಿ ಪುಟ್ಟ ಜೋಪಡಿಗಳನ್ನು ನಿರ್ಮಿಸಿಕೊಂಡು ಅನಾಥರಂತೆ ಬದುಕುತ್ತಿದ್ದಾರೆ

• ಉಸಯವಾಹಿನಿ, ವಿರಾಜಪೇಟೆ

ನಾವೂ ಬದುಕಬೇಕಿದೆ, ನಮ್ಮನ್ನು ಬದುಕಲು ಬಿಡಿ. ಇದು ಬಾಳ ಗೋಡುವಿನಲ್ಲಿರುವ ಆದಿವಾಸಿಗಳ ಕೂಗು. ಪುಟ್ಟ ಗುಡಿಸಲಿನ ಒಳಗೆ ಹೋಗಲು ಸಣ್ಣ ಕಿಂಡಿಯಷ್ಟು ಜಾಗ.. ಒಳಹೊಕ್ಕು ಮೇಲಕ್ಕೆ ಕಣ್ಣು ಹಾಯಿಸಿದರೆ ಇಡಿ ಆಕಾಶವೇ ಗೋಚರಿಸುತ್ತಿದೆ. ಚಾವಣಿಯಲ್ಲಿ ಹೆಂಚುಗಳೇ ಇಲ್ಲ. ಮಳೆ ನೀರು ಸಂಪೂರ್ಣ ಮನೆಯೊಳಗೆ ಸುರಿಯುತ್ತಿದೆ. ಅಂಗೈ ಅಗಲ ಜಾಗ. ಅದು ಮಳೆಗೆ ಸೋರಿಕೆಯಾಗಿ ಕೆರೆಯಂತಾಗಿದೆ. ಒಂದು ಮೂಲೆಯಲ್ಲಿ ಸಾಮಾನುಗಳ ಮೂಟೆ. ಇನ್ನೊಂದೆಡೆ ಅಲ್ಲೇ ಕಟ್ಟಿಗೆ ಹಾಕಿ ಅಡುಗೆ. ಗೋಡೆಗಳಿಲ್ಲದ ಟಾರ್ಪಾಲ್ ಹೊದಿಸಿದ ಮನೆ. ರೇಷನ್ ಅಂಗಡಿಯ ಅಕ್ಕಿಯಿಂದ ಜೀವನ. ವಿರಾಜಪೇಟೆ ಸಮೀಪದ ಬಾಳುಗೋಡುವಿನ ಸರಕಾರಿ ಜಾಗದಲ್ಲಿ ಪುಟ್ಟ ಜೋಪಡಿಗಳನ್ನು ನಿರ್ಮಿಸಿಕೊಂಡು ಅನಾಥರಂತೆ ಜೀವನ ನಡೆಸುವ ಈ ಆದಿವಾಸಿ ಜನಾಂಗದವರ ಗೋಳು ಹೇಳತೀರದ್ದು.

**ಆದಿವಾಸಿಗಳ ಬದುಕು ಮೂರಾಬಟ್ಟೆ**

**ಲೈನ್‌ಮನೆಗಳಿಂದ ಹೊರ ಬಂದರು:** ಎಸ್ಟೇಟ್ ಲೈನ್‌ಮನೆಯಿಂದ ಹೊರ ಬಂದ ಇವರ ಬದುಕು ಮಾತ್ರ ಬದಲಾಗಿಲ್ಲ. ನಿಲ್ಲಲು ತಮ್ಮದೇ ಆದ ನೆಲೆ ಇಲ್ಲ. ನೆತ್ತಿ ಮೇಲೆ ಗಟ್ಟಿಯಾದ ಸೂರಿಲ್ಲ. ಹೊಟ್ಟೆಗೆ ಮೂರು ಹೊತ್ತಿನ ಊಟಕ್ಕೂ ಪರದಾಡಬೇಕು.

ನಾಲ್ಕೈದು ವರ್ಷಗಳಿಗೂ ಹಿಂದೆ ಜಿಲ್ಲೆಯ ನಾನಾ ಕಡೆಗಳಲ್ಲಿ ಕಾಫಿ ಎಸ್ಟೇಟ್‌ಗಳಲ್ಲಿ ಕೆಲಸ ಮಾಡಿಕೊಂಡು, ಕಟ್ಟಿಸಿದ ಲೈನ್‌ಮನೆಗಳಲ್ಲಿಯೇ ಅವರ ಬದುಕು ಸಾಗುತ್ತಿತ್ತು. ಅವರು ಕೊಡುವ ಒಂದಷ್ಟು ಕೂಲಿ, ಆಹಾರ ಧಾನ್ಯಗಳಿಂದಲೇ ಗಿರಿಜನರು ಹೊಟ್ಟೆ ತುಂಬಿಸಿಕೊಳ್ಳಬೇಕಿತ್ತು.



ಉದಯವಾಹಿನಿ ಚಿತ್ರ

**ದೊರೆಯದ ಸ್ಪಂದನೆ**

ಜೀವನ ಸಾಗಿಸಲು ಸರಕಾರಿ ಭೂಮಿಯಲ್ಲಿ ಜೋಪಡಿ ನಿರ್ಮಿಸಿದ್ದರೂ ಮೂಲ ಸೌಕರ್ಯವಿಲ್ಲ, ಮಕ್ಕಳು ಶಿಕ್ಷಣದಿಂದಲೂ ದೂರ ಉಳಿದಿದ್ದಾರೆ. ತಮಗೆ ವಸತಿ ನಿರ್ಮಿಸಿಕೊಡಬೇಕೆಂದು ಒತ್ತಾಯಿಸುತ್ತಿದ್ದಾರೆ. ಅಧಿಕಾರಿಗಳಾಗಲಿ ಅಥವಾ ಸರಕಾರವಾಗಲಿ ಅವರ ಬೇಡಿಕೆಗೆ ಕಿವಿಗೊಡುತ್ತಿಲ್ಲ.

> ಜನಪ್ರತಿನಿಧಿಗಳು ಚುನಾವಣೆ ಸಮಯದಲ್ಲಿ ವೋಟು ಕೇಳಲು ಮಾತ್ರವೇ ಬರುತ್ತಾರೆ. ಚುನಾವಣೆ ಮುಗಿದ ಮೇಲೆ ನಾವು ಸತ್ತಿದ್ದೇವೆಯೇ, ಬದುಕಿದ್ದೇವೆಯೇ ಎಂದು ಯಾರೊಬ್ಬರೂ ನಮ್ಮತ್ತ ನೋಡುವುದಿಲ್ಲ. ನಾವು ಎಲ್ಲಾ ಅಧಿಕಾರಿಗಳ ಗಮನಕ್ಕೆ ತಂದಿದ್ದೇವೆ. ಇಲ್ಲಿಯವರೆಗೆ ಯಾವುದೇ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿಲ್ಲ
> -ಅಶ್ವಿನಿ, ಜೋಪಡಿ ನಿವಾಸಿ.

**ನಮಗೆ ದಯಾಮರಣಕ್ಕೆ ಅನುಮತಿ ಕೊಡಿ:** ಬುಡಕಟ್ಟು, ಆದಿವಾಸಿ ಜನರ ಅಭಿವೃದ್ಧಿಯೂ ಆಗುತ್ತಿಲ್ಲ, ಮೂಲಸೌಕರ್ಯಗಳೂ ದಕ್ಕುತ್ತಿಲ್ಲ. ಯಾವ ಸರಕಾರ ಬಂದರೂ ಅನಾಥವಾಗಿರುವ ಬಡ ಜೀವಗಳ ಕೂಗು ಇಲ್ಲಿಅರಣ್ಯರೋದನವಾಗಿದೆ. ನಮಗೆ ಮನೆ ಕಟ್ಟಿಸಿ ಕೊಡಿ, ಇಲ್ಲವೇ ದಯಾಮರಣಕ್ಕೆ ಅನುಮತಿ ನೀಡಿ. ನಾಂಗ ಬದುಕೋಣು, ಯಂಗಳೇ ಬದುಕುವ ಬುಡೋಮಿ. ಎಂದು ನೋವಿನ ಆರ್ತನಾದ ಮೊಳಗಿಸುತ್ತಿದ್ದಾರೆ. ಸರಕಾರಿ ಜಮೀನಿನಲ್ಲಿ ನಮಗೆ ಮನೆ ನಿರ್ಮಿಸಿಕೊಡಲು ಮೀನಾಮೇಷ ಎಣಿಸುತ್ತಾರೆ. ಈ ಮಳೆಯಲ್ಲಿ ನಾವು ಹೇಗೆ ಜೀವಿಸುವುದು. ದಿನ ರೋಗದಿಂದ ನರಳಬೇಕಾದ ಪರಿಸ್ಥಿತಿ. ಪಂಚಾಯಿತಿಗೆ ಮಾಹಿತಿ ನೀಡಿದರೂ ಸ್ಪಂದನೆ ಇಲ್ಲ. ದಯವಿಟ್ಟು ನಮ್ಮನ್ನು ಬದುಕಲು ಬಿಡಿ ಎಂದು ಅಲ್ಲಿನವರು ಅಳಲು ತೋಡಿಕೊಳ್ಳುತ್ತಾರೆ. ಪ್ರಾಣಿಗಳಿಗಿಂತ ದಯಾನೀಯ ಬದುಕು ನಡೆಸುತ್ತಿರುವ ಆದಿವಾಸಿಗಳು ತ್ರಿಶಂಕು ಸ್ಥಿತಿಯಲ್ಲಿದ್ದು, ಇಲ್ಲಿ ಮಾನವೀಯತೆಯನ್ನು ಅಕ್ಷರಶಃ ಕಗ್ಗೊಲೆ ಮಾಡಿದೆ. ಇವರ ಗೋಳಿನ ಬಾಳನ್ನು ಸರಕಾರ ಬೆಳಗಬೇಕಿದೆ.

> ಆದಿವಾಸಿ ಮೂಲ ನಿವಾಸಿಗಳು ಭೂಮಿ ಕಳೆದುಕೊಂಡು ಗುಲಾಮರಾಗಿ ಬದುಕು ನಡೆಸುತ್ತಿದ್ದಾರೆ. ನಾವು ದುಡಿದರೆ ಮಾತ್ರ ನಿಮಗೆ ಅನ್ನ. ಆದಿವಾಸಿ ಮೂಲ ನಿವಾಸಿ ಯರವವರರನ್ನು ಬದುಕಲು ಬಿಟ್ಟು ಭೂಮಿ ಕೊಡುವ ಕೆಲಸ ಮಾಡಬೇಕು. ಇಲ್ಲಅಂದರೆ ಆ.15ರಂದು ಜಿಲ್ಲಾಧಿಕಾರಿ ಕಚೇರಿ ಮುಂದೆ ಅರೆ ಬೆತ್ತಲೆ ಧರಣಿ ನಡೆಸುತ್ತೇವೆ.
> -ಪಿ.ಎಸ್.ಮುತ್ತ, ಯರವ ಸಂಘಟನೆ ಮುಖಂಡ.


ಉದಯವಾಹಿನಿ

ಪ್ರಾದೇಶಿಕ

ಭಾನುವಾರ 13 ಜುಲೈ 2025




## ಮಿನಿ ನ್ಯೂಸ್

### ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಅಪರಾಧಿಗೆ ಜೀವಾವಧಿ ಶಿಕ್ಷೆ

• ಉದಯವಾಹಿನಿ, ಮಂಡ್ಯ

ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯವೆಸಗಿದ್ದ ಆರೋಪದಡಿ ಅಪರಾಧಿಗೆ 2ನೇ ಜಿಲ್ಲಾ ಸತ್ರ ನ್ಯಾಯಾಲಯ ಜೀವಾವಧಿ ಶಿಕ್ಷೆ, ಒಂದು ಲಕ್ಷ ರೂ. ದಂಡ ವಿಧಿಸಿ ತೀರ್ಪು ನೀಡಿದೆ. ಶ್ರೀರಂಗಪಟ್ಟಣ ತಾಲ್ಲೂಕಿನ ಬೆಳಗೊಳ ಗ್ರಾಮದ ಲೇ.ಚಿಕ್ಕಣ್ಣನ ಪುತ್ರ ಶಿವಣ್ಣ (50) ಶಿಕ್ಷೆಗೆ ಗುರಿಯಾದವರು. ಆರೋಪಿಯು 2023ರ ಡಿಸೆಂಬರ್ 11ರಂದು ಅದೇ ಗ್ರಾಮದ ಮನೆ ಬಳಿ ಆಟವಾಡುತ್ತಿದ್ದ ಮೂರೂವರೆ ವರ್ಷದ ಬಾಲಕಿಯನ್ನು ಪುಸಲಾಯಿಸಿ ತನ್ನ ಮನೆಗೆ ಕರೆದೊಯ್ದು ಲೈಂಗಿಕ ದೌರ್ಜನ್ಯ ನಡೆಸಿದ್ದನು. ಈ ಸಂಬಂಧ ಮಗುವಿನ ತಾಯಿ ನೀಡಿದ ದೂರಿನ ಮೇರೆಗೆ ಕೆ.ಆರ್.ಸಾಗರ ಠಾಣೆಯಲ್ಲಿ ಅಂದಿನ ಪಿಎಸ್‌ಐ ಬಸವರಾಜು ಆರೋಪಿ ವಿರುದ್ಧ ಪೋಕ್ಸೋ ಪ್ರಕರಣ ದಾಖಲಿಸಿದ್ದರು. ವೃತ್ತ ನಿರೀಕ್ಷಕರಾಗಿದ್ದ ಟಿ.ಎಂ.ಪುನೀತ್ ಅವರು ತನಿಖೆ ನಡೆಸಿ ಆರೋಪಿ ವಿರುದ್ಧ ನ್ಯಾಯಾಲಯಕ್ಕೆ ದೋಷರೋಪಣ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ 2ನೇ ಜಿಲ್ಲಾ ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ದಿಲೀಪ್ ಕುಮಾರ್ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಆರೋಪಿ ಶಿವಣ್ಣನಿಗೆ ಜೀವಾವಧಿ ಶಿಕ್ಷೆ, 1 ಲಕ್ಷ ರೂ. ತೀರ್ಪು ನೀಡಿದ್ದಾರೆ. ಪ್ರಕರಣದ ಕುರಿತು ವಿಶೇಷ ಸರಕಾರಿ ಅಭಿಯೋಜಕ ಹೆಬ್ಬಕವಾಡಿ ನಾಗರಾಜು ವಾದ ಮಂಡಿಸಿದ್ದರು.

### ಜುಲೈ 19ರಂದು ರಾಜ್ಯ ಸರ್ಕಾರದ ಎರಡು ವರ್ಷಗಳ ಸಾಧನಾ ಸಮಾವೇಶ

• ಉದಯವಾಹಿನಿ, ಮೈಸೂರು

ರಾಜ್ಯ ಸರ್ಕಾರದ ಎರಡು ವರ್ಷಗಳ ಸಾಧನಾ ಸಮಾವೇಶವನ್ನು ಜುಲೈ 19ರಂದು ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜಿಸಲಾಗಿದೆ. ಈ ಸಂಬಂಧ ಸಿದ್ಧತೆ ಕೈಗೊಳ್ಳುವ ಕುರಿತು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಶನಿವಾರ ನಗರದ ಸರ್ಕಾರಿ ಅತಿಥಿಗೃಹದಲ್ಲಿ ಪೂರ್ವಭಾವಿ ಸಭೆ ನಡೆಸಿದರು.

ಸಿಎಂ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಸಮಾವೇಶ ನಡೆಯಲಿದೆ. ವಿವಿಧ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಹಾಗೂ ವಿವಿಧ ಕಾಮಗಾರಿಗಳಿಗೆ ಶಂಕುಸ್ಥಾಪನೆಯೂ ನೆರವೇರಲಿದೆ. ವ್ಯವಸ್ಥಿತವಾಗಿ ಸಮಾವೇಶ ನಡೆಯುವಂತೆ ನೋಡಿಕೊಳ್ಳಬೇಕು. ಮೈಸೂರು, ಚಾಮರಾಜನಗರ ಭಾಗದ ಶಾಸಕರು, ಮಾಜಿ ಶಾಸಕರು, ಜನಪ್ರತಿನಿಧಿಗಳು, ಅಧಿಕಾರಿಗಳು, ಮುಖಂಡರು ಸಹಕಾರ ನೀಡಬೇಕು. ಯಶಸ್ಸಿಗೆ ಎಲ್ಲರೂ ಶ್ರಮಿಸಬೇಕು ಎಂದು ಸೂಚಿಸಿದರು. ಸಾವಿರಾರು ಸಂಖ್ಯೆಯಲ್ಲಿ ಬರುವ ಸಾರ್ವಜನಿಕರಿಗೆ ಯಾವುದೇ ಕಿರಿಕಿರಿ ಉಂಟಾಗದಂತೆ ನೋಡಿಕೊಳ್ಳಬೇಕು. ಇದು ಸರ್ಕಾರದ ಬೃಹತ್ ಸಮಾರಂಭವಾಗಿದ್ದು, ಪಾಲ್ಗೊಳ್ಳುವ ಎಲ್ಲರಿಗೂ ಕುಡಿಯುವ ನೀರು, ತಾತ್ಕಾಲಿಕ ಶೌಚಾಲಯ, ಊಟ, ಸಾರಿಗೆ ವ್ಯವಸ್ಥೆಯನ್ನು ಸಮರ್ಪಕವಾಗಿ ಕೈಗೊಳ್ಳಬೇಕು. ಕೊರತೆ-ಗೊಂದಲ ಉಂಟಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

### ಕಾಡು ಹಂದಿಗಳ ದಾಳಿಯಿಂದ ಬಾಳೆ ಬೆಳೆ ನಾಶ

• ಉದಯವಾಹಿನಿ, ಗುಂಡ್ಲುಪೇಟೆ

ಕಾಡು ಹಂದಿಗಳ ದಾಳಿಯಿಂದ ಬಾಳೆ ಬೆಳೆ ನಾಶವಾಗಿರುವ ಘಟನೆ ತಾಲ್ಲೂಕಿನ ಹೊರದಹಳ್ಳಿ ಗ್ರಾಮದಲ್ಲಿ ನಡೆದಿದೆ. ಹೂರದಹಳ್ಳಿ ಗ್ರಾಮದ ಕೆ.ಮಹೇಶ್ ಎಂಬ ರೈತನ ಬಾಳೆ ಫಸಲಿನ ಮೇಲೆ ಕಾಡು ಹಂದಿಗಳ ಹಿಂಡು ದಾಳಿ ನಡೆಸಿ ತಿಂದು, ತುಳಿದು ನಾಶ ಮಾಡಿವೆ. ಇದರಿಂದ ರೈತ ನಷ್ಟ ಅನುಭವಿಸುವಂತಾಗಿದೆ. ಕಾಡು ಹಂದಿ ನಾಶ ಮಾಡಿದ ಜಾಗಕ್ಕೆ ಮತ್ತೆ ಕಂದು ನಾಟಿ ಮಾಡಿದರೂ ಪ್ರಯೋಜನ ಆಗುವುದಿಲ್ಲ. ಗ್ರಾಮ ವ್ಯಾಪ್ತಿಯಲ್ಲಿ ಕಾಡುಹಂದಿಗಳು ಹಿಂಡುಗಳಲ್ಲಿ ರೈತರ ಜಮೀನುಗಳಿಗೆ ಲಗ್ಗೆ ಇಡುತ್ತಿವೆ.

ಬೆಳೆ ನಾಶ ನಿರಂತರವಾಗಿದ್ದು, ರೈತರ ನಷ್ಟ ಅನುಭವಿಸುವುದು ಮುಂದುವರಿದಿದೆ. ಆದ್ದರಿಂದ ಸಂಬಂಧಪಟ್ಟ ಅರಣ್ಯ ಇಲಾಖೆ ಅಧಿಕಾರಿಗಳು ನಿಯಂತ್ರಣಕ್ಕೆ ಕ್ರಮ ತೆಗೆದುಕೊಳ್ಳಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

### ಡಿ.ಕೆ.ಶಿವಕುಮಾರ್ ಸಿಎಂ ಆಗುವುದು ನಿಶ್ಚಿತ: ನಿಶ್ಚಲಾನಂದನಾಥ ಸ್ವಾಮೀಜಿ

• ಉದಯವಾಹಿನಿ, ಮಂಡ್ಯ

ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ 136 ಸ್ಥಾನ ಗಳಿಸಲು ಡಿ.ಕೆ. ಶಿವಕುಮಾರ್ ಸಾಕಷ್ಟು ಶ್ರಮಿಸಿದ್ದಾರೆ. ಅವರು ಸಿಎಂ ಆಗಬೇಕು ಎಂದು ಅವರ ಅಭಿಮಾನಿಗಳು ಬಯಸುತ್ತಿದ್ದಾರೆ.ಅವರು ಸಿಎಂ ಆಗುವುದು ನಿಶ್ಚಿತ ಎಂದು ಕೆಂಗೇರಿಯ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ನಿಶ್ಚಲಾನಂದನಾಥ ಸ್ವಾಮೀಜಿ ಹೇಳಿದರು.

ಮಾಧ್ಯಮದವರೊಂದಿಗೆ ಅವರು ಮಾತನಾಡಿ, ಪಕ್ಷಕ್ಕಾಗಿ ದುಡಿದ ಹಿರಿಯರಿಗೆ ಸಿಎಂ ಆಗುವ ಹಂಬಲ ಇದ್ದೇ ಇರುತ್ತದೆ. ಅದೇ ರೀತಿ ನಾವು ಕೂಡ ಸಿಎಂ ಆಗಲಿ ಎಂದು ಬಯಸುತ್ತೇವೆ. ಡಿ.ಕೆ.ಶಿವಕುಮಾರ್ ಪಕ್ಷದ ಶಿಸ್ತಿನ ಸಿಪಾಯಿ. ತಾಳ್ಮೆಯಿಂದ ಕಾಯ್ದು, ಒಳ್ಳೆಯ ಸ್ಥಾನ ಪಡೆದುಕೊಳ್ಳುತ್ತಾರೆ. ಅವರನ್ನು ನಾನು ಹತ್ತಿರದಿಂದ ನೋಡಿದ್ದೇನೆ. ಯಾವುದಕ್ಕೂ ಆತುರಪಡುವುದಿಲ್ಲ. ಸಂಯಮದಿಂದ ಪಕ್ಷವನ್ನು ಮುನ್ನಡೆಸಿ ಇಲ್ಲಿಯವರೆಗೆ ತಂದಿದ್ದಾರೆ ಎಂದರು.

ಒಕ್ಕಲಿಗ ಸಮುದಾಯ ಡಿ.ಕೆ.ಶಿವಕುಮಾರ್ ಅವರು ಸಿಎಂ ಆಗಲಿ ಎಂದು ಚುನಾವಣೆಯಲ್ಲಿ ಬೆಂಬಲಿಸಿತ್ತು. ಮೈಸೂರು ಭಾಗದಲ್ಲಿ ಹೆಚ್ಚು ಒಲವು ತೋರಿದ್ದಕ್ಕಾಗಿ ಕಾಂಗ್ರೆಸ್‌ಗೆ ಹೆಚ್ಚು ಸೀಟುಗಳು ಬಂದವು. ಹೈಕಮಾಂಡ್ ಯಾವ ನಿರ್ಧಾರ ಮಾಡುತ್ತದೆ ಎಂಬುದನ್ನು ಕಾದು ನೋಡೋಣ. ದೇವರ ಅನುಗ್ರಹ ಅವರ ಮೇಲೆ ಇರಲಿ ಎಂದು ಶುಭ ಹಾರೈಸಿದರು.

### ಸಾಧನಾ ಸಮಾವೇಶ 28ರಂದು

• ಉದಯವಾಹಿನಿ, ಮದ್ದೂರು

ಜುಲೈ 28ರಂದು ಪಟ್ಟಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆಯುವ ಸಾಧನಾ ಸಮಾವೇಶವನ್ನು ಯಶಸ್ವಿಗೊಳಿಸಬೇಕೆಂದು ಶಾಸಕ ಕೆ.ಎಂ ಉದಯ್ ತಿಳಿಸಿದರು. ಪಟ್ಟಣದ ಶಿವಪುರದ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ಸಮಾವೇಶದ ಹಿನ್ನೆಲೆಯಲ್ಲಿ ಕರೆಯಲಾಗಿದ್ದ ತಾಲ್ಲೂಕು ಮಟ್ಟದ ಕಾರ್ಯಕರ್ತರ ಪೂರ್ವಭಾವಿಸಭೆಯ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು.

ಇತಿಹಾಸದಲ್ಲಿ ಮೊದಲನೇ ಬಾರಿಗೆ 1,300 ಕೋಟಿಗೂ ಹೆಚ್ಚು ಅನುದಾನವನ್ನು ತಂದಿದ್ದೇನೆ. ಅದಕ್ಕಾಗಿ ಸಾಧನಾ ಸಮಾವೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೇತೃತ್ವದಲ್ಲಿ ಹಮ್ಮಿಕೊಂಡಿದ್ದು, ಇದು ನಮ್ಮ ತಾಲ್ಲೂಕಿನ ಹೆಮ್ಮೆ. ಉಪಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಸೇರಿದಂತೆ ಹತ್ತಾರು ಸಚಿವರು ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಅಂತರಾಳದಿಂದ... EDITORIAL

# ಬೀದಿ ನಾಯಿಗಳಿಗೆ ಪೌಷ್ಟಿಕ ಆಹಾರ: ಬಿಬಿಎಂಪಿ ನಡೆ ಸರಿ, ಬದ್ಧತೆ ಪ್ರಶ್ನಾರ್ಹ



ಅವರ ಮಾತು, ಸಮುದಾಯದ ಸಂವೇದನೆಯನ್ನು ಅವಮಾನಿಸುವಂತಿದೆ ಹಾಗೂ ಪಾಲಿಕೆಗೆ ತಾನು ಮಾಡಬೇಕಾದುದರ ಕುರಿತು ಉಂಟಾಗಿರುವ ಮರೆವೆಯನ್ನು ಸಂಕೇತಿಸುವಂತಿದೆ. ಬೆಂಗಳೂರಿನ ನಾಗರಿಕರ ಪ್ರೀತಿ ಮತ್ತು ಕಾಳಜಿಯಿಂದಲೇ ಪ್ರತಿ ಬಡಾವಣೆಯಲ್ಲೂ ನೂರಾರು ಬೀದಿ ನಾಯಿಗಳು ಈವರೆಗೂ ಜೀವವುಳಿಸಿಕೊಂಡಿವೆ. ಉದ್ಯಾನಗಳಲ್ಲಿ ಬೀದಿ ನಾಯಿಗಳಿಗೆ ಬಿಸ್ಕತ್ತು ನೀಡುವ ಸಹೃದಯರು ಹಾಗೂ ತಮ್ಮ ಮನೆಗಳ ಸುತ್ತಮುತ್ತ ಓಡಾಡಿಕೊಂಡಿರುವ ನಾಯಿಗಳಿಗೆ ಊಟ ನೀಡುವ ಗೃಹಿಣಿಯರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಬೀದಿ ನಾಯಿಗಳೂ ಸೇರಿದಂತೆ ಪ್ರಾಣಿಗಳ ಹಿತಾಸಕ್ತಿಗಾಗಿ ಕಾರ್ಯ ನಿರ್ವಹಿಸುವ ಸಾಕಷ್ಟು ಸಂಸ್ಥೆಗಳೂ, ಸ್ವಯಂ ಸೇವಕರೂ ಇದ್ದಾರೆ. ಅವರ ಮೂಲಕ ಬೀದಿ ನಾಯಿಗಳ ಹಿತಾಸಕ್ತಿಗಾಗಿ ಕಾರ್ಯಕ್ರಮಗಳನ್ನು ರೂಪಿಸಲು ಬಿಬಿಎಂಪಿ ಮುಂದಾಗಬಹುದಿತ್ತು.

ಬೀದಿ ನಾಯಿಗಳ ಸಂಖ್ಯೆಯನ್ನು ನಿಯಂತ್ರಿಸುವ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವುದರಲ್ಲಿ ಹಾಗೂ ಆಕ್ರಮಣಶೀಲವಾಗಿ ವರ್ತಿಸುವ ನಾಯಿಗಳಿಂದ ನಾಗರಿಕರಿಗೆ ರಕ್ಷಣೆ ಒದಗಿಸುವಲ್ಲಿ ವಿಫಲವಾಗಿರುವ ಪಾಲಿಕೆಗೆ ಇದ್ದಕ್ಕಿದ್ದಂತೆ ಪ್ರಾಣಿಪ್ರೀತಿ ಉಂಟಾಗಿರುವುದು ಅಚ್ಚರಿ ಹುಟ್ಟಿಸುವಂತಿದೆ. ನಾಯಿ ಕಡಿತದ ಪ್ರಕರಣಗಳು ಹೆಚ್ಚಾಗಿರುವ ಪ್ರದೇಶಗಳಲ್ಲಿ ಆಹಾರ ನೀಡುವ ಕಾರ್ಯಕ್ರಮ ಅನುಷ್ಠಾನ ಗೊಳ್ಳುವುದು ಎನ್ನುವ ಪಾಲಿಕೆಯ ಮಾತಿನಲ್ಲಿ,

**ಬೀದಿ ನಾಯಿಗಳಿಗೆ ಪ್ರತಿ ದಿನ ಪೌಷ್ಟಿಕ ಆಹಾರ ನೀಡಲು ರೂ.2.88 ಕೋಟಿ ವೆಚ್ಚದ ಯೋಜನೆಯೊಂದನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರೂಪಿಸಿದೆ. ಪಾಲಿಕೆಯ ಯೋಜನೆ ಮೇಲ್ನೋಟಕ್ಕೆ ಮಾನವೀಯ ಅಂತಃಕರಣದ ಅಭಿವ್ಯಕ್ತಿಯಂತಿದೆ. ಆದರೆ, ಮಹಾನಗರದ ನಾಗರಿಕರಿಗೆ ಮೂಲ ಸೌಕರ್ಯಗಳನ್ನು ಒದಗಿಸುವಲ್ಲಿ ನಿರ್ಲಕ್ಷ್ಯ ತೋರಿಸುವ ಪಾಲಿಕೆಯ ಪ್ರಾಣಿದಯೆ ಅನುಮಾನಕ್ಕೆ ಆಸ್ಪದ ಕಲ್ಪಿಸುವಂತಿದೆ. ಬೀದಿ ನಾಯಿಗಳಿಗೆ ಆಹಾರ ನೀಡುವ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಮುಂದಾಗದೆ ಹೋದುದರಿಂದ, ಪಾಲಿಕೆಯೇ ಆಹಾರ ಪೂರೈಸಲಿದೆ ಎಂದು ಬಿಬಿಎಂಪಿಯ ಆರೋಗ್ಯ ಮತ್ತು ನೈರ್ಮಲ್ಯ ವಿಭಾಗದ ವಿಶೇಷ ಆಯುಕ್ತರು ಹೇಳಿದ್ದಾರೆ.**

ಕೋಳಿ ಮಾಂಸವನ್ನೊಳಗೊಂಡ ಊಟ ನೀಡುವ ಮೂಲಕ ನಾಯಿಗಳ ಆಕ್ರಮಣಶೀಲತೆಯನ್ನು ಕಡಿಮೆ ಮಾಡುವ ಇಂಗಿತ ಇರುವಂತಿದೆ. ನಾಯಿಗಳ ಸ್ವಭಾವಕ್ಕೂ ಊಟ ನೀಡುವುದಕ್ಕೂ ಸಂಬಂಧ ಕಲ್ಪಿಸಲು ಹೊರಟಿರುವ ಪಾಲಿಕೆ, ತನ್ನ ಅಭಿಪ್ರಾಯಕ್ಕೆ ಇರುವ ವೈಜ್ಞಾನಿಕ ಅಧ್ಯಯನಗಳನ್ನು ಸಾರ್ವಜನಿಕರ ಮುಂದಿಡಬೇಕಾಗಿದೆ. ಬೀದಿ ನಾಯಿಗಳನ್ನು ಅಂತಃಕರಣದಿಂದ ನೋಡುವುದರಲ್ಲಿ ಯಾರಿಗೂ ತಕರಾರು ಇರಲಾರದು. ಆದರೆ, ಜನರ ತೆರಿಗೆ ಹಣದಲ್ಲಿ ಕಾರ್ಯನಿರ್ವಹಿಸುವ ಸರ್ಕಾರಿ ಅಂಗಸಂಸ್ಥೆಗಳ ಆದ್ಯತೆ ಮನುಷ್ಯರು ಆಗಿರಬೇಕೇ ಹೊರತು ಪ್ರಾಣಿಗಳಲ್ಲ. ಸರ್ಕಾರದ ಹಲವು ಯೋಜನೆಗಳ ನಡುವೆಯೂ, ಹಸಿವು ಹಾಗೂ ಪೌಷ್ಟಿಕಾಂಶಗಳ ಕೊರತೆಯಿಂದ ಬಳಲುತ್ತಿರುವ ದೊಡ್ಡ ಸಮುದಾಯ ನಗರದಲ್ಲಿದೆ. ಅವರ ಅಳಲಿಗೆ ಓಗೊಡದೆ, ಬೀದಿ ನಾಯಿಗಳ ಬಗ್ಗೆ ಯೋಚಿಸುವುದು ಅಸಹಜ ಹಾಗೂ ಅಗ್ಗದ ಜನಪ್ರಿಯ ಚಿಂತನೆ. ಇಂದಿರಾ ಕ್ಯಾಂಟೀನ್‌ಗಳ ಉಸ್ತುವಾರಿಯನ್ನು ಸಮರ್ಪಕವಾಗಿ ನಡೆಸುವ ಇಚ್ಛಾಶಕ್ತಿ ಪ್ರದರ್ಶಿಸದ ಪಾಲಿಕೆ, ಬೀದಿನಾಯಿಗಳಿಗೆ ಅನ್ನ, ಕೋಳಿ ಮಾಂಸವನ್ನೊಳಗೊಂಡ ಪೌಷ್ಟಿಕ ಆಹಾರ ಕೊಡಲು ಮುಂದಾಗಿದೆ. ಈ ಯೋಜನೆಯಲ್ಲಿನ ಬದ್ಧತೆ, ಪ್ರಾಮಾಣಿಕತೆ ಪ್ರಶ್ನಾರ್ಹ. ನಾಯಿಗಳ ಆಹಾರ ತಯಾರಿಕೆಗೆ ಕರೆದಿರುವ ಟೆಂಡರ್‌ನಲ್ಲಿ, ಕೃತಕ ಬಣ್ಣ ಬಳಸಬಾರದು ತಾಜಾತನದಿಂದ ಕೂಡಿರುವ ಸ್ವಚ್ಛ ಆಹಾರ ತಯಾರಿಸಬೇಕು ಎನ್ನುವ ಷರತ್ತು ಗಳನ್ನು ವಿಧಿಸಲಾಗಿದೆ. ತಯಾರಿಸಿದ ಊಟವನ್ನು ಸತತ ಎರಡು ದಿನ ಬೀದಿ ನಾಯಿಗಳು ತಿನ್ನದಿದ್ದರೆ, ಆಹಾರವನ್ನು ಬದಲಿಸಬೇಕು ಎಂದೂ ಹೇಳಲಾಗಿದೆ. ನಾಯಿಗಳ ಬಗೆಗಿನ ಈ ಕಾಳಜಿ ಸಮಾಜದ ಕಟ್ಟಕಡೆಯ ಮನುಷ್ಯನ ಬಗ್ಗೆ ಪಾಲಿಕೆಗೆ ಇದ್ದಿದ್ದರೆ ಬೆಂಗಳೂರಿನ ಪರಿಸ್ಥಿತಿ ಈಗಿರುವುದಕ್ಕಿಂತಲೂ ಉತ್ತಮವಾಗಿರುತ್ತಿತ್ತು. ಪಾದಚಾರಿ ಮಾರ್ಗಗಳೇ ಇಲ್ಲದ ಹಾಗೂ ಇರುವ ಪಾದಚಾರಿ ಮಾರ್ಗಗಳು ಕಿತ್ತುಹೋಗಿರುವ ರಸ್ತೆಗಳಲ್ಲಿ ಪಾದಚಾರಿಗಳು ಆತಂಕದಿಂದ ಸಂಚರಿಸುವಂತಾಗಿದೆ. ತೆರೆದ ಮ್ಯಾನ್ ಹೋಲ್‌ಗಳಿಂದ ಕೊಳಕುನೀರು ರಸ್ತೆಯ ಮೇಲೆ ಹರಿಯುವುದು ಸಾಮಾನ್ಯ ಎನ್ನುವಂತಾಗಿದೆ. ಹೈಕೋರ್ಟ್ ತಪರಾಕಿಯ ನಂತರವೂ, ಗುಂಡಿಮುಕ್ತ ರಸ್ತೆಗಳು ತನ್ನ ವರ್ಚಸ್ಸಿಗೆ ಧಕ್ಕೆ ಎನ್ನುವ ಪಾಲಿಕೆಯ ನಂಬಿಕೆಯಲ್ಲಿ ಹೆಚ್ಚು ಬದಲಾವಣೆ ಆದಂತಿಲ್ಲ. ಮಳೆ ಬಂದಾಗ ಕೆಲವು ಬಡಾವಣೆಗಳ ನಾಗರಿಕರು ನಿದ್ದೆಗೆಡುವುದೂ ಅನಿವಾರ್ಯ ಎನ್ನುವಂತಾಗಿದೆ. ಹೀಗೆ, ಜ್ವಲಂತ ನಾಗರಿಕ ಸಮಸ್ಯೆಗಳ ನಡುವೆಯೂ ಬೀದಿನಾಯಿಗಳಿಗೆ ಪೌಷ್ಟಿಕ ಆಹಾರ ಕೊಡುವ ಬಗ್ಗೆ ಪಾಲಿಕೆ ಯೋಚಿಸುತ್ತ ದೆಂದರೆ, ಅದು ಮನುಷ್ಯಮಾತ್ರರನ್ನು ಮೀರಿದ ದೈವಿಕ ಮನಃಸ್ಥಿತಿಯನ್ನು ಸಿದ್ಧಿಸಿಕೊಂಡಿರ ಬೇಕು ಇಲ್ಲವೇ ನಾಗರಿಕರನ್ನು ಬೀದಿನಾಯಿಗಳಿಗಿಂತಲೂ ಕನಿಷ್ಠ ಎಂದು ಭಾವಿಸಿರಬೇಕು.

# ರಾಮಾಯಣ



## ಶ್ರೀರಾಮನು ಲಕ್ಷ್ಮಣನಿಗೆ ಹೇಳುವ ಸಮಾಧಾನ

• ಹಿಂದಿನ ಸಂಚಿಕೆಯಿಂದ

### 97ನೆಯ ಅಧ್ಯಾಯ

ಆಬಳಿಕ ಶ್ರೀರಾಮನು ಲಕ್ಷ್ಮಣನನ್ನು ಸಂತವಿಡುತ್ತ ಈ ಪ್ರಕಾರ ನುಡಿದನು: ಎಲೈ ಲಕ್ಷ್ಮಣ, ಮಹಾಪ್ರಾಜ್ಞನಾದ ಭರತನು ನಮ್ಮ ಸಮೀಪಕ್ಕೆ ಬಂದರೆ ಆ ಬಿಲ್ಲುಬಾಣಗಳನ್ನೂ ಹರಿಗೆ ಖಡ್ಗಗಳನ್ನು ತೆಗೆದುಕೊಂಡು ಆತನಮೇಲೆ ಮಾಡುವ ಕಾರವೇನು ನಮ್ಮ ತಂದೆಯಾದ ದಶರಥರಾಯನ ಸತ್ಯಪ್ರತಿಜ್ಞೆಯನ್ನು ಪರಿಪಾಲಿಸಬೇಕೆಂದಿರುವ ನಮಗೆ ಯುದ್ಧವನ್ನು ಮಾಡಿ ಭರತನನ್ನು ಕೊಂದು ಅಪಕೀರ್ತಿಯನ್ನು ಹೊತ್ತು ರಾಜ್ಯಾಧಿಪತ್ಯವನ್ನು ಮಾಡಿದರೆ ಬರುವ ಪ್ರಯೋಜನವೇನು ಬಂಧುಗಳಿಗೂ ಮಿತ್ರರಿಗೂ ಕೊಟ್ಟ ದ್ರವ್ಯವನ್ನು ವಿಷದ ಕಡ್ಡಾಯದಂತೆ ನಾನು ಬಯಸುವವನಲ್ಲ. ಧರ್ಮಾರ್ಥಕಾಮಗಳೆಂಬ ಪುರುಷಾರ್ಥಗಳನ್ನೂ ಸಮಸ್ತ ಮಂಡಲಾಧಿ ಪತ್ಯವನ್ನೂ ನಿಮ್ಮ ಸಲುವಾಗಿ ಬಯಸುವೆನೇ ಹೊರತು ಮತ್ತೊಂದಲ್ಲ. ನಿಮಗೆ ಸುಖವಾಗ ಬೇಕೆಂಬ ಬುದ್ಧಿಯಿಂದ ರಾಜ್ಯವನ್ನು ಬಯಸುತ್ತಿರುವೆನೆಂಬ ನನ್ನ ಸತ್ಯವನ್ನು ನೀನು ಬಲ್ಲೆ. ಈ ಸಮುದ್ರಾಂತವಾದ ಭೂಮಿಯು ನನಗೆ ಅಸಾಧ್ಯವಲ್ಲ, ಹಾಗಾದರೂ ಆ ಭೂಮಿಯನ್ನು ನಾನು ಅಧರ್ಮದಿಂದ ಬಯಸುವವನಲ್ಲ.

ಕಡೆಗೆ ಇಂದ್ರಾಧಿಪತ್ಯವನ್ನಾದರೂ ಅಕೃತ್ಯದಿಂದ ಪಡೆಯಲು ಬಯಸುವವನಲ್ಲ, ಎಲೈ ಲಕ್ಷ್ಮಣ, ಭರತಶತ್ರುಘ್ನರಿಲ್ಲದ ಸುಖವನ್ನು ಸುಡು. ನನ್ನ ಪ್ರಾಣಗಳಿಗಿಂತಲೂ ಅತಿಪ್ರಿಯನಾದ ಭರತನು ನಮ್ಮ ಇಕ್ಷ್ವಾಕುಕುಲದ ರಾಜರ ಸ್ವಧರ್ಮಗಳನ್ನು ವಿಚಾರಿಸಿ ಜೇಷ್ಠ ಭ್ರಾತೃವಾದ ನನ್ನ ಮೇಲಣ ವಿಶ್ವಾಸದಿಂದ ನನ್ನನ್ನು ಅರಸಿಕೊಂಡು ಬಂದಿರಬೇಕು. ನಿನ್ನನ್ನೂ ಸೀತಾದೇವಿಯನ್ನೂ ಕೂಡಿಕೊಂಡು ನಾರುಬಟ್ಟೆ ಜಡೆಗಳನ್ನು ಧರಿಸಿಕೊಂಡು ನಾನು ವನಕ್ಕೆ ಬಂದ ವೃತ್ತಾಂತವನ್ನು ಕೇಳಿ ಅತ್ಯಂತ ವ್ಯಾಕುಲಚಿತ್ರನಾಗಿ ಪ್ರೇಮದಿಂದ ನಮ್ಮನ್ನು ನೋಡಬೇಕೆಂದು ಬಂದನಲ್ಲದೆ ಮತ್ತೊಂದು ಕಾರ್ಯಕ್ಕಾಗಿ ಬಂದವನಲ್ಲ. ನಮ್ಮ ನಿಮಿತ್ತವಾಗಿ ತನ್ನ ತಾಯಿಯಾದ ಕೈಕೇಯಿದೇವಿಯನ್ನು ನಿಷ್ಠುರವಚನಗಳಿಂದ ನುಡಿದು ನಮ್ಮ ತಂದೆಯಾದ ದಶರಥರಾಯನಿಗೆ ಒಡಂಬಡಿಕೆಯನ್ನು ಹೇಳಿ ನನಗೆ ರಾಜ್ಯಾಧಿಪತ್ಯವನ್ನು ಕೊಡಬೇಕೆಂದು ಬಂದಿರಬೇಕು. ನಮ್ಮನ್ನು ನೋಡಬೇಕೆಂದು ತನ್ನ ಮನಸ್ಸಿನಲ್ಲೆಣಿಸಿರುವ ಪಕ್ಷದಲ್ಲಿ ಭರತನನ್ನು ನೀನು ನಿಷ್ಠುರವಾಗಿ ನುಡಿಯ ಬೇಡ. ಭರತನು ನಿನ್ನನ್ನು ನಿಷ್ಠುರವಾಗಿ ನುಡಿಯುವವನಲ್ಲ. ಭರತನು ನನಗೆ ಅಹಿತವನ್ನೆಣಿಸಿದರೂ ನಾನು ಆತನಿಗೆ ಅಹಿತವನ್ನೆಣಿಸುವವನಲ್ಲ, ಲೋಕದಲ್ಲಿ ಮಗನಾದವನು ತನಗೆ ಎಷ್ಟಾಪತ್ತು ಬಂದರೂ ತಂದೆಗೆ ದ್ರೋಹವನ್ನೆಣಿಸುವನೆ ? ಒಡಹುಟ್ಟಿದವನು ತನ್ನ ಪ್ರಾಣಕ್ಕೆ ಸಮಾನನಾದ ತಮ್ಮನನ್ನು ಹೇಗೆ ಕೊಂದಾನು ? ಭರತನು ರಾಜ್ಯಾಧಿಪತ್ಯನಿಮಿತ್ರವಾಗಿ ನಮಗೆ ದ್ರೋಹವನ್ನು ಮಾಡುವನೆಂದು ಯೋಚಿಸಬಾರದು. ಭರತನು ನಮ್ಮ ಸಮೀಪಕ್ಕೆ ಬಂದಾಗ ರಾಜ್ಯವನ್ನು ಬಿಡಬೇಕೆಂದು ಕೇಳಿದರೆ ಮಹಾಪ್ರಸಾದವೆಂದು ತನ್ನ ವಶವಾದ ರಾಜ್ಯವನ್ನು ಬಿಟ್ಟು ಕೊಡುವನು. ಸಂಶಯವಿಲ್ಲ ಎಂದು ಹೇಳಿದನು.

**ಮುಂದುವರಿಯುವುದು...**

# ಕೆಟ್ಟ ಕೊಲೆಸ್ಟ್ರಾಲ್ ಡಯೆಟ್‌ನಲ್ಲಿ ಶುಂಠಿ ಸೇರಿಸಿ



ನೀವು ಪ್ರತಿದಿನ ಶುಂಠಿಯನ್ನು ಕೇವಲ 2 ವಾರದರೆಗೆ ನಿಮ್ಮ ಆಹಾರದ ಭಾಗವಾಗಿ ಮಾಡಿದರೆ, ನಿಮ್ಮ ದೇಹದಲ್ಲಿ ನೀವು ಊಹಿಸಿರದ ಅದ್ಭುತ ಬದಲಾವಣೆಗಳನ್ನು ಕಾಣಬಹುದು ಎನ್ನುತ್ತಾರೆ ವೈದ್ಯರು.

ಶುಂಠಿಯು ಸಾಕಷ್ಟು ಆಯುರ್ವೇದಿಕ್ ಗುಣಗಳನ್ನು ಹೊಂದಿರುವ ಗಿಡಮೂಲಿಕೆಯಾಗಿದೆ. ಇದು ಜೀರ್ಣಕ್ರಿಯೆಗೆ ಸಹಾಯ ಮಾಡುತ್ತದೆ, ವಾಕರಿಕೆ ಕಡಿಮೆ ಮಾಡುತ್ತದೆ, ಕೊಲೆಸ್ಟ್ರಾಲ್ ಅನ್ನು ಕಡಿಮೆ ಮಾಡುತ್ತದೆ ನೋವನ್ನು ನಿರ್ವಹಿಸಲು ಸಹಾಯ ಮಾಡುವುದಲ್ಲದೆ, ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವ, ಅರಿವಿನ ಕಾರ್ಯವನ್ನು ಹೆಚ್ಚಿಸಲು ಸಹಕಾರಿಯಾಗಿದೆ.

ಇದನ್ನು ಪ್ರತಿದಿನ ನಿಮ್ಮ ಆಹಾರದಲ್ಲಿ ಸೇರಿಸಿಕೊಂಡರೆ ಸಾಕಷ್ಟು ಆರೋಗ್ಯಕಾರಿ ಪ್ರಯೋಜನಗಳನ್ನು ಪಡೆಯಬಹುದು ಎನ್ನುತ್ತಾರೆ ಹಾರ್ವರ್ಡ್‌ನ ಗ್ಯಾಸ್ಟ್ರೋಎಂಟರಾಲಜಿಸ್ಟ್ ಡಾ. ಸೌರಭ್ ಸೇಥಿ.

**ಜೀರ್ಣಕ್ರಿಯೆಯನ್ನು ಸುಧಾರಿಸುತ್ತದೆ:** ಅನೇಕ ಜನರು ಅನಿಲ, ಅಜೀರ್ಣ, ಮಲಬದ್ಧತೆಯಂತಹ ಹೊಟ್ಟೆ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಶುಂಠಿ ಜೀರ್ಣಾಂಗ ವ್ಯವಸ್ಥೆಯ ಮೂಲಕ ಆಹಾರ ವೇಗವಾಗಿ ಚಲಿಸಲು ಸಹಾಯ ಮಾಡುತ್ತದೆ. ಪ್ರತಿದಿನ ಶುಂಠಿಯನ್ನು ಸೇವಿಸುವುದರಿಂದ ನಿಮ್ಮ ಜೀರ್ಣಕ್ರಿಯೆಯನ್ನು ಸುಧಾರಿಸುವುದಲ್ಲದೆ, ಉಬ್ಬುವುದು ಮತ್ತು ಭಾರವನ್ನು ತೊಡೆದುಹಾಕಲು ಸಹಾಯ ಮಾಡುತ್ತದೆ.



**ಉರಿಯೂತವನ್ನು ಕಡಿಮೆ ಮಾಡುತ್ತದೆ:** ಇಂದಿನ ಜೀವನಶೈಲಿಯಲ್ಲಿ ಉರಿಯೂತವು ಸಾಮಾನ್ಯ ಸಮಸ್ಯೆಯಾಗಿದೆ. ಇದು ಅನೇಕ ರೋಗಗಳ ಮೂಲವಾಗಿದೆ. ಶುಂಠಿಯು ಜಿಂಜರಾಲ್ ಎಂಬ ಪ್ರಬಲ ಕಿಣ್ವವನ್ನು ಹೊಂದಿದ್ದು, ಉರಿಯೂತದ ಗುಣಲಕ್ಷಣಗಳಿಗೆ ಹೆಸರುವಾಸಿಯಾಗಿದೆ. ಎರಡು ವಾರಗಳ ಕಾಲ ಶುಂಠಿಯನ್ನು ನಿಯಮಿತವಾಗಿ ಸೇವಿಸುವುದರಿಂದ ದೇಹದಲ್ಲಿ ಉರಿಯೂತವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ, ಇದು ಕೀಲು ನೋವು, ಸ್ನಾಯುಗಳ ಒತ್ತಡ ಮತ್ತು ಇತರ ಉರಿಯೂತ ಸಂಬಂಧಿತ ಸಮಸ್ಯೆಗಳಿಂದ ಪರಿಹಾರವನ್ನು ನೀಡುತ್ತದೆ.

**ಹಕ್ಕು ನಿರಾಕರಣೆ:** ಈ ಲೇಖನವು ಕೇವಲ ಮಾಹಿತಿಗಾಗಿ ಮಾತ್ರ. ಇದು ಯಾವುದೇ ರೀತಿಯಲ್ಲೂ ಯಾವುದೇ ಔಷಧಿ ಅಥವಾ ಚಿಕಿತ್ಸೆಗೆ ಪರ್ಯಾಯವಲ್ಲ. ವಿಜಯಕರ್ನಾಟಕ ಇದರ ಸತ್ಯತೆ, ನಿಖರತೆ ಮತ್ತು ಪರಿಣಾಮದ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಿಲ್ಲ.

**ಕೆಟ್ಟ ಕೊಲೆಸ್ಟ್ರಾಲ್ ಕಡಿಮೆ ಮಾಡುತ್ತದೆ:** ಹೃದಯ ಕಾಯಿಲೆಗೆ ಹೆಚ್ಚಿನ ಕೊಲೆಸ್ಟ್ರಾಲ್ ಪ್ರಮುಖ ಕಾರಣವಾಗಿದೆ. ಅಧ್ಯಯನಗಳು ಶುಂಠಿ ಕೆಟ್ಟ ಕೊಲೆಸ್ಟ್ರಾಲ್ ಮಟ್ಟವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ ಎಂದು ತೋರಿಸಿವೆ. ನಿಮ್ಮ ಹೃದಯದ ಆರೋಗ್ಯವನ್ನು ಸುಧಾರಿಸಲು ನೀವು ಬಯಸಿದರೆ, ಶುಂಠಿಯನ್ನು ನಿಮ್ಮ ಆಹಾರದ ಭಾಗವಾಗಿಸಿಕೊಳ್ಳುವುದು ಉತ್ತಮ. **ರಕ್ತ ತೆಳುಗೊಳಿಸುತ್ತದೆ:** ಶುಂಠಿ ನೈಸರ್ಗಿಕ ರಕ್ತ ತೆಳುಗೊಳಿಸುವ ಔಷಧಿಯಾಗಿ ಕಾರ್ಯನಿರ್ವಹಿಸುತ್ತದೆ. ಇದು ಸ್ಯಾಲಿಸಿಲೇಟ್ ಅನ್ನು ಹೊಂದಿರುತ್ತದೆ, ಇದು ಪ್ರಸಿದ್ಧ ರಕ್ತ ತೆಳುಗೊಳಿಸುವ ಔಷಧಿಯಾದ ಆಸ್ಪಿರಿನ್‌ನಂತೆಯೇ ಗುಣಲಕ್ಷಣಗಳನ್ನು ಹೊಂದಿರುವ ನೈಸರ್ಗಿಕ ಸಂಯುಕ್ತವಾಗಿದೆ. ಒಂದು ವೇಳೆ ನೀವು ಯಾವುದೇ ರಕ್ತ ತೆಳುಗೊಳಿಸುವ ಔಷಧಿಯನ್ನು ತೆಗೆದುಕೊಳ್ಳುತ್ತಿದ್ದರೆ ಶುಂಠಿ ತೆಗೆದುಕೊಳ್ಳುವಾಗ ಎಚ್ಚರವಹಿಸಿ.

# ಥೈರಾಯ್ಡ್‌ನ್ನು ಆಯುರ್ವೇದಿಕ್ ಕಂಟ್ರೋಲ್‌ನಲ್ಲಿಡಬಹುದಾ?

ಥೈರಾಯ್ಡ್ ಸಮಸ್ಯೆಯು ಒಂದು ಗಂಭೀರ ಆರೋಗ್ಯ ಸಮಸ್ಯೆಯಾಗಿದ್ದು, ಅದಕ್ಕೆ ಚಿಕಿತ್ಸೆ ಪಡೆಯದಿದ್ದರೆ ಇನ್ನಿತರ ಸಮಸ್ಯೆಗೆ ಕಾರಣವಾಗಬಹುದು. ಥೈರಾಯ್ಡ್‌ನ್ನು ಕಂಟ್ರೋಲ್‌ನಲ್ಲಿಡಲು ಆಯುರ್ವೇದಿಕ್ ಗಿಡಮೂಲಿಕೆಗಳೂ ಉತ್ತಮ ಎನ್ನಲಾಗುತ್ತದೆ. ಆ ಗಿಡಮೂಲಿಕೆಗಳ ಬಗ್ಗೆ ತಿಳಿಯೋಣ. ಥೈರಾಯ್ಡ್ ಸಮಸ್ಯೆಯು ಥೈರಾಯ್ಡ್ ಕಾರ್ಯನಿರ್ವಹಣೆಯ ಮೇಲೆ ಪರಿಣಾಮ ಬೀರುವ ಪರಿಸ್ಥಿತಿಗಳಿಗೆ ಒಂದು ಸಾಮಾನ್ಯ ಪದವಾಗಿದೆ.

ಥೈರಾಯ್ಡ್ ಹಾರ್ಮೋನ್ ಅವು ಹೃದಯ ಬಡಿತ, ದೇಹದ ಉಷ್ಣತೆ, ಮನಸ್ಥಿತಿ ಮತ್ತು ಇತರ ಅಗತ್ಯ ದೈಹಿಕ ಕಾರ್ಯಗಳ ಮೇಲೂ ಪರಿಣಾಮ ಬೀರುತ್ತವೆ. ಥೈರಾಯ್ಡ್ ಸಮಸ್ಯೆಯು ಮಹಿಳೆಯರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದೆ. 20 ಮತ್ತು 30 ರ ಹರೆಯದ ಮಹಿಳೆಯರಲ್ಲಿ ಆಯಾಸ, ನಿಶ್ಯಕ್ತಿ , ಮನಸ್ಥಿತಿಯಲ್ಲಿ ಬದಲಾವಣೆ ಇವೆಲ್ಲವೂ ಥೈರಾಯ್ಡ್‌ನಿಂದಾಗಿರುತ್ತದೆ. ಕೆಲವರಿಗೆ ಗರ್ಭಾವಸ್ಥೆಯಲ್ಲೂ ಥೈರಾಯ್ಡ್ ಸಮಸ್ಯೆ ಕಾಡಲಾರಂಭಿಸುತ್ತದೆ.

**ಸಂಶೋಧನೆ ಏನು ಹೇಳುತ್ತದೆ:** ಇಂಟರ್ನ್ಯಾಷನಲ್ ಜರ್ನಲ್ ಆಫ್ ಮೆಡಿಕಲ್ ಅಂಡ್ ಹೆಲ್ತ್ ರಿಸರ್ಚ್ ಪ್ರಕಾರ, ಭಾರತದಲ್ಲಿ 42 ಮಿಲಿಯನ್‌ಗಿಂತಲೂ ಹೆಚ್ಚು ಜನರು ಥೈರಾಯ್ಡ್ ಅಸ್ವಸ್ಥತೆಗಳಿಂದ ಬಳಲುತ್ತಿದ್ದಾರೆ. ತಳಿಶಾಸ್ತ್ರ, ಆಹಾರ ಮತ್ತು ಪರಿಸರ ವಿಷಗಳು ತಮ್ಮ ಪಾತ್ರವನ್ನು ವಹಿಸುತ್ತಿದ್ದರೂ, ಹೊಸ ಸಂಶೋಧನೆಯು ಒತ್ತಡವೇ ಇದಕ್ಕೆ ಪ್ರಮುಖ ಕಾರಣ ಎಂದು ತೋರಿಸುತ್ತಿದೆ.

**ಥೈರಾಯ್ಡ್ ಒತ್ತಡದ ಸಂಬಂಧವನ್ನು ಅರ್ಥಮಾಡಿಕೊಳ್ಳುವುದು:** ಕಪಿವಾದಲ್ಲಿ ಮುಖ್ಯ ನಾವೀನ್ಯತೆ ಅಧಿಕಾರಿ ಡಾ. ಗೋವಿಂದರಾಜನ್ ಪ್ರಕಾರ, ಥೈರಾಯ್ಡ್ ಗ್ರಂಥಿಯು ಹೈಪೋಥಾಲಾಮಿಕ್-ಪಿಟ್ಯುಟರಿ-ಅಡ್ರಿನಲ್ ಅಕ್ಷ ಎಂಬ ಸಂವಹನ ಜಾಲದ ಮೂಲಕ ಮೆದುಳು, ಮೂತ್ರಜನಕಾಂಗ ಗ್ರಂಥಿಗಳೊಂದಿಗೆ ನಿಕಟವಾಗಿ ಕಾರ್ಯನಿರ್ವಹಿಸುತ್ತದೆ. ಮೆದುಳು ಒತ್ತಡವನ್ನು ಗ್ರಹಿಸಿದಾಗ, ಅದು ಮೂತ್ರಜನಕಾಂಗ ಗ್ರಂಥಿಗಳನ್ನು ಕಾರ್ಟಿಸೋಲ್ ಉತ್ಪಾದಿಸಲು ಸಂಕೇತಿಸುತ್ತದೆ. ಈ ಹಾರ್ಮೋನ್ ದೇಹವು ತಕ್ಷಣದ ಸವಾಲುಗಳಿಗೆ ಪ್ರತಿಕ್ರಿಯಿಸಲು ಸಹಾಯ ಮಾಡುತ್ತದೆ

**ಸಣ್ಣ, ಉದ್ದೇಶಪೂರ್ವಕ ಬದಲಾವಣೆಗಳೆಂದರೆ ನಿದ್ರೆಗೆ ಆದ್ಯತೆ ನೀಡುವುದು, ಮೊಬೈಲ್, ಲ್ಯಾಪ್‌ಟಾಪ್ ಸ್ಕ್ರೀನ್ ಸಮಯವನ್ನು ಕಡಿಮೆ ಮಾಡುವುದು, ನಿಮ್ಮ ದೇಹವನ್ನು ಅಯೋಡಿನ್, ಸೆಲೆನಿಯಮ್ ಸತುವುಗಳಿಂದ ಪೋಷಿಸುವಂತಹ ದೊಡ್ಡ ವ್ಯತ್ಯಾಸವನ್ನುಂಟುಮಾಡುವುದು. ಯೋಗ, ಪ್ರಾಣಾಯಾಮ, ಅಶ್ವಗಂಧ, ಬ್ರಾಹ್ಮಿ, ಶತಾವರಿಯಂತಹ ಜಾಗರೂಕ ಗಿಡಮೂಲಿಕೆಗಳ ಬಳಕೆಯಂತಹ ಆಯುರ್ವೇದ ಅಭ್ಯಾಸಗಳು ಒತ್ತಡದ ಪ್ರತಿಕ್ರಿಯೆಯನ್ನು ಮಾರ್ಪಡಿಸಲು ಮತ್ತು ಹಾರ್ಮೋನುಗಳ ಸ್ಥಿತಿಸ್ಥಾಪಕತ್ವವನ್ನು ನಿರ್ಮಿಸಲು ಸಹಾಯ ಮಾಡುತ್ತದೆ ಎನ್ನುತ್ತಾರೆ ಡಾ. ಗೋವಿಂದರಾಜನ್.**

ಆದರೆ ಒತ್ತಡವು ದೀರ್ಘಕಾಲದವರೆಗೆ ಆದಾಗ, ಕಾರ್ಟಿಸೋಲ್ ಮಟ್ಟಗಳು ಹೆಚ್ಚಿರುತ್ತವೆ ಥೈರಾಯ್ಡ್ ಸೇರಿದಂತೆ ಇತರ ಹಾರ್ಮೋನ್ ವ್ಯವಸ್ಥೆಗಳೊಂದಿಗೆ ಹಸ್ತಕ್ಷೇಪ ಮಾಡಲು ಪ್ರಾರಂಭಿಸುತ್ತವೆ.

**ಒತ್ತಡಕ್ಕೂ ಥೈರಾಯ್ಡ್‌ಗೂ ಸಂಬಂಧವಿದೆ:** ಕರ್ನಾಟಕದ ಬಳ್ಳಾರಿಯಲ್ಲಿರುವ ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ 2024 ರಲ್ಲಿ ನಡೆಸಿದ ಅಧ್ಯಯನವು 20 ರಿಂದ 49 ವರ್ಷ ವಯಸ್ಸಿನ ಆರೋಗ್ಯವಂತ ಮಹಿಳೆಯರಲ್ಲಿ ಗ್ರಹಿಸಿದ ಒತ್ತಡ, ಥೈರಾಯ್ಡ್ ಕಾರ್ಯದ ನಡುವಿನ ಸಂಬಂಧವನ್ನು ಅನ್ವೇಷಿಸಿತು. ಹೆಚ್ಚಿನ ಗ್ರಹಿಸಿದ ಒತ್ತಡದ ಮಟ್ಟಗಳು ಅಧಿಕ ಥೈರಾಯ್ಡ್-ಉತ್ತೇಜಿಸುವ ಹಾರ್ಮೋನ್ ಮಟ್ಟಗಳೊಂದಿಗೆ ಸಂಬಂಧ ಹೊಂದಿವೆ ಎಂದು ಅಧ್ಯಯನವು ಕಂಡುಹಿಡಿದಿದೆ, ಇದು ದೀರ್ಘಕಾಲದ ಒತ್ತಡ ಮತ್ತು ಥೈರಾಯ್ಡ್ ಅಪಸಾಮಾನ್ಯ ಕ್ರಿಯೆಯ ನಡುವಿನ ಸಂಭಾವ್ಯ ಸಂಬಂಧವನ್ನು ಸೂಚಿಸುತ್ತದೆ. **ಅಶ್ವಗಂಧ:** ಅಶ್ವಗಂಧವು ಈ ಕ್ಷೇತ್ರದಲ್ಲಿ ಹೆಚ್ಚು ಸಂಶೋಧಿಸಲ್ಪಟ್ಟ ಅಡಾಪ್ಟೋಜೆನ್‌ಗಳಲ್ಲಿ ಒಂದಾಗಿದೆ. 2023 ರ ಬೆಂಬಲಿತ ಅಧ್ಯಯನವು ಅಶ್ವಗಂಧದ ಬೇರಿನ ಸಾರವನ್ನು ಸೇವಿಸಿರುವ ಸಬ್‌ಕ್ಲಿನಿಕಲ್ ಹೈಪೋಥೈರಾಯ್ಡಿಸಮ್ ಹೊಂದಿರುವ ವ್ಯಕ್ತಿಗಳಲ್ಲಿ T3 ಮತ್ತು T4 ಮಟ್ಟಗಳಲ್ಲಿ ಗಮನಾರ್ಹ ಸುಧಾರಣೆಗಳನ್ನು ವರದಿ ಮಾಡಿದೆ. ಇದು ನೈಸರ್ಗಿಕ ಥೈರಾಯ್ಡ್ ಕಾರ್ಯವನ್ನು ಬೆಂಬಲಿಸುವಲ್ಲಿ ಸಂಭಾವ್ಯ ಪಾತ್ರವನ್ನು ತೋರಿಸಿದೆ. ಹಾಗಾಗಿ ಥೈರಾಯ್ಡ್ ಇರುವವರಿಗೆ ಅಶ್ವಗಂಧದ ಸಾರವು ಉತ್ತಮ ಎನ್ನಲಾಗುತ್ತದೆ.

**ಗಿಡಮೂಲಿಕೆ ತೆಗೆದುಕೊಳ್ಳುವಾಗ ಡೋಸೇಜ್ ಬಗ್ಗೆ ಗಮನವಿರಲಿ:** ನೀವು ಯಾವುದೇ ರೀತಿಯ ಹೊಸ ಪೂರಕ ಅಥವಾ ಗಿಡಮೂಲಿಕೆಯನ್ನು ಪರಿಗಣಿಸುವಾಗ, ಆರೋಗ್ಯ ವೃತ್ತಿಪರರನ್ನು ಸಂಪರ್ಕಿಸುವುದು ಉತ್ತಮ. ವಿಶೇಷವಾಗಿ ನೀವು ಥೈರಾಯ್ಡ್ ಔಷಧಿಗಳನ್ನು ತೆಗೆದುಕೊಳ್ಳುತ್ತಿದ್ದರೆ ಅಥವಾ ಇತರ ಆರೋಗ್ಯ ಪರಿಸ್ಥಿತಿಗಳನ್ನು ನಿರ್ವಹಿಸುತ್ತಿದ್ದರೆ.

**ಆಯುರ್ವೇದ ಅಭ್ಯಾಸಗಳು ಒತ್ತಡದ ಪ್ರತಿಕ್ರಿಯೆ**



### ಶತಾವರಿ ಮತ್ತು ಬ್ರಾಹ್ಮಿ

**ಇತರ ಎರಡು ಆಯುರ್ವೇದ ಪ್ರಧಾನ ಪದಾರ್ಥಗಳು ನರಮಂಡಲವನ್ನು ಶಾಂತಗೊಳಿಸಲು ಮತ್ತು ಮೂತ್ರಜನಕಾಂಗದ ಸ್ಥಿತಿಸ್ಥಾಪಕತ್ವವನ್ನು ಹೆಚ್ಚಿಸಲು ಹೆಸರುವಾಸಿಯಾಗಿದೆ. ಎರಡೂ ಕಾಲಾನಂತರದಲ್ಲಿ ಹಾರ್ಮೋನುಗಳ ಸ್ಥಿರತೆಯನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ. ಒಟ್ಟಾಗಿ, ಈ ಗಿಡಮೂಲಿಕೆಗಳು ಔಷಧಿಗಳನ್ನು ಮಾತ್ರ ಮೀರಿ ತಮ್ಮ ಥೈರಾಯ್ಡ್ ಬಗ್ಗೆ ಕಾಳಜಿ ವಹಿಸಲು ಬಯಸುವವರಿಗೆ ಉತ್ತಮವಾಗಿದೆ.**

# ನರ ಡ್ಯಾಮೇಜ್ ಆದರೆ ಯಾವೆಲ್ಲಾ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ

ನರಹಾನಿಯು ನಮ್ಮ ದೇಹದ ಕಾರ್ಯದ ಮೇಲೆ ಪರಿಣಾಮ ಬೀರಬಲ್ಲದು. ಆದ್ದರಿಂದ ಆರಂಭಿಕ ನರ ಹಾನಿಯನ್ನು ಗುರುತಿಸುವುದು ಮುಖ್ಯ. ತ್ವರಿತ ಪತ್ತೆ ಚಿಕಿತ್ಸೆಯಲ್ಲಿ ಸಹಾಯ ಮಾಡುತ್ತದೆ. ದೈನಂದಿನ ಜೀವನದಲ್ಲಿ ನೀವು ಗಮನಿಸಬಹುದಾದ ನರ ಹಾನಿಯ ಐದು ಸಾಮಾನ್ಯ ಲಕ್ಷಣಗಳನ್ನು ಇಲ್ಲಿ ನೀಡಲಾಗಿದೆ. ನರಗಳು ನಮ್ಮ ವ್ಯವಸ್ಥೆಯ ಸಂವಹನ ಮಾರ್ಗಗಳಾಗಿ ಕಾರ್ಯನಿರ್ವಹಿಸುತ್ತವೆ. ಮೆದುಳು ಮತ್ತು ದೇಹದ ಉಳಿದ ಭಾಗಗಳ ನಡುವೆ ಸಂಕೇತಗಳನ್ನು ರವಾನಿಸುತ್ತವೆ. ಈ ಸಂಕೇತಗಳು ನಮಗೆ ಸಂವೇದನೆಗಳನ್ನು ಅನುಭವಿಸಲು, ನಮ್ಮ ಸ್ನಾಯುಗಳನ್ನು ಚಲಿಸಲು ಮತ್ತು ವಿವಿಧ ದೈಹಿಕ ಕಾರ್ಯಗಳನ್ನು ನಿರ್ವಹಿಸಲು ಅನುವು ಮಾಡಿಕೊಡುತ್ತದೆ. ಆದರೆ ಕೆಲವೊಮ್ಮೆ ಕೆಲವು ಗಾಯಗಳು, ದೀರ್ಘಕಾಲದ ಪರಿಸ್ಥಿತಿಗಳು ಅಥವಾ ಅನಾರೋಗ್ಯದಿಂದಾಗಿ ನರ ಹಾನಿ ಸಂಭವಿಸಬಹುದು. ಈ ನರಹಾನಿಯನ್ನು ಯಾವ ರೀತಿ ಪತ್ತೆಹಚ್ಚಬಹುದು ಎನ್ನುವುದನ್ನು ತಿಳಿಯೋಣ.

**ಜುಮ್ಮೆನಿಸುವಿಕೆ, ಮರಗಟ್ಟುವಿಕೆ ಅಥವಾ ಸುಡುವ ಸಂವೇದನೆಗಳು:** ಕಾಲ್ಬೆರಳು/ ಕೈಬೆರಳು ಇದ್ದಕ್ಕಿದ್ದಂತೆ ಮರಗಟ್ಟುತ್ತಿದ್ದಂತ ಅನುಭವವಾಗುತ್ತಿದೆಯೇ? ಇದು ನರ ಹಾನಿಯ ಆರಂಭಿಕ ಮತ್ತು ಸಾಮಾನ್ಯ ಲಕ್ಷಣಗಳಲ್ಲಿ ಒಂದು ಜುಮ್ಮೆನಿಸುವಿಕೆ ಅಥವಾ ಮುಳ್ಳು ಚುಚ್ಚಿದಂತಹ ಸಂವೇದನೆಗಳು ಉಂಟಾಗುತ್ತದೆ. ಇದು ಸಾಮಾನ್ಯವಾಗಿ ಪಾದಗಳು ಅಥವಾ ಕೈಗಳಲ್ಲಿ ಪ್ರಾರಂಭವಾಗುತ್ತದೆ ಮತ್ತು ನಿಧಾನವಾಗಿ ಕಾಲುಗಳು ಅಥವಾ ತೋಳುಗಳವರೆಗೆ ಹರಡಬಹುದು. ಚರ್ಮದ ಕೆಳಗೆ ಅಥವಾ ಮರಗಟ್ಟುವಿಕೆಯನ್ನು ನೀವು ಅನುಭವಿಸಬಹುದು.

**ಮೆದುಳಿಗೆ ಸಂಕೇತ ಕಳಿಸಲು ವಿಫಲವಾಗುತ್ತದೆ:** ಹಾನಿಗೊಳಗಾದ ನರಗಳು ಮೆದುಳಿಗೆ ಅಸಹಜ ಸಂಕೇತಗಳನ್ನು ಕಳುಹಿಸುವುದರಿಂದ ಅಥವಾ ಸಂಕೇತಗಳನ್ನು ಸರಿಯಾಗಿ ಕಳುಹಿಸಲು ವಿಫಲವಾಗುವುದರಿಂದ ಈ ಸಂವೇದನೆಗಳು ಉಂಟಾಗುತ್ತವೆ. ತಾಪಮಾನ ಬದಲಾವಣೆಗಳನ್ನು ಅನುಭವಿಸುವ ಸಾಮರ್ಥ್ಯವನ್ನು ನೀವು ಕಳೆದುಕೊಳ್ಳಬಹುದು, ಆಕಸ್ಮಿಕವಾಗಿ ತುಂಬಾ ಬಿಸಿಯಾದ ಅಥವಾ ತುಂಬಾ ತಣ್ಣನೆಯ ವಸ್ತುವನ್ನೇನಾದರೂ ಮುಟ್ಟಿದರೆ ಇದು ಅಪಾಯಕಾರಿಯಾಗಬಹುದು. ಲಕ್ಷಣವನ್ನು ಹೆಚ್ಚಾಗಿ ನಿರ್ಲಕ್ಷಿಸಬಾರದು.

**ಸ್ನಾಯು ದೌರ್ಬಲ್ಯ, ಸಮತೋಲನ ನಷ್ಟ:** ನರಗಳ ಹಾನಿಯು ನಿಮ್ಮ ಸ್ನಾಯುಗಳ ಮೇಲೆ ಪರಿಣಾಮ ಬೀರಬಹುದು ಏಕೆಂದರೆ ಮೋಟಾರು ನರಗಳು ಚಲನೆಯನ್ನು ನಿಯಂತ್ರಿಸುತ್ತವೆ. ಈ ನರಗಳು ಹಾನಿಗೊಳಗಾದಾಗ, ಸ್ನಾಯು ದೌರ್ಬಲ್ಯ ಅಥವಾ ನಿಮ್ಮ ದೇಹದ ಭಾಗಗಳನ್ನು ಚಲಿಸುವಲ್ಲಿ ತೊಂದರೆ ಅನುಭವಿಸಬಹುದು. ಒಂದು ಕಪ್ ಚಹಾ ಹಿಡಿಯುವುದು ಅಥವಾ ನಡೆಯುವಂತಹ ಸಣ್ಣ ಪುಟ್ಟ ಕೆಲಸಗಳನ್ನು ಮಾಡಲೂ ಕಷ್ಟವಾಗಬಹುದು. ಕೆಲವು ಸಂದರ್ಭಗಳಲ್ಲಿ ಸರಿಯಾದ ನರ ಸಂಕೇತಗಳ ಕೊರತೆಯಿಂದಾಗಿ ಸ್ನಾಯುಗಳ ಸೆಳೆತ ಅಥವಾ ಸ್ನಾಯುಗಳು ಕುಗ್ಗಬಹುದು. ಕೆಲವು ಪ್ರದೇಶಗಳಲ್ಲಿ ಪಾರ್ಶ್ವವಾಯು ಅಥವಾ ಭಾಗಶಃ ಪಾರ್ಶ್ವವಾಯುವಿಗೆ ತೀವ್ರ ಹಾನಿಯುಂಟಾಗಬಹುದು.

### ಯಾವೆಲ್ಲಾ ಸಮಸ್ಯೆ ಉಂಟಾಗುತ್ತದೆ

- ಎದ್ದಾಗ ತಲೆತಿರುಗುವಿಕೆ ಅಥವಾ ಮೂರ್ಛೆ ಹೋಗುವುದು
- ಅತಿಯಾದ ಬೆವರುವುದು ಅಥವಾ ಬೆವರುವುದೇ ಇಲ್ಲ
- ಹೊಟ್ಟೆ ಉಬ್ಬುವುದು, ಮಲಬದ್ಧತೆ ಅಥವಾ ನುಂಗಲು ತೊಂದರೆ ಮುಂತಾದ ಜೀರ್ಣಕಾರಿ ಸಮಸ್ಯೆಗಳು
- ಮೂತ್ರ ಸೋರಿಕೆ ಅಥವಾ ಮೂತ್ರಕೋಶವನ್ನು ಖಾಲಿ ಮಾಡುವಲ್ಲಿ ತೊಂದರೆ ಉಂಟಾಗುವುದು
- ಪುರುಷರಲ್ಲಿ ನಿಮಿರುವಿಕೆಯ ಸಮಸ್ಯೆಗಳು
- ಮಹಿಳೆಯರಲ್ಲಿ ಯೋನಿ ಶುಷ್ಕತೆ ಮುಂತಾದ ಲೈಂಗಿಕ ಅಪಸಾಮಾನ್ಯ ಕ್ರಿಯೆ.



# ಕುತ್ತಿಗೆ ನೋವು ಹೋಗಲಾಡಿಸಲು ಇವಿಷ್ಟು ಮಾಡಿದ್ರೆ ಸಾಕು

ಸಾಮಾನ್ಯವಾಗಿ ಪ್ರತಿಯೊಬ್ಬರಿಗೂ ಕುತ್ತಿಗೆ ನೋವು ಕಾಡುತ್ತದೆ. ಅದು ಮಲಗುವ ಭಂಗಿ ಸರಿಯಾಗಿರದೇ ಇರಬಹುದು ಅಥವಾ ಲ್ಯಾಪ್‌ಟಾಪ್‌ನಲ್ಲಿ ಕುತ್ತಿಗೆ ಬಗ್ಗಿಸಿ ಕೆಲಸ ಮಾಡುವುದರಿಂದಲೂ ಆಗಿರಬಹುದು. ಇತ್ತೀಚಿನ ದಿನಗಳಲ್ಲಿ ಗಂಟೆಗಟ್ಟಲೆ ಕಂಪ್ಯೂಟರ್ ಅಥವಾ ಮೊಬೈಲ್ ನೋಡುವುದು, ತಪ್ಪು ಭಂಗಿಯಲ್ಲಿ ಕುಳಿತುಕೊಳ್ಳುವುದು ಅಥವಾ ಮಲಗುವುದು, ಇವೆಲ್ಲವೂ ಕುತ್ತಿಗೆ ನೋವಿಗೆ ದೊಡ್ಡ ಕಾರಣಗಳಾಗಿವೆ. ಕುತ್ತಿಗೆಯಲ್ಲಿ ಒತ್ತಡ, ಬಿಗಿತ ಅಥವಾ ಕೆಲವೊಮ್ಮೆ ತೀವ್ರವಾದ ನೋವು ದೇಹವನ್ನು ಅನಾನುಕೂಲಗೊಳಿಸುವುದಲ್ಲದೆ, ದೈನಂದಿನ ಕೆಲಸಗಳನ್ನು ಕಷ್ಟಕರವಾಗಿಸುತ್ತದೆ.

ದೈನಂದಿನ ಜೀವನದಲ್ಲಿ ಕೆಲವೊಂದು ಪರಿಣಾಮಕಾರಿ ಬದಲಾವಣೆಗಳನ್ನು ಮಾಡುವ ಮೂಲಕ ಸೇರಿಸುವ ಮೂಲಕ ಈ ನೋವನ್ನು ತೊಡೆದುಹಾಕಬಹುದು.

### ಬಿಸಿನೀರಿನ ಶಾಖ ನೀಡಿ

**ನೋವಿರುವ ಜಾಗಕ್ಕೆ ಬಿಸಿ ನೀರಿನ ಶಾಖ ನೀಡುವುದು ಉತ್ತಮ ವಿಧಾನವಾಗಿದೆ. ಕುತ್ತಿಗೆಯ ಮೇಲೆ 15 ನಿಮಿಷಗಳ ಕಾಲ ಸೌಮ್ಯವಾದ ಬಿಸಿನೀರಿನ ಬಾಟಲಿ ಅಥವಾ ಹೀಟ್‌ಪ್ಯಾಡ್ ಅನ್ನು ಇಟ್ಟು ಶಾಖ ನೀಡಿ. ಶಾಖವು ಸ್ನಾಯುಗಳನ್ನು ಸಡಿಲಗೊಳಿಸುತ್ತದೆ ಮತ್ತು ಬಿಗಿತವನ್ನು ಕಡಿಮೆ ಮಾಡುತ್ತದೆ.**

**ಸರಿಯಾದ ಭಂಗಿಯಲ್ಲಿ ಕುಳಿತುಕೊಳ್ಳಿ:** ನೀವು ಕುಳಿತಾಗಲೆಲ್ಲಾ, ನಿಮ್ಮ ಬೆನ್ನನ್ನು ನೇರವಾಗಿ ಇರಿಸಿ, ಭುಜಗಳನ್ನು ಸಡಿಲಗೊಳಿಸಿ ಮತ್ತು ಲ್ಯಾಪ್‌ಟಾಪ್ ಆಗಿರಲಿ ಅಥವಾ ಮೊಬೈಲ್ ಸ್ಕ್ರೀನ್ ಆಗಿರಲಿ ನಿಮ್ಮ ಕಣ್ಣುಗಳ ಮಟ್ಟದಲ್ಲಿ ಇರಿಸಿ. ತಪ್ಪಾದ ಭಂಗಿಯಿಂದ ಉಂಟಾಗುವ ಒತ್ತಡವು ಕುತ್ತಿಗೆಯ ಸ್ನಾಯುಗಳ ಮೇಲೆ ಬೀಳುತ್ತದೆ. ಹಾಗಾಗಿ ನಿಮ್ಮ ಭಂಗಿಯನ್ನು ಸರಿಯಾಗಿರಿಸಿ ಇದು ನೋವನ್ನು ತಡೆಯುತ್ತದೆ. ಪ್ರತಿ 30 ನಿಮಿಷಗಳಿಗೊಮ್ಮೆ ಎದ್ದು ನಡೆಯಿರಿ ಅಥವಾ ಸ್ವಲ್ಪ ವ್ಯಾಯಾಮ ಮಾಡಿ. ಕುತ್ತಿಗೆಯ ಸ್ನಾಯುಗಳ ಮೇಲೆ ನಿರಂತರ ಒತ್ತಡವಿರುವುದಿಲ್ಲ ಮತ್ತು ನೋವು ನಿವಾರಣೆಯಾಗುತ್ತದೆ.

**ದಿಂಬು ಮತ್ತು ಮಲಗುವ ಭಂಗಿಗೆ ಗಮನ ಕೊಡಿ:** ಮಲಗುವಾಗ ತುಂಬಾ ಎತ್ತರ ಅಥವಾ ತುಂಬಾ ಗಟ್ಟಿಯಾದ ದಿಂಬನ್ನು ಬಳಸಬೇಡಿ. ನಿಮ್ಮ ಬೆನ್ನಿನ ಮೇಲೆ ಮಲಗುವುದನ್ನು ಅಭ್ಯಾಸ ಮಾಡಿಕೊಳ್ಳಿ. ನಿದ್ದೆ ಮಾಡುವಾಗ ಕುತ್ತಿಗೆಗೆ ಸರಿಯಾದ ಬೆಂಬಲವನ್ನು ಪಡೆಯುವುದರಿಂದ ನೋವಿನ ಸಾಧ್ಯತೆಗಳು ಕಡಿಮೆಯಾಗುತ್ತವೆ.

**ಲಘುವಾದ ಕುತ್ತಿಗೆ ವ್ಯಾಯಾಮಗಳನ್ನು ಮಾಡಿ:** ನಿಮ್ಮ ಕುತ್ತಿಗೆಯನ್ನು ಎಡ ಮತ್ತು ಬಲಕ್ಕೆ ತಿರುಗಿಸಿ, ಅದನ್ನು ಮೇಲಕ್ಕೆ ಮತ್ತು ಕೆಳಕ್ಕೆ ತಿರುಗಿಸಿ ಮತ್ತು ದಿನಕ್ಕೆ ಎರಡು ಬಾರಿ ಈ ರೀತಿ ಮಾಡಿ. ಇದು ಕುತ್ತಿಗೆಯ ಭಾಗದಲ್ಲಿ ರಕ್ತ ಪರಿಚಲನೆ ಸುಧಾರಿಸುತ್ತದೆ ಮತ್ತು ಸ್ನಾಯುಗಳ ನಮ್ಯತೆ ಹೆಚ್ಚಾಗುತ್ತದೆ.

**ಮೊಬೈಲ್ ಬಳಸುವಾಗ ನಿಮ್ಮ ಕುತ್ತಿಗೆಯನ್ನು ಬಗ್ಗಿಸಬೇಡಿ:** ಮೊಬೈಲ್ ಅನ್ನು ಕಣ್ಣುಗಳಿಗೆ ಅನುಗುಣವಾಗಿ ತರಲು ಪ್ರಯತ್ನಿಸಿ ಕುತ್ತಿಗೆಯನ್ನು ಪದೇ ಪದೇ ತಿರುಗಿಸುತ್ತಾ ಇರಿ.

ಹೀಗೆ ಮಾಡುವುದರಿಂದ ಮೊಬೈಲ್‌ನಿಂದ ಉಂಟಾಗುವ ಸಾಮಾನ್ಯ ನೋವಾದ ಟೆಕ್ ನೆಕ್ ನಂತಹ ಪರಿಸ್ಥಿತಿಗಳನ್ನು ತಪ್ಪಿಸಬಹುದು.



# ದ್ವಿಭಾಷಾ ನೀತಿ: ಕರ್ನಾಟಕದಲ್ಲಿ ಪರ-ವಿರೋಧ ಅಭಿಪ್ರಾಯ




• **ಉದಯವಾಹಿನಿ, ಬೆಂಗಳೂರು**

ಶಾಲಾ ಶಿಕ್ಷಣದಲ್ಲಿ ದ್ವಿಭಾಷಾ ಸೂತ್ರವನ್ನು ಬೆಂಬಲಿಸುವ ಸಿದ್ದರಾಮಯ್ಯ ಅವರ ಹೇಳಿಕೆಯು ತೀವ್ರ ಚರ್ಚೆಯನ್ನು ಹುಟ್ಟುಹಾಕಿದೆ. ಕರ್ನಾಟದಲ್ಲಿ ಈಗಿರುವ ತ್ರಿಭಾಷಾ ಸೂತ್ರವು ಭಾಷಾ ಪ್ರಾವೀಣ್ಯತೆ ಮತ್ತು ಅರಿವಿನ ಪ್ರಗತಿಯನ್ನು ಹೆಚ್ಚಿಸಬಹುದು ಎಂದು ಕೆಲವರು ಹೇಳಿದರೆ, ಇನ್ನು ಕೆಲವರು ಇದನ್ನು ಹೆಚ್ಚುವರಿ ಶೈಕ್ಷಣಿಕ ಹೊರೆ ಅಥವಾ ಸ್ಥಳೀಯ ಭಾಷೆಗಳಿಗೆ ಸಂಭಾವ್ಯ ಬೆದರಿಕೆ ಒಡ್ಡಬಹುದು ಎನ್ನುತ್ತಾರೆ. ಭಾರತೀಯ ಶಾಲಾ ಪ್ರಮಾಣಪತ್ರ ಪರೀಕ್ಷೆಗಳ ಮಂಡಳಿಯಲ್ಲಿ ನಾವು ತ್ರಿಭಾಷಾ ಸೂತ್ರವನ್ನು ಪ್ರೋತ್ಸಾಹಿಸುತ್ತೇವೆ. ತ್ರಿಭಾಷಾ ನೀತಿಯು ಅತ್ಯಂತ ಯಶಸ್ವಿಯಾಗಿದೆ.

ಇಂದು, ಬೆಂಗಳೂರಿನಲ್ಲಿ, ಯಾವುದೇ ಮಗುವಿನೊಂದಿಗೆ ಮಾತನಾಡಿದರೂ ಬಹು ಭಾಷೆಗಳನ್ನು ಬಲ್ಲವರಾಗಿದ್ದು, ಸುಲಭವಾಗಿ ಮಾತನಾಡುತ್ತಾರೆ. ಮಕ್ಕಳು ಸ್ವಾಭಾವಿಕವಾಗಿ ವಿವಿಧ ಭಾಷೆಗಳಲ್ಲಿ ಕಲಿಯುವ ಮತ್ತು ಗ್ರಹಿಸುವ ಸಾಮರ್ಥ್ಯವನ್ನು ಹೊಂದಿರುವಾಗ, ಅವರನ್ನು ತಡೆಹಿಡಿಯಲು ನಾವು ಯಾರು ಎಂದು ಲಿಟಲ್ ಫ್ಲವರ್ ಪಬ್ಲಿಕ್ ಶಾಲೆಯ ಪ್ರಾಂಶುಪಾಲರಾದ ಗಾಯತ್ರಿ ದೇವಿ ಹೇಳುತ್ತಾರೆ.

## ಆಸ್ತಿಗಳ ಇ-ಖಾತಾ ನೀಡುವ ಅಭಿಯಾನ ಆ. 10ರವರೆಗೆ ವಿಸ್ತರಣೆ

• ಉದಯವಾಹಿನಿ,ಚಿಂಚೋಳಿ



ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ಹಾಗೂ ಪುರಸಭೆ ವ್ಯಾಪ್ತಿಯಲ್ಲಿ ಆಸ್ತಿಗಳಿಗೆ ಇ-ಖಾತಾ ನೀಡುವ ಅಭಿಯಾನದ ಅವಧಿಯನ್ನು ಅಗಸ್ಟ್ 10ರವರೆಗೆ ಸರ್ಕಾರ ವಿಸ್ತರಿಸಲಾಗಿದೆ ಸಾರ್ವಜನಿಕರು ಸದುಪಯೋಗ ಪಡೆದುಕೊಳ್ಳಬೇಕು ಎಂದು ಪುರಸಭೆ ಅಧ್ಯಕ್ಷ ಆನಂದಕುಮಾರ ಟೈಗರ ತಿಳಿಸಿದ್ದಾರೆ. ಪತ್ರಿಕಾ ಪ್ರಕಟಣೆ ಹೊರಡಿಸಿದ ಅವರು,ಸರ್ಕಾರದ ಪತ್ರದಲ್ಲಿ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ಪುರಸಭೆ ವ್ಯಾಪ್ತಿಯಲ್ಲಿ ಇ-ಖಾತಾ ನೀಡಲು ಮೇ 10ರವರೆಗೆ ಅಭಿಯಾನ ನಡೆಸಲಾಗಿದ್ದು, ಸದರಿ ದಿನಾಂಕದವರೆಗೆ ನಿರೀಕ್ಷಿತ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗದ ಕಾರಣ ಇ-ಖಾತಾ ನೀಡಲು ಬಾಕಿಯಿರುವುದರಿಂದ ಸದರಿ ಅಭಿಯಾನದ ಅವಧಿಯನ್ನು ಅಗಸ್ಟ್ 10ರವರೆಗೆ ಸರ್ಕಾರ ವಿಸ್ತರಿಸಿ ಅನುಮೋದನೆ ನೀಡಿ ಆದೇಶ ಹೊರಡಿಸಿದೆ. ಆದ್ದರಿಂದ ಇ-ಖಾತಾ ಅಭಿಯಾನದ ಅವಧಿಯನ್ನು ಅಗಸ್ಟ್ 10 ರವರೆಗೆ ವಿಸ್ತರಿಸಿರುವಂತೆ ಈಗಾಗಲೇ ಸರ್ಕಾರ ಮತ್ತು ನಿರ್ದೇಶನಾಲಯದಿಂದ ನೀಡಿರುವ ಮಾರ್ಗಸೂಚಿಗಳನ್ನು ಅನುಸರಿಸಿ ಇ-ಖಾತಾ ನೀಡಲು ಬಾಕಿಯಿರುವ ಸ್ವತ್ತುಗಳಿಗೆ ತ್ವರಿತವಾಗಿ ಸಾರ್ವಜನಿಕರು ಇ-ಖಾತಾ ಪಡೆದುಕೊಳ್ಳಬೇಕು ಎಂದು ಕೋರಿದ್ದಾರೆ.

## ಕಾಳಸಂತೆಯಲ್ಲಿ ಮಾರಾಟ ಮಾಡಲು ಅಕ್ರಮ ಅಕ್ಕಿ ಸಾಗಾಟ

• ಉದಯವಾಹಿನಿ ಚಿತ್ತಾಪುರ



☛ ಉದಯವಾಹಿನಿ ಚಿತ್ರ

**ವಾಹನ ಜಪ್ತಿ**

ಕಾಳಸಂತೆಯಲ್ಲಿ ಮಾರಾಟ ಮಾಡಲು ಪಡಿತರ ಅಕ್ಕಿಯನ್ನು ಅಕ್ರಮವಾಗಿ ವಾಹನದಲ್ಲಿ ಸಾಗಿಸುತ್ತಿರುವ ಖಚಿತ ಮಾಹಿತಿ ಮೇರೆಗೆ ದಾಳಿ ಮಾಡಿದ ಪೊಲೀಸರು ಅಕ್ಕಿ ಸಹಿತ ವಾಹನವನ್ನು ಜಪ್ತಿ ಮಾಡಿಕೊಂಡಿದ್ದಾರೆ. 50 ಕೆ.ಜಿ ತೂಕದ 49 ಪ್ಲಾಸ್ಟಿಕ್ ಚೀಲಗಳಲ್ಲಿದ್ದ 83,300 ರೂ. ಮೌಲ್ಯದ 24 ಕ್ವಿಂಟಾಲ್ 50ಕೆ.ಜಿ ಅಕ್ಕಿ ವಶಕ್ಕೆ ಪಡೆಯಲಾಗಿದೆ. ವಾಹನ ಜಪ್ತಿ ಮಾಡಿಕೊಂಡು ಹೈದರಾಬಾದ್ ಮೂಲದ ಶಾಣುನಾಯಕ ಲಕ್ಷ್ಮಣ ನಾಯಕ ಹಾಗೂ ಮಶಾಕ ಸಲೀಂ ದಂಡೋತಿ ಅವರನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಕುರಿತು ಚಿತ್ತಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಪೊಲೀಸ್ ಠಾಣೆಗೆ ಬೆದರಿಕೆ ಸಂದೇಶ

• ಉದಯವಾಹಿನಿ ಭಟ್ಕಳ

24 ಗಂಟೆಯೊಳಗೆ ಭಟ್ಕಳ ಪಟ್ಟಣ ಸ್ಫೋಟಿಸುತ್ತೇವೆ ಎಂಬ ಬೆದರಿಕೆ ಇ-ಮೇಲ್ ಸಂದೇಶ ಇಲ್ಲಿನ ಶಹರ ಪೊಲೀಸ್ ಠಾಣೆಗೆ ಬಂದ ಹಿನ್ನೆಲೆಯಲ್ಲಿ ಪೊಲೀಸರು ಪಟ್ಟಣ ಸೇರಿ ಮುರುಡೇಶ್ವರದಲ್ಲಿ ತಪಾಸಣೆ ನಡೆಸಿದರು.

ಕಣ್ಣನ್ ಗುರುಸ್ವಾಮಿ ಎಂಬ ವ್ಯಕ್ತಿಯ ಹೆಸರಿನ ಇ-ಮೇಲ್ ಖಾತೆಯಿಂದ ಸಂದೇಶ ಬಂದಿದೆ. ಹೆಚ್ಚು ಜನ ಸೇರುವ ಸ್ಥಳಗಳಲ್ಲಿ ಬಿಗಿಭದ್ರತೆ ಮಾಡಲಾಗಿತ್ತು. ಇ-ಮೇಲ್ ಕಳುಹಿಸಿದವರ ಪತ್ತೆಗೆ ಎರಡು ತಂಡ ರಚಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

## ಮೊರಾರ್ಜಿ ವಸತಿ ಶಾಲೆಗೆ ಜಿ.ಪಂ ಸಿಇಒ ಭೇಟಿ, ಪರಿಶೀಲನೆ



☛ ಉದಯವಾಹಿನಿ ಚಿತ್ರ

• ಉದಯವಾಹಿನಿ ಚಿತ್ರದುರ್ಗ

ವಸತಿ ಶಾಲಾ ಮಕ್ಕಳ ಸುರಕ್ಷತೆಯ ಬಗ್ಗೆ ಹೆಚ್ಚಿನ ನಿಗಾ ಹಾಗೂ ಮಕ್ಕಳ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಜೆ.ಸೋಮಶೇಖರ್ ಹೇಳಿದರು. ಹಿರಿಯೂರು ತಾಲ್ಲೂಕಿನ ಯಲ್ಲದಕೆರೆ ಗ್ರಾಮದ ಮೊರಾರ್ಜಿ ವಸತಿ ಶಾಲೆಗೆ ಭೇಟಿ ನೀಡಿ ಅಲ್ಲಿನ ವ್ಯವಸ್ಥೆಗಳ ಪರಿಶೀಲನೆ ನಡೆಸಿದರು. ವಸತಿ ಶಾಲೆಯಲ್ಲಿ ಸ್ವಚ್ಛತೆಯನ್ನು ಕಾಪಾಡಿ, ಮಕ್ಕಳ ಊಟೋಪಚಾರದ ಬಗ್ಗೆ ರುಚಿ ಮತ್ತು ಶುಚಿ ಎರಡು ಇರುವಂತೆ ನೋಡಿಕೊಳ್ಳಬೇಕು ಹಾಗೂ ಶುದ್ಧ ಕುಡಿಯುವ ನೀರು ದೊರೆಯುವಂತೆ ನೋಡಿಕೊಳ್ಳಿ, ಹಾಗೆಯೇ ಮಕ್ಕಳ ವಿದ್ಯಾಭ್ಯಾಸದ ಕಡೆ ಹೆಚ್ಚಿನ ಗಮನವಿರಲಿ ಎಂದು ವಸತಿ ಶಾಲೆಯ ಪ್ರಾಂಶುಪಾಲರು, ಶಿಕ್ಷಕರು ಮತ್ತು ನಿಲಯ ಪಾಲಕರಿಗೆ ಕಿವಿಮಾತು ಹೇಳಿದರು.

ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಯೋಗಾಲಯ ಮತ್ತು ಗಣಿತಾಲಯ ಕೊಠಡಿಗೆ ತೆರಳಿ, ಮಕ್ಕಳು ಈ ಪ್ರಯೋಗಾಲಯದಲ್ಲಿ ಮತ್ತು ಗಣಿತ ಕಲಿಕೆಯ ಬಗ್ಗೆ ವಿವರವಾಗಿ ಶಿಕ್ಷಕರರೊಂದಿಗೆ ಸಂವಾದ ನಡೆಸಿದರು. ನಂತರ ಮಕ್ಕಳು ಹಾಜರಾತಿ, ಇತರೇ ದಾಖಲೆಗಳನ್ನು ಪರಿಶೀಲಿಸಿದರು. ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಜಗದೀಶ್ ಹೆಬ್ಬಳ್ಳಿ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ದಿವಾಕರ್, ವಸತಿ ಶಾಲೆಯ ಪ್ರಾಂಶುಪಾಲರಾದ ಕೆ.ಬಿ ರಘುನಾಥ್, ಶ್ರೀನಿವಾಸ ಗೌಡ ಉಪಸ್ಥಿತರಿದ್ದರು.

## ಕೆಕೆಆರ್ ಡಿಬಿ ಯಿಂದ ಪಿಆರ್ಇ ಇಲಾಖೆಗೆ ಯಾವುದೇ ಅನುದಾನವಿಲ್ಲ

• ಉದಯವಾಹಿನಿ,ಚಿಂಚೋಳಿ



☛ ಉದಯವಾಹಿನಿ ಚಿತ್ರ

ತಾಲ್ಲೂಕಿನ ಪಿಆರ್ ಇ ಇಲಾಖೆಯಲ್ಲಿ 2025-26ನೇ ಸಾಲಿನಲ್ಲಿ ಪಿಂಕ್ ಅನುದಾನದಲ್ಲಿ ಒಟ್ಟಾರೆ 20ಕಾಮಗಾರಿಗಳಿಗೆ 83.50ಲಕ್ಷ ರೂ.ಯಲ್ಲಿ ಕ್ರೀಯಾಯೋಜನೆ ಮಾಡಿ ಅನುಮೋದನೆ ನೀಡಿ ಆಡಳಿತ್ಮಾಕ ಅನುಮೋದನೆ ಕಳುಹಿಸಲಾಗಿದೆ ಎಂದು ಜಿಲ್ಲಾ ಪಂಚಾಯತ್ ರಾಜ್ ಎಂಜಿನಿಯರಿಂಗ್ ವಿಭಾಗದ ಕಾರ್ಯಪಾಲಕ ಅಭಿಯಂತರ ಶ್ಯಾಮಸುಂದರ ಕಾಳೆಕರ್ ತಿಳಿಸಿದ್ದಾರೆ.

ತಾಲ್ಲೂಕಿನಲ್ಲಿ ಇಲಾಖೆಯ ಕಾಮಗಾರಿ ನಡೆಯುತ್ತಿರುವ ವಿವಿಧ ಹಳೆಯ ಕಾಮಗಾರಿಗಳು ಪರಿಶೀಲಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಿಆರ್ ಇ ಇಲಾಖೆಗೆ ಕೆಕೆಆರ್ ಡಿಬಿ ಯಿಂದ ಈವರ್ಷ ಯಾವುದೇ ಅನುದಾನ ಬಂದಿಲ್ಲ,ಮುಂದೆ ಅನುದಾನ ಬರುವ ಸಾಧ್ಯತೆಯಿದೆ ಆಗ ನೂತನ ಕಾಮಗಾರಿಗಳ ಕ್ರೀಯಾಯೋಜನೆ ಮಾಡಲಾಗುವುದು,ಈಗಾಗಲೇ 2022-23 ಮತ್ತು 2023-24ನೇ ಸಾಲಿನ ಹಳೆಯ ಕೆಕೆಆರ್ ಡಿಬಿ ಹಾಗೂ ತಾಪಂ.ಜಿಪಂ.ಅನುದಾನದಲ್ಲಿ ಅಭಿವೃದ್ಧಿ ಕಾಮಗಾರಿಗಳು ಮಾಡಲಾಗುತ್ತಿದೆ ಎಲ್ಲಾ ಕಾಮಗಾರಿಗಳು ಪರಿಶೀಲನೆ ನಡೆಸಲಾಗುತ್ತಿದೆ ಎಂದರು.

ಪಿ.ಆರ್.ಇ ಎಇಇ ಪ್ರವೀಣಕುಮಾರ ಮಾತನಾಡಿ ಪಿಂಕ್ ಅನುದಾನದ ಒಟ್ಟಾರೆ 83.50ಲಕ್ಷದಲ್ಲಿ,ಅಂಗನವಾಡಿಯ 11 ಕಟ್ಟಡಗಳಿಗೆ 1ಲಕ್ಷದಂತೆ 11ಲಕ್ಷದಲ್ಲಿ ಕಟ್ಟಡ, ಆಯುಷ್ಯ ಆರೋಗ್ಯ ಕೇಂದ್ರ ಕಟ್ಟಡಕ್ಕೆ 18ಲಕ್ಷ,ಕೃಷಿಗೆ 2.50ಲಕ್ಷ, ತೋಟಗಾರಿಕೆಗೆ 15ಲಕ್ಷ,ಪಶು ವೈದ್ಯಕೀಯ 6ಲಕ್ಷ,ಮೀನುಗಾರಿಕೆ 15ಲಕ್ಷ,ಕೃಷಿ ಉತ್ಪನ್ನಗಳ ಮಾರುಕಟ್ಟೆಗೆ 11ಲಕ್ಷ ರೂ. ಅನುದಾನ ನಿಗಧಿಪಡಿಸಲಾಗಿದೆ ಎಂದರು.

## ಮೂಲ ಸೌಲಭ್ಯ ಕಲ್ಪಿಸುವಂತೆ ಮನವಿ



☛ ಉದಯವಾಹಿನಿ ಚಿತ್ರ

• ಉದಯವಾಹಿನಿ ಕಲಬುರಗಿ

ಕಾಳಗಿ ತಾಲ್ಲೂಕಿನ ರಮ್ಮನಗೂಡ್ ಗ್ರಾಮ ಪಂಚಾಯತಿಯ ಎದುರುಗಡೆ ನೀರು ಹಾಗೂ ಇನ್ನಿತರ ಮೂಲಭೂತ ಸೌಕರ್ಯಗಳು ಕಲ್ಪಿಸಿವಂತೆ ಮಾದಿಗ ದಂಡೋರ ಹೋರಾಟ ಸಮಿತಿಯ ವತಿಯಿಂದ ಪ್ರತಿಭಟನೆ ನಡೆಸಿ ಮನವಿ ಪತ್ರ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಅಧ್ಯಕ್ಷರಾದ ಸುಂದರ ಡಿ. ಸಾಗರ್, ಉಪಾಧ್ಯಕ್ಷ ಹಣಮಂತ ಮೇಲಿನ ಕೆರಿ,ರೈತ ಸಂಘ ಅಧ್ಯಕ್ಷ ವೀರಣ್ಣ ಗಂಗಾಣಿ, ತಾಲ್ಲೂಕು ಅಧ್ಯಕ್ಷರಾದ ಕರಣ. ಜಿ ರಾಜಾಪೂರ, ಶ್ರೀಕಾಂತ ಸಜ್ಜನ್,ಅನಿಲ ಹೆಬ್ಬಾಳ, ಪೀರಪ್ಪ ಸಾಲಳ್ಳಿ,ಸುರೇಶ ಕೊಡ್ಲಿ, ಕಾಶಿನಾಥ ಮಾಸ್ಟರ, ಸಂತೋಷ ಸಾಸರಗಾಂವ, ಭೀಮ ರಟ್ಕಲ, ಪಿಂಟು ಕೊಡ್ಲಿ, ಆನಂದ ಯಲಕ್ಕಪಳ್ಳಿ,ಸುರೇಶ ಮೇಲಿನಕೇರಿ,ಚಂದ್ರಕಾಂತ ಭಾಸ್ಕರ, ಸುಭಾಷ ಮೊಘಾ, ರುಮ್ಮನಗೂಡ ಉಪಸ್ಥಿತರಿದ್ದರು.

## • ಮಾತೃ ವಂದನಾ ಯೋಜನೆಯಡಿ ಗರ್ಭಿಣಿ ಮತ್ತು ಬಾಣಂತಿಯರಿಗೆ ಆರ್ಥಿಕ ನೆರವು ನೀಡಲಾಗುತ್ತದೆ

# ಮಾತೃ ವಂದನಾ ಫಲಾನುಭವಿಗಳನ್ನು ಟಾರ್ಗೆಟ್ ಮಾಡಿದ ಸೈಬರ್ ವಂಚಕರು

• ಉದಯವಾಹಿನಿ ಮಂಗಳೂರು

ಮಂಗಳೂರಿನಲ್ಲಿ ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆ ಫಲಾನುಭವಿಗಳನ್ನು ಗುರಿಯಾಗಿಸಿಕೊಂಡ ಸೈಬರ್ ವಂಚಕರು ಪೋಷಣ್ ಟ್ರ್ಯಾಕರ್ ಮಾಹಿತಿಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ಅಂಗನವಾಡಿ ಕಾರ್ಯಕರ್ತೆಯರು ಆರೋಪಿಸಿದ್ದಾರೆ. ಈ ಹಗರಣದ ಬಗ್ಗೆ ಸಂತ್ರಸ್ತರು ಅಧಿಕಾರಿಗಳಿಗೆ ದೂರು ನೀಡಿದ್ದಾರೆ.

**ಮಾತೃ ವಂದನಾ ಯೋಜನೆಯಡಿ ಗರ್ಭಿಣಿ ಮತ್ತು ಬಾಣಂತಿಯರಿಗೆ ಆರ್ಥಿಕ ನೆರವು ನೀಡಲಾಗುತ್ತದೆ. ಎರಡನೇ ಮಗು ಹೆಣ್ಣು ಮಗುವಾಗಿದ್ದರೆ, ಜೀವಂತವಾಗಿರುವ ಮೊದಲ ಎರಡು ಮಕ್ಕಳಿಗೂ ಈ ಪ್ರಯೋಜನ ದೊರೆಯಲಿದೆ.**

### 8 ಫಲಾನುಭವಿಗಳಿಂದ ದೂರು ಸ್ವೀಕಾರ

ಆರ್ಥಿಕ ನೆರವು ಪಡೆಯಲು ಕೆಲವು ಪ್ರಕ್ರಿಯೆಯ ಶುಲ್ಕವನ್ನು ಪಾವತಿಸುವಂತೆ ಫಲಾನುಭವಿಗಳನ್ನು ವಂಚಕರು ಕೇಳುತ್ತಿದ್ದಾರೆ. ಅಲ್ಲದೇ ಅಂಗನವಾಡಿ ಕಾರ್ಯಕರ್ತೆಯರಿಗೂ ಸ್ವಲ್ಪ ಹಣ ನೀಡಬೇಕು ಎನ್ನುತ್ತಿದ್ದಾರೆ. ಈ ಹಗರಣದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಶಾಮೀಲಾಗಿರುವ ಬಗ್ಗೆ ಫಲಾನುಭವಿಗಳು ಅನುಮಾನ ವ್ಯಕ್ತಪಡಿಸುತ್ತಿದ್ದಾರೆ. ಈ ಬಗ್ಗೆ ಕನಿಷ್ಠ ಎಂಟು ಫಲಾನುಭವಿಗಳಿಂದ ದೂರುಗಳನ್ನು ಸ್ವೀಕರಿಸಿದ್ದೇವೆ ಎಂದು ಅವರು ಹೇಳಿದರು.

**ಮಾತೃ ವಂದನಾ ಯೋಜನೆಯ ಪ್ರಯೋಜನವೇನು?**

ಮಾತೃ ವಂದನಾ ಯೋಜನೆಯಡಿ ಗರ್ಭಿಣಿ ಮತ್ತು ಬಾಣಂತಿಯರಿಗೆ ಆರ್ಥಿಕ ನೆರವು ನೀಡಲಾಗುತ್ತದೆ. 2ನೇ ಮಗು ಹೆಣ್ಣು ಮಗುವಾಗಿದ್ದರೆ, ಜೀವಂತವಾಗಿರುವ



☛ ಉದಯವಾಹಿನಿ ಚಿತ್ರ

ಮೊದಲ ಎರಡು ಮಕ್ಕಳಿಗೂ ಈ ಪ್ರಯೋಜನ ದೊರೆಯಲಿದೆ. ಮೊದಲ ಮಗುವಿಗೆ 5,000 ರೂ.ಗಳನ್ನು ಎರಡು ಕಂತುಗಳಲ್ಲಿ ನೀಡಲಾಗುತ್ತದೆ ಮತ್ತು ಎರಡನೇ ಮಗುವಿಗೆ, 6,000 ರೂ.ಗಳನ್ನು ಜನನದ ನಂತರ ಒಂದು ಕಂತಿನಲ್ಲಿ ನೀಡಲಾಗುತ್ತದೆ.

**ಪೋಷಣ್ ಟ್ರ್ಯಾಕರ್ ಆ್ಯಪ್ ದುರ್ಬಳಕೆ:** ಮಾತೃ ವಂದನಾ ಯೋಜನೆಯಡಿ ಫಲಾನುಭವಿಗಳ ವೈಯಕ್ತಿಕ ವಿವರಗಳನ್ನು ಪೋಷಣ್ ಟ್ರ್ಯಾಕರ್ ಆ್ಯಪ್‌ನಲ್ಲಿ ಅಪ್‌ಲೋಡ್ ಮಾಡಲಾಗಿದ್ದು, ಇದರಲ್ಲಿ ದುರ್ಬಳಕೆ ಯಾಗುತ್ತಿರುವ ಬಗ್ಗೆ ಅನುಮಾನ ವ್ಯಕ್ತವಾಗಿದೆ ಎಂದು ಮಂಗಳೂರಿನ ಅಂಗನವಾಡಿ ಕಾರ್ಯಕರ್ತೆಯರ ಸಂಘದ ಅಧ್ಯಕ್ಷೆ ಆಶಾಲತಾ ಹೇಳಿದ್ದಾರೆ.

**ಪೋಷಣ್ ಟ್ರ್ಯಾಕರ್ ಮಾಹಿತಿ ದುರ್ಬಳಕೆ**

**ಹಿಂದಿಯಲ್ಲಿ ಮಾತನಾಡುವ ವಂಚಕರು:** ಗರ್ಭಿಣಿ ಮತ್ತು ಬಾಣಂತಿಯರಿಗೆ ಅಪರಿಚಿತ ಸಂಖ್ಯೆಗಳಿಂದ ಕರೆಗಳು ಬರುತ್ತಿದ್ದು, ಆಗಾಗ್ಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳನ್ನು ಯಾಮಾರಿಸುತ್ತಿದ್ದಾರೆ. ಕೇಂದ್ರ ಸರ್ಕಾರದ ಮಾತೃ ವಂದನಾ ಯೋಜನೆಯಡಿ ಫಲಾನುಭವಿಗಳಿಗೆ ನಿಜವಾಗಿರೂ, 6,000 ಬರುತ್ತದೆ. ಆದರೆ, 12,000 ರಿಂದ 20,000 ರೂ.ವರೆಗೆ ಪಡೆಯಬಹುದು ಎಂದು ವಂಚಕರು ಸುಳ್ಳು ಹೇಳುತ್ತಿದ್ದಾರೆ. ಹಿಂದಿಯಲ್ಲಿ ಮಾತನಾಡುವ ವಂಚಕರು, ಅಂಗನವಾಡಿ ಶಿಕ್ಷಕರ ಹೆಸರು ಸೇರಿದಂತೆ ಫಲಾನುಭವಿಗಳ ಸಂಪೂರ್ಣ ವಿವರಗಳನ್ನು ಹೊಂದಿದ್ದಾರೆ ಎಂದು ಅವರು ಹೇಳಿದರು.

ಈ ಹಗರಣದ ಬಗ್ಗೆ ಸ್ಥಳೀಯ ಪೊಲೀಸರು ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಗಮನಕ್ಕೆ ತಂದಿದ್ದೇವೆ ಎಂದು ಅವರು ತಿಳಿಸಿದರು.

### ಹಣ ಪಾವತಿಗೆ ಲಿಂಕ್ ಕಳುಹಿಸುವ ವಂಚಕರು

ತನಗೆ ಅಪರಿಚಿತ ಸಂಖ್ಯೆಯಿಂದ ಕರೆ ಬಂದಿದ್ದು, ಹಣ ಪಾವತಿ ಮಾಡಲು ಲಿಂಕ್ ಕಳುಹಿಸಲಾಗಿದೆ ಎಂದು ಫಲಾನುಭವಿಯೊಬ್ಬರು ಹೇಳಿದರು. ಕೇಳಿದಷ್ಟು ಹಣವನ್ನು ಪಾವತಿಸಿದಾಗ, ನನ್ನ ಬ್ಯಾಂಕ್ ಖಾತೆಯಲ್ಲಿ ಉಳಿದಿದ್ದ 44,000 ಕಳುವಾಗಿದೆ ಎಂದು ಸಂತ್ರಸ್ತೆ ಆರೋಪಿಸಿದ್ದಾರೆ. ಯೋಜನೆ ಲಾಭ ಪಡೆಯಲು ತಮ್ಮ ಬ್ಯಾಂಕ್ ಖಾತೆಗಳಲ್ಲಿ ಕನಿಷ್ಠ ಬ್ಯಾಲೆನ್ಸ್ ಕಾಯ್ದುಕೊಳ್ಳಬೇಕು ಎಂದು ವಂಚಕರು ದಾರಿ ತಪ್ಪಿಸುತ್ತಿದ್ದಾರೆ. ಇಂತಹ ವಂಚನೆಯ ಕರೆಗಳಿಗೆ ಸ್ಪಂದಿಸದಂತೆ ಹಾಗೂ ಅನುಮಾನಾಸ್ಪದ ಚಟುವಟಿಕೆಗಳ ಬಗ್ಗೆ ತಕ್ಷಣ ಮಾಹಿತಿ ನೀಡುವಂತೆ ಫಲಾನುಭವಿಗಳಿಗೆ ತಿಳಿವಳಿಕೆ ನೀಡುತ್ತಿದ್ದೇವೆ ಎಂದು ಆಶಾಲತಾ ಹೇಳಿದರು.

## ಆರ್‌ಕೆವಿವೈ ಸಲಹಾ ಸಮಿತಿ ಸದಸ್ಯರಾಗಿ ಡಾ. ಚಂದ್ರಶೇಖರ ನೇಮಕ

• ಉದಯವಾಹಿನಿ ಮುದ್ದೇಬಿಹಾಳ

ವಿಜಯಪುರ ಜಿಲ್ಲೆ ಮುದ್ದೇಬಿಹಾಳ ತಾಲ್ಲೂಕಿನ ಢವಳಗಿ ಗ್ರಾಮದವರಾದ ಅಂತರಾಷ್ಟ್ರೀಯ ಖ್ಯಾತಿಯ ಕೃಷಿ ಹಾಗೂ ಪರಿಸರ ವಿಜ್ಞಾನಿ ಡಾ। ಚಂದ್ರಶೇಖರ ಬಿರಾದಾರ ಅವರಿಗೆ ಮಹತ್ವದ ಗೌರವ ದೊರೆತಿದೆ.

ಕರ್ನಾಟಕ ರಾಜ್ಯ ಸರ್ಕಾರದ ಅರಣ್ಯ ಇಲಾಖೆಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅಭಿವೃದ್ಧಿ) ಸೀಮಾ ಗರಗ್ ಅವರ ಆದೇಶದಂತೆ, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (ಪಿಎಂ-ಆರ್‌ಕೆವಿವೈ) ಅಡಿಯಲ್ಲಿ ರಚಿಸಲಾದ ಸಲಹಾ ಸಮಿತಿಗೆ ಸದಸ್ಯರಾಗಿ ಅವರನ್ನು ನೇಮಕ ಮಾಡಲಾಗಿದೆ. ಅಗ್ರೋ ಕ್ಲೈಮ್ಯಾಟಿಕ್ ಝೋನ್‌ಗಳ ಅಧ್ಯಯನಕ್ಕಾಗಿ ಈ ಸಮಿತಿ ರಚನೆಗೊಂಡಿದ್ದು, ಕೃಷಿ ಅರಣ್ಯ ಯೋಜನೆಗಳ ವಸ್ತು ಸ್ಥಿತಿ ಅಧ್ಯಯನ ಹಾಗೂ ಮುಂದಿನ 10 ವರ್ಷಗಳ ಜಿಲ್ಲಾ ಮಟ್ಟದ ಅಭಿವೃದ್ಧಿ ಯೋಜನೆ ರೂಪಿಸುವ ಉದ್ದೇಶ ಹೊಂದಿದೆ. ಈ ಯೋಜನೆಯಡಿಯಲ್ಲಿ ಡೇಟಾಬೇಸ್ ನಿರ್ಮಾಣ, ಮಾಹಿತಿಯ ಸಂಗ್ರಹ ಹಾಗೂ ಜ್ಞಾನ ಸಹಾಯ ವ್ಯವಸ್ಥೆ



☛ ಉದಯವಾಹಿನಿ ಚಿತ್ರ

**ಅಂತರಾಷ್ಟ್ರೀಯ ಕೃಷಿ ಹಾಗೂ ಪರಿಸರ ವಿಜ್ಞಾನಿಗೆ ಗೌರವ**

ಕಲ್ಪಿಸುವುದು ಕೇಂದ್ರದ ಉದ್ದೇಶವಾಗಿದೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಅಧ್ಯಕ್ಷತೆಯ ಈ ಸಮಿತಿಗೆ, ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಾಮಾಜಿಕ ಅರಣ್ಯ ಮತ್ತು ಯೋಜನೆಗಳು) ಕಾರ್ಯದರ್ಶಿಗಳಾಗಿ ಕಾರ್ಯ ನಿರ್ವಹಿಸಲಿದ್ದಾರೆ. ಡಾ। ಚಂದ್ರಶೇಖರ ಬಿರಾದಾರರ ಜೊತೆಗೆ ಸದಸ್ಯರಾಗಿ ಐಸಿಎಆರ್-ಸಿಎಫ್‌ಐಆರ್ (ಝೂನ್ಸಿ, ಉತ್ತರಪ್ರದೇಶ) ನಿರ್ದೇಶಕ ಡಾ। ಆಯಂದಾರ್ ಅರುಣಾಚಲಂ, ಕೆಎಸ್‌ಆರ್‌ಎಸ್‌ಎಸ್‌ಸಿ (ಬೆಂಗಳೂರು) ನಿರ್ದೇಶಕ ಡಾ। ರಾಜೇಶ್ ಎನ್.ಎಲ್., ಟ್ರೀ ಲ್ಯಾಂಡ್ ಫೌಂಡೇಶನ್ (ಬೆಂಗಳೂರು) ಎಂಡಿ ಮತ್ತು ನಿವೃತ್ತ ಅಪರ ಅರಣ್ಯ ಸಂರಕ್ಷಣಾಧಿಕಾರಿ ಡಾ। ಕೆ.ಎನ್. ಮೂರ್ತಿ ಹಾಗೂ ಕಾಲೇಜ್ ಆಫ್ ಫಾರೆಸ್ಟ್ರಿ (ಪೊನ್ನಂಪೇಟೆ, ಕೊಡಗು) ಡೀನ್ ಡಾ। ಜಿ.ಎಂ. ದೇವಗಿರಿ ಅವರು ಸದಸ್ಯರಾಗಿದ್ದಾರೆ.

ಜಾಗತಿಕ ಹಸಿರು ಬೆಳವಣಿಗೆಯ (Global Green Growth Initiatives) ಬೆಂಗಳೂರು ಕೇಂದ್ರದ ಮುಖ್ಯಸ್ಥರಾಗಿರುವ ಡಾ। ಚಂದ್ರಶೇಖರರ ನೇಮಕದಿಂದ ವಿಜಯಪುರ ಜಿಲ್ಲೆಗೆ ಮತ್ತು ಮುದ್ದೇಬಿಹಾಳ ತಾಲ್ಲೂಕಿಗೆ ಹೆಮ್ಮೆಯ ವಿಷಯವಾಗಿದೆ

## ಬಸ್ ನಿಲ್ದಾಣದಲ್ಲಿ ರಾತ್ರಿ ವೇಳೆ ವಿದ್ಯುತ್ ದೀಪಗಳಿಲ್ಲದೆ ಕತ್ತಲು

• ಉದಯವಾಹಿನಿ,ಚಿಂಚೋಳಿ

ಪಟ್ಟಣದ ಬಸ್ ನಿಲ್ದಾಣದಲ್ಲಿ ರಾತ್ರಿ ವೇಳೆಯಲ್ಲಿ ವಿದ್ಯುತ್ ದೀಪಗಳಿಲ್ಲದೆ ಕತ್ತಲು ಪ್ರಯಾಣಿಕರು ಕತ್ತಲಲ್ಲಿ ಭಯಭೀತರಾಗಿ ಪ್ರಯಾಣಿಸುವ ಬಸ್ಸುಗಳು ಕಾಣದೆ ಪರದಾಟ ನಡೆಸುತ್ತಿದ್ದು ಬಸ್ ಘಟಕದ ವ್ಯವಸ್ಥಾಪಕರು ಶೀಘ್ರದಲ್ಲೇ ವಿದ್ಯುತ್‌ದೀಪಗಳು ಅಳವಡಿಸಿ ಪ್ರಯಾಣಿಕರಿಗೆ ಅನುಕೂಲ ಕಲ್ಪಿಸಿಕೊಡಬೇಕು ಎಂದು ತಾಲ್ಲೂಕಾ ಮುಸ್ಲಿಂ ಅಭಿವೃದ್ಧಿ ಸಮಿತಿ ನಗರಾಧ್ಯಕ್ಷ ಮತೀನ್ ಸೌದಾಗಾರ ಆಗ್ರಹಿಸಿದ್ದಾರೆ. ಪಟ್ಟಣದ ಬಸ್ ನಿಲ್ದಾಣದಲ್ಲಿ ವಿವಿಧ ಪಟ್ಟಣ ನಗರ ಗ್ರಾಮಗಳಿಗೆ ತೆರಳುವ ಪ್ರಯಾಣಿಕರು ಸಾಯಂಕಾಲದಿಂದ ರಾತ್ರಿವರೆಗೆ ತೆರಳುತ್ತಾರೆ ಆದರೆ ನಿಲ್ದಾಣದಲ್ಲಿ ವಿದ್ಯುತ್ ದ್ವೀಪಗಳಿಲ್ಲದೆ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ವಿವಿಧ ಶಾಲಾ ಕಾಲೇಜು ಮಕ್ಕಳು ರೈತರು, ಮಹಿಳೆಯರು ಪ್ರಯಾಣಿಸುತ್ತಾರೆ ಆದರೆ ನಿಲ್ದಾಣದಲ್ಲಿ ಕತ್ತಲು ಅವರಿಸುವುದರಿಂದ ಯಾವ ಬಸ್ಸು ಕಾಣುವುದಿಲ್ಲ ಒಬ್ಬರಿಗೊಬ್ಬರು ಯಾರು ಕಾಣುವುದಿಲ್ಲಾ ಇದರಿಂದ ಪ್ರಯಾಣಿಕರಿಗೆ ಬಹಳಷ್ಟು ತೊಂದರೆ ಆಗುತ್ತಿದೆ ಬಸ್




☛ ಉದಯವಾಹಿನಿ ಚಿತ್ರ

ಘಟಕದ ವ್ಯವಸ್ಥಾಪಕರು ಗಮನಹರಿಸಿ ಬಸ್ ನಿಲ್ದಾಣದಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಿ ಅನುಕೂಲ ಕಲ್ಪಿಸಿಕೊಡಬೇಕು ಇಲ್ಲಾದಿದ್ದರೆ ಶಾಲಾಮಕ್ಕಳ,ರೈತರ ಸಮಾಜಸೇವಕರ ಜೋತೆಗೂಡಿ ಪ್ರತಿಭಟನೆ ಮಾಡಲಾಗುವುದು ಎಂದು ಸುದ್ದಿಗಾರರೊಂದಿಗೆ ಮಾತನಾಡಿ ತಿಳಿಸಿದ್ದಾರೆ.

ಬಸ್ ಘಟಕದ ವ್ಯವಸ್ಥಾಪಕ ಸುರೇಶ ತೇಗಲತಿಪ್ಪಿ ಮಾತನಾಡಿ ಬಸ್ ನಿಲ್ದಾಣದಲ್ಲಿ ಕೇಬಲ್ ಸುಟ್ಟು ಹೋಗಿರುವುದರಿಂದ ದೀಪಗಳಿಲ್ಲದೆ ಕತ್ತಲು ಬಿದ್ದಿದೆ ಒಂದು ಲೈನ್ ಹೋಗಿದೆ ಒಂದುಯಿದೆ, ನಾಳೆಯವರೆಗೆ ಕೇಬಲ್ ದುರಸ್ತಿಗೊಳಿಸಿ ಪ್ರಯಾಣಿಕರಿಗೆ ಅನುಕೂಲ ಕಲ್ಪಿಸಿಕೊಡಲಾಗುವುದು ಎಂದರು.

## ಗುರುಪೂಜಾ ಉತ್ಸವ: ತ್ರೀಕರಣ ಪೂಜೆಯೊಂದಿಗೆ ಭಗವಾಧ್ವಜಕ್ಕೆ ನಮನ

• ಉದಯವಾಹಿನಿ ಮುದ್ದೇಬಿಹಾಳ

ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ವತಿಯಿಂದ ಪಟ್ಟಣದ ಶ್ರೀ ರಾಘವೇಂದ್ರ ಸ್ವಾಮಿಗಳ ಮಂಗಲ ಕಾರ್ಯಾಲಯದಲ್ಲಿ ಗುರುಪೂರ್ಣಿಮಾ ಅಂಗವಾಗಿ ವಿಜೃಂಭಣೆಯೊಂದಿಗೆ ಗುರುಪೂಜಾ ಉತ್ಸವವನ್ನು ಶನಿವಾರ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ವಿಜಯಪುರ ವಿಭಾಗದ ಸರಸಂಘಚಾಲಕ ಚಿದಂಬರ ಕರಮಕರ (ಬಾಳು ಭಕ್ತಿ) ಮುಖ್ಯ ವಕ್ತಾರರಾಗಿ ಭಾಗವಹಿಸಿ ಮಾತನಾಡಿದ ಅವರು ''ಭಾರತದ ಆತ್ಮ ಆಧ್ಯಾತ್ಮವಾಗಿದೆ. ಗುರು ಪರಂಪರೆ ಭಾರತೀಯ ಸಂಸ್ಕೃತಿಯ ಜೀವಾಳವಾಗಿದ್ದು, ನದಿಗಳಿಗೆ, ಪರ್ವತಗಳಿಗೆ ಪೂಜೆ ಸಲ್ಲಿಸುವ ಸಂಸ್ಕೃತಿಯೇ ಇದರ ಸಾಕ್ಷಿ. ರಾಮಕೃಷ್ಣ ಪರಮಹಂಸರ ಪ್ರೇರಣೆಯಿಂದ ವಿವೇಕಾನಂದರು, ಆದಿಶಂಕರರು ಚತುರ್ದಮ ಸ್ಥಾಪಿಸಿ ಸನಾತನ ಧರ್ಮ ಉಳಿಸಿದರು. ದೇಶ ಶೌರ್ಯ, ಜ್ಞಾನದಲ್ಲಿ ಪ್ರಾಚೀನ ಕಾಲದಿಂದಲೇ ಶ್ರೀಮಂತವಾಗಿತ್ತು.

**ವಿಜೃಂಭಣೆಯ ಗುರುಪೂಜಾ ಉತ್ಸವ**

ಅನೇಕ ವೀರರಾಜರು, ವೀರರಾಣಿಯರು ಧರ್ಮ ರಕ್ಷಣೆಗೆ ಬಲಿದಾನ ನೀಡಿದ್ದಾರೆ. ವಿಜಯನಗರ ಸಾಮ್ರಾಜ್ಯವು ಅದ್ದೂರಿಯಾಗಿ ಚಿನ್ನದ ಹೂಗೆಯಲ್ಲಿ ಆಡಿದ ವೈಭವವಂತಿತ್ತು.

**ಸಂಘದ ಸ್ಥಾಪನೆ ಕುರಿತು ಮಾತನಾಡಿ:** 1925ರಲ್ಲಿ ಸಂಘ ಸ್ಥಾಪನೆಯಾಗಿದ್ದು, ದೇಶದ ಧರ್ಮ, ಸಂಸ್ಕೃತಿ ಹಾಗೂ ಪರಂಪರೆಯ ಉಳಿವಿಗೆ ಇದು ಶಕ್ತಿಶಾಲಿ ಸಾಧನವಾಗಿದೆ. ದೇಶದ ವೈಭವ ಕಣ್ಣರಳಿಸಿದ ಬಾಹ್ಯ ಶಕ್ತಿಗಳು ಆಕ್ರಮಣ ನಡೆಸಿದ ಸಂದರ್ಭದಲ್ಲಿಯೇ ಸಂಘ ಜನ್ಮವಾಯಿತು. ಜಾತಿಮತ ಬೇಧ ತೊಡೆದು ದೇಶಭಕ್ತಿಯಿಂದ ಏಕತೆಯೆಡೆಗೆ ಹೋಗಬೇಕೆಂಬ ಸಂಕಲ್ಪದಿಂದ ಸಂಘ ಆರಂಭವಾಯಿತು. ಸಂಘದ ಪ್ರತಿ ಸದಸ್ಯನೂ ಸ್ವಪ್ರೇರಿತ ಸ್ವಯಂ ಸೇವಕರಾಗಿದ್ದಾರೆ.

**ಭಗವಾಧ್ವಜದ ಮಹತ್ವವನ್ನು ವಿವರಿಸಿ:** 1927ರ ಗುರುಪೂರ್ಣಿಮೆಯ ದಿನ, ಗುರು ಪರಂಪರೆಯ ಪ್ರತೀಕವಾಗಿ ಭಗವಾಧ್ವಜ ಬಳಕೆಗೆ ಬಂದಿದೆ. ಈ ಧ್ವಜಕ್ಕೆ ತನು, ಮನ, ಧನ ಸಮರ್ಪಿಸುವ ತ್ರೀಕರಣ ಪೂಜೆಯು ಈ ದಿನ ವಿಶೇಷ ಮಹತ್ವ ಹೊಂದಿದೆ. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಶುವೈದ್ಯಾಧಿಕಾರಿ ಡಾ. ಸುರೇಶ ಭಜಂತ್ರಿ ಮಾತನಾಡಿದರು



ಗುರು ಪೂಜಾ ಉತ್ಸವದಲ್ಲಿ ಸಮಾಜದ ಹಿರಿಯರು, ಸ್ವಯಂ ಸೇವಕರು, ರಾಷ್ಟ್ರಭಕ್ತರು ಬಿ.ಪಿ. ಕುಲಕರ್ಣಿ, ಪರಶುರಾಮ ಪವಾರ್, ಪ್ರಭು ಕಡಿ, ಮಲಕೇಂದ್ರಗೌಡ ಪಾಟೀಲ್, ವಿಕ್ರಮ ಓಸ್ವಾಲ್, ಜಗನ್ನಾಥ ಗೂಳಿ, ವಿಜಯಕುಮಾರ್ ಬಡಿಗೇರ, ಮುರಳಿಕೃಷ್ಣ ಬುಡ್ಡೂಡಗಿ, ಬಸಯ್ಯ ನಂದಿಕೇಶ್ವನಮಠ, ಸುಭಾಷ್ ಕುಲಕರ್ಣಿ, ಗಿರೀಶ ದೇಶಪಾಂಡೆ, ಮಹೇಂದ್ರ ನಿಂಗರಾಜಕರ್, ಅನಿಲ್ ತೇಲಂಗಿ, ನಾಗರಾಜ ಕವಡಿಮಟ್ಟಿ, ಜಗದೀಶ್ ಪಂಪಣ್ಣನವರ, ರಾಜೇಂದ್ರಗೌಡ ರಾಯಗೊಂಡ, ಕುಬೇರ ಮಿರಜಕರ, ವಿರೇಶ ಢವಳಗಿ, ರಾಜೇಂದ್ರ ಬೋಸಲೆ, ಬಾಬುಲಾಲ್ ಓಸ್ವಾಲ್ ಅಶೋಕ ರಾಠೋಡ, ಅಶೋಕ ಮಣಿ, ಬಸವರಾಜ ನಾಲತವಾಡ, ಲಕ್ಷ್ಮಣ ಬಿಜ್ಜೂರ, ಸಾಹಿಲ್ ನಾಗಠಾಣ, ಪ್ರಭುದೇವ ನಂದೆಪ್ಪನವರ , ನೀಲಕಂಠ ಪವಾರ ಮಾಣಿಕಚಂದ ದಂಡಾವತಿ, ನಾಗಭೂಷಣ ನಾವದಗಿ ಪ್ರಕಾಶ ಮಠ, ಬಸವರಾಜ ಬೆಳ್ಳಿಕಟ್ಟಿ, ಮಂಜುನಾಥ ಪಡದಾಳಿ ಸೋಮು ಸಾಲೋಡಗಿ ಸೇರಿದಂತೆ ಹಲವಾರು ಮಂದಿ ಉಪಸ್ಥಿತರಿದ್ದರು. ಭಗವಾಧ್ವಜಕ್ಕೆ ನಮನ ಅರ್ಪಿಸಿ ಧರ್ಮರಕ್ಷೆಯ ಸಂಕಲ್ಪದೊಂದಿಗೆ ಕಾರ್ಯಕ್ರಮ ಸಮಾರೋಪಗೊಂಡಿತು.

## ಸಿಂಧನೂರು ಟು ಬೆಂಗಳೂರು ರೈಲು ಸಂಚಾರಕ್ಕೆ ಕೇಂದ್ರ ಸಚಿವ. ವಿ ಸೋಮಣ್ಣ ಚಾಲನೆ

• ಉದಯವಾಹಿನಿ ಸಿಂಧನೂರು

ಅಭಿವೃದ್ಧಿ ವಿಚಾರದಲ್ಲಿ ಯಾರು ಸಹ ರಾಜಕೀಯ ಮಾಡುವುದು ಬೇಡ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅಭಿವೃದ್ಧಿಗೆ ಕಡೆಗೆ ಹೆಚ್ಚಿನ ರೀತಿಯಲ್ಲಿ ಆದ್ಯತೆ ನೀಡುವುದರ ಮೂಲಕ ಕಾರ್ಯನಿರ್ವಹಿಸಬೇಕು ಕೇಂದ್ರ ಸರ್ಕಾರದ ರೈಲ್ವೆ ಇಲಾಖೆ ರಾಜ್ಯ ಸಚಿವರಾದ ವಿ.ಸೋಮಣ್ಣ ತಿಳಿಸಿದರು.

ನಗರದ ರೈಲ್ವೆ ನಿಲ್ದಾಣದಲ್ಲಿ ನೂತನ ಸಿಂಧನೂರು,ಟು ಹುಬ್ಬಳ್ಳಿ, ಬೆಂಗಳೂರು ರೈಲು ಮಾರ್ಗ ಮೂಲಕ ಚಾಲನೆ ನೀಡಿ ನಂತರ ಮಾತನಾಡಿದ ಅವರು ಸಿಂಧನೂರು ರೈಲ್ವೆ ನಿಲ್ದಾಣದಲ್ಲಿ ಶೀಘ್ರವೇ ರಿಸರ್ವೇಶನ್ ಸಿಗುವಂತೆ ಕಾರ್ಯ ಆರಂಭಿಸಲಾಗುತ್ತದೆ ಹಾಗೂ ಪ್ರಯಾಣಿಕರಿಗೆ ವಿಶ್ರಾಂತಿ ಪಡೆಯಲು ಸಂಪೂರ್ಣ ವ್ಯವಸ್ಥೆ ಮಾಡಲಾಗುತ್ತದೆ.




☛ ಉದಯವಾಹಿನಿ ಚಿತ್ರ

**ಸಿಂಧನೂರು-ಹುಬ್ಬಳ್ಳಿ ರೈಲು ಸಂಚಾರಕ್ಕೆ ಈಗಾಗಲೇ ಜನರಿಂದ ಉತ್ತಮ ಸ್ಪಂದನೆ ದೊರೆತಿದ್ದು. ರೈಲು ಸಂಚಾರವನ್ನು ಹೆಚ್ಚಿಸುತ್ತದೆ ಹುಬ್ಬಳ್ಳಿ-ಬೆಂಗಳೂರು ಎಕ್ಸ್ ಪ್ರೆಸ್ ಸಂಚಾರವನ್ನು ಸುಗಮಗೊಳಿಸಲು ಬೆಂಗಳೂರು ರೈಲು ಸಂಚಾರ ಸಿಂಧನೂರಿನಿಂದ ಮಧ್ಯಾಹ್ನ 1.30ಕ್ಕೆ ಬಿಡುವುದು.ಸಂಜೆ 6 ಗಂಟೆಗೆ ಹುಬ್ಬಳ್ಳಿ ಗೆ ತಲುಪುತ್ತದೆ 07 ಗಂಟೆ ಸುಮಾರಿಗೆ ಬೆಂಗಳೂರಿಗೆ ಪ್ರಯಾಣ ಬೆಳೆಸುವವರು ರೈಲು ಬೆಳಗಿನ ಜಾವ 3.30ಕ್ಕೆ ಬೆಂಗಳೂರು ಕ್ರಮಬದ್ಧವಾಗಿ ಬೆಂಗಳೂರಿನಿಂದ ರಾತ್ರಿ 12.15ಕ್ಕೆ ಬೆಂಗಳೂರು ನಿಲ್ದಾಣದಿಂದ ಸಂಚಾರ ಪ್ರಾರಂಭಿಸಿ ಮಧ್ಯಾಹ್ನ 2:30ಕ್ಕೆ ಸಿಂಧನೂರು ಜಂಕ್ಷನ್ ತಲುಪಲಿದೆ ಈ ರೈಲು ಸಂಚಾರದಿಂದ ಈ ಭಾಗದ ವ್ಯಾಪಾರ ವಹಿವಾಟು ನಡೆಸುವ ಮೂಲಕ ಅಭಿವೃದ್ಧಿ ಹೊಂದಲು ಮತ್ತು ಕೈಗಾರಿಕೆ ಸ್ಥಾಪನೆಗೆ ಅನುಕೂಲವಾಗಿದೆ -ಸಚಿವ ವಿ ಸೋಮಣ್ಣ**

ಈಗಾಗಲೇ ಶೌಚಾಲಯ ನಿರ್ಮಿಸಲಾಗುತ್ತಿದೆ ಸಿಂಧನೂರು ರೈಲು ಸಂಚಾರದಿಂದ ಸಿಂಧನೂರು ಭತ್ತದ ಕಣಜವಾದ ವ್ಯಾಪಾರ ವಹಿವಾಟು ವೃದ್ಧಿಯಾಗಿ ಅಭಿವೃದ್ಧಿಯ ಹೆಸರಿನಲ್ಲಿ ಹೆಚ್ಚಿನ ವೇಗದಲ್ಲಿ ಚಲಿಸುವ ಸಿಂಧನೂರು ತಾಲ್ಲೂಕು ಎಂದರೆ ತಪ್ಪಾಗಲಾರದು ಹಿಂದೆ ರೈಲ್ವೆ ನಿಲ್ದಾಣವನ್ನು ಉದ್ಘಾಟಿಸಿ ರೈಲು ಸಂಚಾರಕ್ಕೆ ಚಾಲನೆ ನೀಡಲಾಗಿತ್ತು. ಈಗ ಮತ್ತೊಂದು ರೈಲು ಸೇವೆ ಭಾಗದ ಜನರಿಗೆ ಅನುಕೂಲಕ್ಕೆ ಹೆಚ್ಚಿನ ಅವಕಾಶಗಳನ್ನು ಒದಗಿಸಲಾಗುತ್ತಿದೆ.

ಕೊಪ್ಪಳ ಕ್ಷೇತ್ರದ ಸಂಸದರಾದ ರಾಜಶೇಖರ್ ಹಿಟ್ನಾಳ್ ಶಾಸಕ ಹಂಪನಗೌಡ ಬಾದರ್ಲಿ. ಮಾಜಿ ಸಚಿವ ವೆಂಕಟರಾವ್ ನಾಡಗೌಡ. ಮಾಜಿ ಸಂಸದರು ಕೆ. ವಿರೂಪಾಕ್ಷಪ್ಪ. ಎಂಎಲ್ಸಿ ಶರಣೇಗೌಡ ರಾಯಚೂರು ವಿಧಾನ ಸಭಾ ಕ್ಷೇತ್ರದ ಶಾಸಕ, ಶಿವರಾಜ ಪಾಟೀಲ ಎಂಎಲ್‌ಸಿ ಬಸನಗೌಡ ಬಾದರ್ಲಿ ಇದ್ದರು.

# ಒಂದು ಲಕ್ಷ ಆರು ಸಾವಿರ ಎಕರೆ ನೀರಾವರಿ ಪ್ರದೇಶ ಲೋಕಾರ್ಪಣೆ

## • 19 ಗ್ರಾಮದ ರೈತರಿಗೆ ಅನುಕೂಲವಾಗಲಿದ್ದು ಇದಕ್ಕಾಗಿ 1. 68 ಟಿ ಎಂ ಸಿ ನೀರನ್ನು ಬಳಸಿಕೊಳ್ಳಲಾಗುತ್ತಿದೆ

• ಉದಯವಾಹಿನಿ ಇಂಡಿ

ಇಂಡಿ ಮತ್ತು ಚಡಚಣ ಭಾಗದ ರೈತರಿಗೆ ವರದಾನ ವಾಗಲಿರುವ ಇಂಡಿ ಭಾಗದ 79 ಹಳ್ಳಿಗಳಿಗೆ ಮತ್ತು ಚಡಚಣ ಭಾಗದ 40 ಹಳ್ಳಿಗಳಿಗೆ ಕೃಷಿ ಮತ್ತು ಕುಡಿಯುವ ನೀರು ಮತ್ತು ಜನ ಜಾನುವಾರುಗಳಿಗೆ ಉಪಯೋಗವಾಗುವ 19 ಕೆರೆಗಳಿಂದ ಒಂದು ಲಕ್ಷ ಆರು ಸಾವಿರ ಎಕರೆ ಪ್ರದೇಶ ನೀರಾವರಿ ಒದಗಿಸುವ ಕಾರ್ಯಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಲೋಕಾರ್ಪಣೆ ಮಾಡಲಿದ್ದಾರೆ ಎಂದು ಶಾಸಕ ಯಶವಂತರಾಯಗೌಡ ಪಾಟೀಲರು ಹೇಳಿದರು.

**ಸಿಎಂ, ಡಿಸಿಂ ಲೋಕಾರ್ಪಣೆ**

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಮುಳವಾಡ ಏತ ನೀರಾವರಿಯ ಮೂರನೆಯ ಹಂತದ ಕಾಮಗಾರಿಯಲ್ಲಿ ತಿಡಗುಂದಿ ಎಕ್ಸಟೆನಷನ್ ಮೂಲಕ ಕಿ.ಮಿ 56 ರಿಂದ ಕಿ.ಮಿ 66 ರ ವರೆಗೆ 10 ಕಿ ಮಿ ಕಾಲುವೆ ಮಾಡಿ ಒಟ್ಟು 14 ಸಾವಿರ ಹೇ ಪ್ರದೇಶಕ್ಕೆ ನೀರು ಒದಗಿಸುತ್ತಿದೆ. 19 ಗ್ರಾಮದ ರೈತರಿಗೆ ಅನುಕೂಲವಾಗಲಿದ್ದು ಇದಕ್ಕಾ 1. 68 ಟಿ ಎಂಸಿ ನೀರನ್ನು ಬಳಸಿಕೊಳ್ಳಲಾಗುತ್ತಿದೆ ಎಂದರು.

ಇದರ ಉದ್ದ 8.55 ಕಿ ಮಿ ಮತ್ತು ಜಾಲ 31.05 ಕಿಮಿ ಇದೆ. ಈ ಕಾರ್ಯಾ ಸ್ಕಾಡಾ ಒಳಗೊಂಡ ಕಾರ್ಯವಾಗಿದೆ. ಬಸನಾಳ ಗ್ರಾಮದ 544 ಹೇ ಕೋಟ್ನಾಳ ಗ್ರಾಮದ 815 ಹೇ ನಿಂಬಾಳ ಗ್ರಾಮದ 935 ಹೇಕ್ಟರ್, ಅಥರ್ಗಾ ಗ್ರಾಮದ 1306 ಹೇ, ಹಂಜಗಿ ಗ್ರಾಮದ 2156 ಹೇ, ಸೇರಿದಂತೆ ಒಟ್ಟು 36760 ಎಕರೆ ಪ್ರದೇಶಕ್ಕೆ ನೀರಾವರಿ ಒದಗಿಸಲಿದೆ.

ಇದಕ್ಕೆ ಕೇವಲ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ವಿದ್ದಾಗ ಮತ್ತು ರಾಜ್ಯ ಸರಕಾರ ಮಾತ್ರ ಹಣ ಒದಗಿಸಿದೆ. ಇದರಲ್ಲಿ ಕೇಂದ್ರದ ಹಣ ಸಹಾಯ ವಿಲ್ಲ ಎಂದರು. ತಾಲ್ಲೂಕಿನ 19 ಕೆರೆಗಳಿಗೆ ರಾಜ್ಯ ಸರಕಾದಿಂದ 30 ಜೂನ 2013 ರಂದು 19 ಕೋಟಿ ಹಣ ಬಿಡುಗಡೆ, 12 ಅಕ್ಟೋಬರ್ 2023 ರಂದು 41 ಕೋಟಿ, 10 ಜನೇವರಿ 2024 ರಂದು 31 ಕೋಟಿ ಮತ್ತು 15 ಏಪ್ರೀಲ 2024 ರಂದು 57 ಕೋಟಿ ಹೀಗೆ ಒಟ್ಟು ರಾಜ್ಯ



☛ ಉದಯವಾಹಿನಿ ಚಿತ್ರ

ಸರಕಾರ ಮಾತ್ರ ಹಣ ನೀಡಿದ 232 ಕೋಟಿ ಹಣದಲ್ಲಿ ಕೆರೆಗಳಿಗೆ ನೀರು ತುಂಬುವ ಕಾರ್ಯ ಆಗಿದೆ ಎಂದರು. ಮೊದಲ ಹಂತದಲ್ಲಿ ಜಾಕವೆಲ ನಂತರ ಪಾಯಿಪಲಾಯಿನ ಮೂಲಕ ನೀರು ನಂತರ ಮೂರನೆಯ ಹಂತದಲ್ಲಿ ಎತ್ತರದ ಸಾವಳಸಂಗ ಪ್ರದೇಶದಿಂದ ನೀರು ವಿತರಣೆ ಹೀಗೆ ಮೂರು ಹಣತದ ಕಾಮಗಾರಿಗೆ 3100 ಕೋಟಿ ರೂ. ಬಿಡುಗಡೆ ಮಾಡಿದೆ ಎಂದರು.

ಅದರಂತೆ ಪಂದರಪೂರ ಗಾಣಗಾಪುರ ಜನರಿಗೆ ಅನುಕೂಲವಾಗಲು ಚಡಚಣ ಗಾಣಗಾಪುರ ರಸ್ತೆಗೆ 540 ಕೋಟಿ ರೂ, ಇಂಡಿಯ ಹತ್ತಿರದ ಪಡನೂರ ಗ್ರಾಮದಿಂದ ಸೋಲಾಪುರಕ್ಕೆ ಹೋಗಲು ಒಂದು ಬ್ರೀಡ್ಜ 48 ಕೋಟಿ ವೆಚ್ಚದಲ್ಲಿ ಅನುದಾನ ಕೇವಲ ರಾಜ್ಯ ಸರಕಾರ ನೀಡಿದೆ ಎಂದರು. ಇಂಡಿಗೆ ಜಿಟಿಟಿಸಿ ಕಾಲೇಜು 73 ಕೋಟಿ ವೆಚ್ಚದಲ್ಲಿ ಹೀಗೆ 4552 ಕೋಟಿ ರೂ ವೆಚ್ಚದ ಕಾಮಗಾರಿಗೆ ಲೋಕಾರ್ಪಣೆ ಮತ್ತು ಶಂಕುಸ್ಥಾಪನೆ ನಡೆಯಲಿದೆ ಎಂದರು. ನಾಗಠಾಣ ಶಾಸಕ ವಿಠ್ಠಲ ಕಟಕದೊಂಡ ಮಾತನಾಡಿದರು.

**ಇಂಡಿಯಲ್ಲಿ ನೂತನ ಮೇಗಾ ಮಾರುಕಟ್ಟೆಗೆ 30 ಕೋಟಿ ರೂ, ಜಲ ಜೀವನ ಮಿಷನಗೆ 80 ಕೋಟಿ, ಆಳುರ ಗ್ರಾಮದಲ್ಲಿ ಬಾಂದಾರ ಒಂದು ಕೋಟಿ, ಇಂಡಿಯಲ್ಲಿ ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ ಝಳಕಿಯಲ್ಲಿ ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ , ಝಳಕಿಯಲ್ಲಿ ಸರಕಾರಿ ಪಾಲಿಟೆಕ್ನಿಕ ಅಗರಖೇಡ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರ ವೈದ್ಯಾಧಿಕಾರಿಗಳಿಗೆ ವಸತಿ ಗ್ರಹಕ್ಕೆ ಒಂದು ಕೋಟಿ ಸೇರಿದಂತೆ ಹಲವಾರು ಕಾಮಗಾರಿ ಲೋಕಾರ್ಪಣೆ ಗೊಳ್ಳಲಿವೆ -ಯಶವಂತರಾಯಗೌಡ, ಶಾಸಕ**

**ಸಿಎಂ ಮನವೊಲಿಸಿ ಚಾಲನೆ**

**ಇನ್ನು ಶ್ರೀ ರೇವಣ ಸಿದ್ದೇಶ್ವರ ಏತ ನೀರಾವರಿ ಯೋಜನೆಗೆ ಕಾಂಗ್ರೆಸ್ ಸರಕಾರ ಮಾತ್ರ ಹಣ ನೀಡಿದೆ. ಮೊದಲ ಹಂತದ ಕಾಮಗಾರಿ ಬಿಜೆಪಿ ಸರಕಾರ ತರಾತುರಿಯಲ್ಲಿ ಕೇವಲ ಅನುಮೋದನೆ ನೀಡಿ ಮಾಜಿ ಮುಖ್ಯಮಂತ್ರಿಗಳು ಶಂಕು ಸ್ಥಾಪನೆ ಮಾಡಿದ್ದರು. ನಂತರ ನಾಮ ಮೋಹನ ವರದಿ ಕೇವಲ ಅನುಮೋದನೆ ನೀಡಿದ ಹಣ ನಿಡದೇ ಇರುವ ಯೋಜನೆಗಳನ್ನು ರದ್ದು ಮಾಡಿತ್ತು. ಕಾಂಗ್ರೆಸ್ ಸರಕಾರ ಬಂದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮನವೊಲಿಸಿ ಮತ್ತೆ ಚಾಲನೆ ನೀಡಿ ಮೊದಲ ಹಂತದ ಕಾಮಗಾರಿಗೆ 29 ಅಗಸ್ಟ 23 ರಲ್ಲಿ 50 ಕೋಟಿ, 21 ಫೇ 24 ರಲ್ಲಿ 90 ಕೋಟಿ, 14 ಏಪ್ರೀಲ 24 ರಂದು 50 ಕೋಟಿ 14 ಅಕ್ಟೋಬರ 24 ರಂದು 18 ಕೋಟಿ ಮತ್ತು 29 ಜ ಮತ್ತು 29 ಮಾರ್ಚ 2025 ರಂದು ಎರಡು ಮತ್ತು 12 ಕೋಟಿ ಹಣ ಬಿಡುಗಡೆ ರಾಜ್ಯ ಸರಕಾರ ಕಾಂಗ್ರೆಸ್ ಸರಕಾರ ಮಾಡಿದೆ ಎಂದರು.**

## ದಿನ ಭವಿಷ್ಯ

| ರಾಹುಕಾಲ | ಸಾಯಂಕಾಲ | 04:30 ರಿಂದ 06:00 |
|---|---|---|
| ಗುಳಿಕ ಕಾಲ | ಮಧ್ಯಾಹ್ನ | 03:00 ರಿಂದ 04:30 |
| ಯಮಗಂಡ ಕಾಲ | ಮಧ್ಯಾಹ್ನ | 12:00 ರಿಂದ 01:30 |

**ಮೇಷ** ವೈಯಕ್ತಿಕ ಸಮಸ್ಯೆಗಳು ಮಾನಸಿಕ ಸಂತೋಷವನ್ನು ಹಾಳು ಮಾಡಬಹುದು. ಆದರೆ ಒತ್ತಡವನ್ನು ನಿಭಾಯಿಸಲು ಆಸಕ್ತಿದಾಯಕ ವಾದದ್ದನ್ನೇನಾದರೂ ಓದುವ ಮೂಲಕ ಸ್ವಲ್ಪ ಮಾನಸಿಕ ವ್ಯಾಯಾಮ ಮಾಡಿಕೊಳ್ಳಿ.

**ವೃಷಭ** ನಿಮ್ಮ ಆರೋಗ್ಯದ ಬಗ್ಗೆ ಚಿಂತಿಸಲು ನಿರಾಕರಿಸಿ. ಇದು ಅನಾರೋಗ್ಯದ ವಿರುದ್ಧ ಪ್ರಬಲ ಚುಚ್ಚುಮದ್ದು. ನಿಮ್ಮ ಸರಿಯಾದ ಮನೋಭಾವ ತಪ್ಪು ಮನೋಭಾವವನ್ನು ಸೋಲಿಸುತ್ತದೆ.

**ಮಿಥುನ** ಇಂದು ಶಾಂತವಾಗಿ ಒತ್ತಡ ಮುಕ್ತವಾಗಿರಿ. ವಿದೇಶದಲ್ಲಿ ಮಲಗಿರುವ ನಿಮ್ಮ ಭೂಮಿಯನ್ನು ಉತ್ತಮ ಬೆಲೆಗೆ ಮಾರಾಟ ಮಾಡಬಹುದು, ಅದು ನಿಮಗೆ ಲಾಭದಾಯಕವಾಗಲಿದೆ.

**ಕರ್ಕಾಟಕ** ಅನಿರೀಕ್ಷಿತ ಬಿಲ್‌ಗಳು ಹಣಕಾಸಿನ ಹೊರೆಯನ್ನು ಹೆಚ್ಚಿಸುತ್ತದೆ. ಕೆಲವರಿಗೆ ಕುಟುಂಬದಲ್ಲಿ ಒಂದು ಹೊಸ ಆಗಮನ ಸಂಭ್ರಮಾಚರಣೆ ಮತ್ತು ಆನಂದದ ಕ್ಷಣಗಳನ್ನು ತೆರೆದಿಡುತ್ತದೆ.

**ಸಿಂಹ** ಧ್ಯಾನ ಪರಿಹಾರ ತರುತ್ತದೆ. ನೀವು ವಿದ್ಯಾರ್ಥಿಯಾಗಿದ್ದರೆ ಮತ್ತು ವಿದೇಶಕ್ಕೆ ಹೋಗಿ ಅಧ್ಯಯನ ಮಾಡಲು ಬಯಸುತ್ತಿದ್ದರೆ ಆರ್ಥಿಕ ಬಿಕ್ಕಟ್ಟು ಇಂದು ನಿಮ್ಮ ಹಣೆಯ ಮೇಲೆ ಸುಕ್ಕು ತರಬಹುದು.

**ಕನ್ಯಾ** ನೀವು ಮಾನಸಿಕವಾಗಿ ಮತ್ತು ದೈಹಿಕವಾಗಿ ಸ್ವಲ್ಪ ಸುಸ್ತನ್ನು ಅನುಭವಿಸಬಹುದು ನಿಮ್ಮ ಚೈತನ್ಯವನ್ನು ಹೆಚ್ಚಿಸಲು ಸ್ವಲ್ಪ ವಿಶ್ರಾಂತಿ ಮತ್ತು ಪೌಷ್ಟಿಕ ಆಹಾರ ಬಹಳ ಸಹಾಯ ಮಾಡುತ್ತದೆ.

**ತುಲಾ** ನಿಮ್ಮ ನಿರಾಶಾದಾಯಕ ನಡವಳಿಕೆಯಿಂದಾಗಿ ನೀವು ಯಾವುದೇ ಪ್ರಗತಿಯನ್ನು ಹೊಂದಲು ಸಾಧ್ಯವಾಗುವುದಿಲ್ಲ. ಚಿಂತೆ ನಿಮ್ಮ ಚಿಂತನಾ ಶಕ್ತಿ ಯನ್ನು ಕುಂಠಿತಗೊಳಿಸಿದೆಯೆಂದು ಕಂಡುಕೊಳ್ಳಲು ಇದು ಸಕಾಲ.

**ವೃಶ್ಚಿಕ** ಮಕ್ಕಳ ಅವರ ಸಾಧನೆಗಳಿಂದ ನೀವು ಹೆಮ್ಮೆ ಪಡುವಂತೆ ಮಾಡಬಹುದು. ಮೊಂಬತ್ತಿ ಬೆಳಕಿನಲ್ಲಿ ಪ್ರೀತಿಪಾತ್ರರ ಜೊತೆ ಆಹಾರ ಹಂಚಿಕೊಳ್ಳುವುದು. ನೀವು ಸಾಕಷ್ಟು ಆಸಕ್ತಿದಾಯಕ ಆಮಂತ್ರಣಗಳನ್ನು ಪಡೆಯುತ್ತೀರಿ.

**ಧನಸ್ಸು** ಸೃಜನಶೀಲ ಆಸಕ್ತಿಗಳು ನಿಮ್ಮನ್ನು ಶಾಂತವಾಗಿರಿಸುತ್ತವೆ. ದುಂದುಗಾರಿಕೆ ಮತ್ತು ಸಂಶಯಾಸ್ಪದವಾದ ಹಣಕಾಸು ಯೋಜನೆಗಳನ್ನು ತಪ್ಪಿಸಿ. ನಿಮ್ಮ ನಿರೀಕ್ಷೆಗಳಿಗೆ ತಕ್ಕಂತೆ ಬದುಕಲು ನಿಮ್ಮ ಮಗುವನ್ನು ಪ್ರೇರೇಪಿಸಿ.

**ಮಕರ** ಒಬ್ಬ ಸಂತನ ಆಶೀರ್ವಾದದಿಂದ ಮನಶ್ಶಾಂತಿ. ಬುದ್ಧಿವಂತಿಕೆಯಿಂದ ಹೂಡಿಕೆ ಮಾಡಿ. ನಿಮ್ಮ ಹತ್ತವರ ಆರೋಗ್ಯ ಚಿಂತ, ಆತಂಕಕ್ಕೆ ಕಾರಣವಾಗುತ್ತದೆ. ಪ್ರೀತಿಯ ಶಕ್ತಿ ನಿಮಗೆ ಪ್ರೀತಿಸಲು ಒಂದು ಕಾರಣ ನೀಡುತ್ತದೆ.

**ಕುಂಭ** ಮಕ್ಕಳ ಸಂಗದಲ್ಲಿ ಶಾಂತಿ ಪಡೆಯಿರಿ. ನಿಮ್ಮ ಸ್ವಂತದ್ದಷ್ಟೇ ಅಲ್ಲದೇ ಬೇರಯವರ ಮಕ್ಕಳ ಚಿಕಿತ್ಸಕ ಶಕ್ತಿಗಳೂ ನಿಮಗೆ ಸಾಂತ್ವನ ನೀಡಬಹುದು ಮತ್ತು ನಿಮ್ಮ ಆತಂಕವನ್ನು ಶಮನಗೊಳಿಸಬಹುದು.

**ಮೀನ** ಇಂದು ನೀವು ಈ ವಿಷಯವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು. ಭಾವನಾತ್ಮಕ ಅಪಾಯ ನಿಮ್ಮ ಪರವಾಗಿರುತ್ತದೆ. ಏಕಪಕ್ಷೀಯ ವ್ಯಾಮೋಹ ಇಂದು ಹಾನಿಕಾರಕವೆಂದು ಸಾಬೀತಾಗುತ್ತದೆ.

### ಮಹಾನಗರ ಪಾಲಿಕೆ ನೌಕರರಿಗೂ 7ನೇ ವೇತನ ಆಯೋಗದ ಸೌಲಭ್ಯಗಳನ್ನು ವಿಸ್ತರಿಸಬೇಕು ಎಂಬ ಬೇಡಿಕೆ

# ಪಾಲಿಕೆ ನೌಕರರ ಮುಷ್ಕರ: ನಾಗರಿಕ ಸೇವೆಗಳು ಸ್ಥಗಿತ

• ಉದಯವಾಹಿನಿ ಬಳ್ಳಾರಿ

ಮಹಾನಗರ ಪಾಲಿಕೆ ನೌಕರರಿಗೂ ಏಳನೇ ವೇತನ ಆಯೋಗದ ಸೌಲಭ್ಯಗಳನ್ನು ವಿಸ್ತರಿಸಬೇಕು ಎಂಬುದೂ ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ರಾಜ್ಯದ ವಿವಿಧ ಪಾಲಿಕೆಗಳ ನೌಕರರು ನಡೆಸುತ್ತಿರುವ ಮುಷ್ಕರ ನಾಲ್ಕನೇ ದಿನಕ್ಕೆ ಕಾಲಿಟ್ಟಿದೆ. ಮುಷ್ಕರವು ನಾಗರಿಕರ ಮೇಲೆ ನೇರ ಪರಿಣಾಮ ಬೀರಿದೆ.

ಬಳ್ಳಾರಿಯೂ ಸೇರಿದಂತೆ ರಾಜ್ಯದ 10 ಪಾಲಿಕೆಗಳ ಅಧಿಕಾರಿಗಳು, ಸಿಬ್ಬಂದಿ ಸಾಮೂಹಿಕವಾಗಿ ರಜೆ ಹಾಕಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದಾರೆ. ಹೀಗಾಗಿ ನಿತ್ಯದ ಕೆಲಸಗಳು ನಡೆಯದೇ ಹಲವು ಸಮಸ್ಯೆಗಳು ಸೃಷ್ಟಿಯಾಗಿವೆ. ಕಸ ವಿಲೇವಾರಿ ಸರಿಯಾಗಿ ಆಗುತ್ತಿಲ್ಲ. ನಾಲ್ಕು ದಿನಗಳಿಂದ ಕಸ ಮನೆಗಳಲ್ಲಿಯೇ ಉಳಿದಿದೆ. ಬೀದಿಯಲ್ಲಿ ಬಿದ್ದಿರುವ ಕಸ ಕೊಳೆತು ನಾರುತ್ತಿದೆ.

ನಗರಗಳ ಸ್ವಚ್ಛತಾ ಕಾರ್ಯ ಸರಿಯಾಗಿ ನಡೆಯುತ್ತಿಲ್ಲ. ಕಟ್ಟಿಕೊಂಡ ಒಳಚರಂಡಿ, ಮ್ಯಾನ್‌ಹೋಲ್‌ಗಳನ್ನು ಸರಿಪಡಿಸಲು ಪೌರ ಕಾರ್ಮಿಕರು ಬರುತ್ತಿಲ್ಲ. ನೀರು ಸರಬರಾಜಿನಲ್ಲಿಯೂ ವ್ಯತ್ಯಯವಾಗುತ್ತಿದೆ. ಪಾಲಿಕೆಗಳ ಆರೋಗ್ಯ ವಿಭಾಗವೂ ಸ್ಥಗಿತವಾಗಿರುವುದು ನಗರಗಳ ನೈರ್ಮಲೀಕರಣದಲ್ಲೂ ಸಮಸ್ಯೆ ಸೃಷ್ಟಿಯಾಗಿದೆ.

ಗುತ್ತಿಗೆ ಆಧಾರಿತ ಪೌರ ಕಾರ್ಮಿಕರಿಗೂ ಈ ಪ್ರತಿಭಟನೆಗೂ ಸಂಬಂಧವಿಲ್ಲ. ಅವರು ತಮ್ಮ ಕೆಲಸಗಳನ್ನು ಮಾಡಬೇಕಾಗಿತ್ತು. ಆದರೆ, ಇವರ ಮೇಲೆ ನಿಗಾ ವಹಿಸಬೇಕಿದ್ದ ಅಧಿಕಾರಿ, ಸಿಬ್ಬಂದಿ ವರ್ಗವೂ ಪ್ರತಿಭಟನೆಯಲ್ಲಿರುವುದರಿಂದ ಗುತ್ತಿಗೆ ಪೌರಕಾರ್ಮಿಕರು ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲ.

ಇನ್ನೊಂದು ಕಡೆ ಪ್ರತಿಭಟನೆ ಬಗ್ಗೆ ಮಾಹಿತಿ ಇಲ್ಲದ ನಗರ ನಾಗರಿಕರು ವಿವಿಧ ಕೆಲಸಗಳಿಗಾಗಿ ಪಾಲಿಕೆ ಕಚೇರಿಗಳ ಬಳಿ ಬಂದು ಖಾಲಿ ಕುರ್ಚಿಗಳನ್ನು ನೋಡಿ ಹಿಂದಿರುಗುತ್ತಿದ್ದಾರೆ.



ಉದಯವಾಹಿನಿ ಚಿತ್ರ

> ಪಾಲಿಕೆ ನೌಕರರ ಮುಷ್ಕರವು ನಗರದ ಜನಜೀವನ ಅಸ್ತವ್ಯಸ್ತಗೊಳಿಸಿದೆ. ಕಸ ವಿಲೇವಾರಿ ಚರಂಡಿ ಸಮಸ್ಯೆ ನೀರಿನ ಸರಬರಾಜಿಗೆ ಪರ್ಯಾಯ ಪರಿಹಾರಗಳೇ ಇಲ್ಲ. ಸರ್ಕಾರ ಕೂಡಲೇ ಗಮನಹರಿಸಲಿ
> -ಸಿರಿವೇಲು ಇಬ್ರಾಹಿಂ, ವಿರೋಧ ಪಕ್ಷದ ನಾಯಕ ಬಳ್ಳಾರಿ ಪಾಲಿಕೆ

**ರಾಜಕೀಯ ನಾಯಕರ ಬೆಂಬಲ**

ನಾಲ್ಕು ದಿನಗಳಿಂದ ಪ್ರತಿಭಟನೆಯಲ್ಲಿ ನಿರತರಾಗಿರುವ ಪಾಲಿಕೆ ಸಿಬ್ಬಂದಿಗೆ ಪಕ್ಷಾತೀತ ಬೆಂಬಲ ವ್ಯಕ್ತವಾಗಿದೆ. ಧರಣಿ ಸ್ಥಳಕ್ಕೆ ತೆರಳುತ್ತಿರುವ ಕಾರ್ಪೊರೇಟರ್‌ಗಳು ರಾಜಕೀಯ ಮುಖಂಡರು ಪ್ರತಿಭಟನೆಗಳಲ್ಲಿ ಭಾಗವಹಿಸುತ್ತಿದ್ದಾರೆ. 'ನಿತ್ಯ 10-12 ಗಂಟೆಗಳ ಕಾಲ ಬೀದಿಯಲ್ಲೇ ದುಡಿಯಬೇಕಾದ ಪಾಲಿಕೆ ಸಿಬ್ಬಂದಿಯನ್ನು ಸರ್ಕಾರ ತನ್ನವರೆಂದು ನೋಡುವುದೇ ಇಲ್ಲ.

**ಇ-ಖಾತೆ ಸ್ಥಗಿತ: ಪ್ರತಿಭಟನೆ**

ಆರಂಭವಾದಾಗಿನಿಂದಲೂ ಇ-ಖಾತಾ ಅಭಿಯಾನ ಸ್ಥಗಿತಗೊಂಡಿದೆ. ಹೀಗಾಗಿ ಸರ್ಕಾರಕ್ಕೆ ಸಂದಾಯವಾಗಬೇಕಿದ್ದ ಆದಾಯ ಸಂಗ್ರಹವಾಗುತ್ತಿಲ್ಲ. ಕರ -ತೆರಿಗೆ ಸಂಗ್ರಹವೂ ನಿಂತುಹೋಗಿದೆ. ಬಳ್ಳಾರಿ ಮಹಾನಗರ ಪಾಲಿಕೆಯೊಂದರಲ್ಲೇ ನಿತ್ಯ 400-450 ಇ-ಖಾತೆ ಪ್ರಕ್ರಿಯೆ ನಡೆಯುತ್ತಿತ್ತು. ಅದು ಸ್ಥಗಿತವಾಗಿದೆ ಎಂದು ಪಾಲಿಕೆ ಅಧಿಕಾರಿಗಳು ಹೇಳಿದ್ದಾರೆ. ಇ-ಖಾತೆ ಅಭಿಯಾನವು ಈಗಾಗಲೇ ವಿಸ್ತರಿತ ಅವಧಿಯಲ್ಲಿ ಸಾಗುತ್ತಿದೆ. ವಿವಿಧ ರೀತಿಯ ವಾಣಿಜ್ಯ ಪರವಾನಗಿಗಳ ಮಂಜೂರಾತಿ, ನವೀಕರಣ ಪ್ರಕ್ರಿಯೆಗಳೂ ನಡೆಯುತ್ತಿಲ್ಲ. ಕಟ್ಟಡ ನಿರ್ಮಾಣ ಅನುಮೋದನೆಗೆ ಕಾದಿದ್ದವರಿಗೆ ಅನಗತ್ಯ ವಿಳಂಬವಾಗಿದೆ.

**ಪರಿಶೀಲನೆ ಇಲ್ಲ**

ಪಾಲಿಕೆಗಳ ವ್ಯಾಪ್ತಿಯಲ್ಲಿ ಒಂದಿಲ್ಲೊಂದು ಕಾಮಗಾರಿಗಳು ನಡೆಯುತ್ತಲೇ ಇವೆ. ಪಾಲಿಕೆಗಳ ಎಂಜಿನಿಯರ್‌ಗಳೂ ಪ್ರತಿಭಟನೆಯಲ್ಲಿ ತೊಡಗಿರುವುದರಿಂದ ಕಾಮಗಾರಿಗಳ ಪರಿಶೀಲನೆಯೂ ನಡೆಯುತ್ತಿಲ್ಲ. ಇದು ಕಳಪೆ ಕಾಮಗಾರಿಗೆ ಕಾರಣವಾಗಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇದರ ಜತೆಗೆ ಆಡಳಿತಾತ್ಮಕ ಸಮಸ್ಯೆಗಳೂ ತಲೆದೋರಿವೆ. ಕಡತಗಳು ವಿಲೇವಾರಿ ಆಗದೇ ಉಳಿದುಕೊಂಡಿವೆ. ಇದು ಪಾಲಿಕೆಗಳಲ್ಲಿನ ಕೆಲಸ ಕಾರ್ಯಗಳು ವಿಳಂಬವಾಗಲು ಕಾರಣವಾಗಬಹುದು ಎಂದು ಹೇಳಲಾಗಿದೆ.

## ಮೃತರ ನಿವಾಸಕ್ಕೆ ಶಾಸಕ ಚನ್ನಾರೆಡ್ಡಿ ಭೇಟಿ ನೀಡಿ ಸಾಂತ್ವಾನ

• ಉದಯವಾಹಿನಿ ವಡಗೇರಾ

ಇತ್ತೀಚಿಗಷ್ಟೇ ಮೃತ್ತರಾದ ವಡಗೇರಾ ಪಟ್ಟಣದ ಸೈಯದ್ ಅಲಿ ಮುಲ್ಲಾ ನಿವಾಸಕ್ಕೆ ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರು ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವಾನ ಹೇಳಿದರು. ಹೊಲದ ದಾರಿ ವಿಷಯವಾಗಿ ತಂದೆ ಮಗ ಮೃತಪಟ್ಟಿದ್ದು ಅತ್ಯಂತ ನೋವಿನ ಸಂಗತಿಯಾಗಿದೆ ತಾವುಗಳು ಯಾವುದೇ ಕಾರಣಕ್ಕೂ ಎದೆಗುಂದದಿರಿ ಈ ಘಟನೆ ಕುರಿತು ಸೂಕ್ತ ತನಿಖೆ ನಡೆಸಿ ತಪ್ಪಿಸ್ತರ ವಿರುದ್ಧ ಕ್ರಮ ಕೈಗೊಳ್ಳುವಂತೆ ಈಗಾಗಲೇ ಪೊಲೀಸ್ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದ್ದೇನೆ ನಿಮ್ಮ ಕುಟುಂಬಕ್ಕೆ ಸರಕಾರದಿಂದ ಸಿಗುವ ಎಲ್ಲಾ ಸೌಲಭ್ಯಗಳನ್ನು ಒದಗಿಸಿ ಕೊಡುವ ಭರವಸೆ ನೀಡಿದರು. ಈ ಸಂದರ್ಭದಲ್ಲಿ ತಹಶೀಲ್ದಾರ್ ಮಂಗಳಾ ಎಂ, ತಾಲ್ಲೂಕು ಪಂಚಾಯಿತಿ ಇಓ ಮಲ್ಲಿಕಾರ್ಜುನ್ ಸಂಗ್ವಾರ್, ಸಬ್ ಇನ್ಸ್‌ಪೆಕ್ಟರ್ ವಿಷ್ಣು ನಾಯಕ, ಗ್ರಾಮೀಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಲಚಮರೆಡ್ಡಿ, ನಗರ ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ಮಲ್ಲಿಕಾರ್ಜುನ್ ಈಟೆ, ಕಾಂಗ್ರೆಸ್ ಪ್ರಚಾರ ಸಮಿತಿ ಜಿಲ್ಲಾಧ್ಯಕ್ಷ ಮರೆಪ್ಪ ಬಿಳಾರ, ಹಾಗೂ ಇನ್ನಿತರರು ಇದ್ದರು.



ಉದಯವಾಹಿನಿ ಚಿತ್ರ

## ಸಮಾಜದಲ್ಲಿ ಒಳ್ಳೆಯ ಕಾರ್ಯ ಪಾಲನೆ ಮಾಡಿದಾಗ ಮಾತ್ರ ಪುಣ್ಯಾ ಪ್ರಾಪ್ತಿ

• ಉದಯವಾಹಿನಿ ಕೆಂಭಾವಿ

ಬೌದ್ಧರು ಸಾಂಪ್ರದಾಯಿಕವಾಗಿ ಗೌತಮ ಬುದ್ಧನ ಪ್ರಥಮ ಧರ್ಮೋಪದೇಶದ ಅಂಗವಾಗಿ ಗುರು ಪೂರ್ಣಿಮೆ ಆಚರಿಸುತ್ತಾರೆ. ದಾನ, ಶೀಲ, ಭಾವನ, ಪುಣ್ಯದಿಂದ ಧಮ್ಮ ಸಾಧಿಸಲು ಸಾಧ್ಯ ಎಂದು ಯಸ ಬಂತೇಜಿ. ಹೇಳಿದರು. ಕೆಂಭಾವಿ ಪಟ್ಟಣದ ಆನಂದ ಬುದ್ಧ ವಿಹಾರದಲ್ಲಿ ಗುರು ಪೂರ್ಣಿಮೆ ಆಚರಣೆ ಮಾಡಿ ಮಾತನಾಡಿದ ಯಸ್ ಬಂತೇಜಿ ಇಂದು ಆಷಾಢ ಮಾಸದ ಹುಣ್ಣಿಮಯ ದಿನ. ಮಹಾರಾಜ ಸಿದ್ಧಾರ್ಥರು ತಾವು ಜ್ಞಾನೋದಯ ಪಡೆದು ಗೌತಮ ಬುದ್ಧರಾಗಿ ಮೊದಲ ಧರ್ಮೋಪದೇಶವನ್ನು ತನ್ನ ಐದು ಜನ ಶಿಷ್ಯರಿಗೆ ನೀಡಿದ ದಿನವೇ ಧಮ್ಮ ಚಕ್ಕ ಪವತ್ತನ ಸುತ್ತ ದಿನ ಸಮಾಜದಲ್ಲಿ ಒಳ್ಳೆಯ ಕಾರ್ಯ ಪಾಲನೆ ಮಾಡುವ ಮೂಲಕ ಪುಣ್ಯಾ ಪ್ರಾಪ್ತಿ ಮಾಡಿಕೊಳ್ಳಿ ಎಂದರು. ಪಂಚೇಂದ್ರೀಯಗಳನ್ನು ಹಿಡಿತದಲ್ಲಿ ಇಟ್ಟುಕೊಂಡು ಸಮಾಜಮುಖಿ ಚಿಂತನೆ ಮಾಡಬೇಕು ಎಂದರು. ನಂತರ ಧಮ್ಮ ಪರಿವರ್ತನಾ ಪಠಣ ಮಾಡಿದರು. ಯಸ ಬಂತೇಜಿ ಎಲ್ಲರಿಗೂ ಧಮ್ಮ ದಾನ ಮಾಡಿದರು. ಕಾರ್ಯಕ್ರಮದ ಆಯೋಜನೆಯನ್ನು ಉಪಾಸಕಿ ಶ್ರೀಮತಿ ನೀಲಮ್ಮ ಬಸವರಾಜ ಮಲ್ಲೆ ವಹಿಸಿದರು. ಈ ಸಂದರ್ಭದಲ್ಲಿ ಪುರಸಭೆ ಉಪಾಧ್ಯಕ್ಷರಾದ ಲಕ್ಷ್ಮೀಬಾಯಿ ಜಿ ಕಂಬಾರ್, ಆನಂದ ಬುದ್ಧ ವಿಹಾರನ ಅಧ್ಯಕ್ಷರಾದ ಲಾಲಪ್ಪ ಹೊಸಮನಿ ಹಾಗೂ ಸದಸ್ಯರು. ಮಹಿಳೆಯರು, ಮಕ್ಕಳು, ಪ್ರಮುಖ ಮುಖಂಡರು ಉಪಾಸಕ ಉಪಾಸಕಿಯರು ಇತರರು ಇದ್ದರು.



ಉದಯವಾಹಿನಿ ಚಿತ್ರ

**ಗುರು ಪೂರ್ಣಿಮೆ ಆಚರಣೆ**

## ರಾಜ್ಯ ಹೆದ್ದಾರಿಯಲ್ಲಿ ಹೊಂಡಗಳ ಕಾರುಬಾರು

• ಉದಯವಾಹಿನಿ ಹೊಸನಗರ

ಪಟ್ಟಣ ಹೊರವಲಯದ ಎಂ.ಗುಡ್ಡಕೊಪ್ಪ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹಾದು ಹೋಗಿರುವ ರಾಜ್ಯ ಹೆದ್ದಾರಿ ಸಂಪೂರ್ಣ ಹದಗೆಟ್ಟಿದೆ. ಬೇಸಿಗೆಯಲ್ಲಿ ಸೃಷ್ಟಿಯಾಗಿದ್ದ ಗುಂಡಿಗಳು ಭಾರೀ ಮಳೆಯಿಂದ ಇನ್ನಷ್ಟು ವಿಸ್ತರಿಸಿದ್ದು, ರಸ್ತೆ ತುಂಬಾ ಹೊಂಡಗಳೇ ರಾರಾಜಿಸುತ್ತಿವೆ.

ಹುಂಚಾ ರೋಡ್, ಕರಿನಗೊಳ್ಳಿ ಗ್ರಾಮದಲ್ಲಿನ ರಸ್ತೆ ಗುಂಡಿಗಳಲ್ಲಿ ನೀರು ತುಂಬಿ ವಾಹನ ಸಂಚಾರಕ್ಕೆ ತೊಂದರೆ ಆಗಿದೆ.ವಿದ್ಯಾರ್ಥಿಗಳು, ವೃದ್ಧರು, ಅನಾರೋಗ್ಯ ಪೀಡಿತರು ಈ ರಸ್ತೆಗುಂಟ ಸಂಚರಿಸುವುದೇ ಕಷ್ಟವಾಗಿದೆ. ಕಳೆದ ಮಳೆಗಾಲದಲ್ಲೂ ಇದೇ ಸ್ಥಿತಿ ಇತ್ತು. ಲೋಕೋಪಯೋಗಿ ಇಲಾಖೆಯು ಮಣ್ಣು ತುಂಬಿಸಿ ಗುಂಡಿಗಳನ್ನು ಮುಚ್ಚುವ ಮೂಲಕ ತಾತ್ಕಾಲಿಕ ಪರಿಹಾರ ನೀಡಿತ್ತು.

ಈ ಮಳೆಗಾಲದಲ್ಲಿ ರಸ್ತೆಯೆಲ್ಲಾ ಮತ್ತೆ ಗುಂಡಿಗಳು ಬಿದ್ದಿದ್ದು ಬಲಿಗಾಗಿ ಕಾದಿವೆ. ರಸ್ತೆಯ ಅಂಚು ಕೂಡಾ ಕೊಚ್ಚಿಹೋಗಿದ್ದು, ವಾಹನಗಳು ಇತರ ವಾಹನಗಳಿಗೆ 'ಸೈಡ್' ಕೊಡಲು ಹೋಗಿ ಪಲ್ಟಿಯಾದ ಪ್ರಕರಣ ಇವೆ. ರಸ್ತೆ ಬದಿಯಲ್ಲಿ ಸಮರ್ಪಕ ಚರಂಡಿ ವ್ಯವಸ್ಥೆ ಇಲ್ಲದ ಕಾರಣ, ಮಳೆ ನೀರು ರಸ್ತೆ ಮೇಲೆ ಹರಿಯುತ್ತಿದೆ. ಇದರಿಂದ ಡಾಂಬರ್ ಕಿತ್ತು ಹೋಗಿ, ರಸ್ತೆಯ ಅಸ್ತಿತ್ವವೇ ಇಲ್ಲದಂತಾಗಿದೆ ಎಂದು ಗ್ರಾಮಸ್ಥರು ದೂರುತ್ತಾರೆ.



ಉದಯವಾಹಿನಿ ಚಿತ್ರ

**ದುರಸ್ತಿ ಮಾಡುವ ನಾಟಕ**

ಮಳೆಗಾಲದಲ್ಲಿ ರಸ್ತೆ ಹಾಳಾಗುವುದು ಇದೇ ಮೊದಲಲ್ಲ. ಕೆಲ ವರ್ಷಗಳಿಂದ ರಸ್ತೆ ಹಾಳಾಗುತ್ತಿದ್ದರೂ ಯಾವ ಅಧಿಕಾರಿಯೂ ಇತ್ತ ಗಮನ ನೀಡುತ್ತಿಲ್ಲ. ಮಳೆ ಬಿಟ್ಟಾಗ ಒಂದು ಹೆಡಿಗೆ ಮಣ್ಣು ಹಾಕಿ ದುರಸ್ತಿ ಮಾಡುವ ನಾಟಕ ನಡೆಯುತ್ತಿದೆ. ಆದರೆ, ಶಾಶ್ವತವಾಗಿ ದುರಸ್ತಿ ಮಾಡುವ ಕಾಮಗಾರಿ ನಡೆಸಿಲ್ಲ. ಇದೇ ಮಾರ್ಗದಲ್ಲಿ ಶಿವಮೊಗ್ಗಕ್ಕೆ ಸರ್ಕಾರಿ ವಾಹನಗಳಲ್ಲಿ ಓಡಾಡುವ ಅಧಿಕಾರಿಗಳು ಇನ್ನಾದರೂ ಕಣ್ಣುಬಿಟ್ಟು ನೋಡಬೇಕು ಎಂಬುದು ನಾಗರಿಕರ ಆಗ್ರಹವಾಗಿದೆ.

## ರೈಲ್ವೇ ಸೇತುವೆಗಳ ನಿರ್ಮಾಣಕ್ಕೆ ಮನವಿ

• ಉದಯವಾಹಿನಿ ಬಳ್ಳಾರಿ

ಈ ಮಹಾನಗರ ವ್ಯಾಪ್ತಿಯಲ್ಲಿ ವಾಹನಗಳ ಸಂಚಾರ ಸುಗಮಗೊಳಿಸುವ ನಿಟ್ಟಿನಲ್ಲಿ ರೈಲ್ವೆ ಮೇಲ ಸೇತುವೆಗಳು ಹಾಗೂ ಕೆಳ ಸೇತುವೆಗಳ ನಿರ್ಮಾಣದ ಕುರಿತು ರೈಲ್ವೇ ಕ್ರಿಯಾ ಸಮಿತಿಯಿಂದ ನಿನ್ನೆ ನಗರದ ರೈಲ್ವೇ ನಿಲ್ದಾಣಕ್ಕೆ ಆಗಮಿಸಿದ್ದ ರೈಲ್ವೇ ಸಚಿವ ವಿ.ಸೋಮಣ್ಣ ಅವರಿಗೆ ಮನವಿ ಸಲ್ಲಿಸಲಾಗಿದೆ. ನಗರದ ಮೋತಿ ಟಾಕೀಸ್ ಬಳಿಯ ರೈಲ್ವೇ ಮೇಲು ಸೇತುವೆ ಕಿರಿದಾಗಿದ್ದು ವಾಹನಗಳ ಸಂಚಾರದ ಒತ್ತಡದಿಂದ ಪದೇ ಪದೇ ಜಾಮ್ ಅಗುತ್ತಿದೆ. ಇದನ್ನು ಅಗಲ ಮಾಡಬೇಕು. ದುರ್ಗಮ್ಮ ದೇವಸ್ಥಾನ ಹತ್ತಿರ ಈಗಾಗಲೇ ಬುಡಾ ದಿಂದ ಹಣ ನೀಡಿರುವ ರೈಲ್ವೇ ಅಂಡರ್ ಬ್ರಿಡ್ಜ್ ಕಾಮಗಾರಿ ಆರಂಭಿಸಬೇಕು.

ಅದೇ ರೀತಿ ರೇಡಿಯೋ ಪಾರ್ಕ್ ಹತ್ತಿರ ಈವರ್ ಬ್ರಿಡ್ಜ್, ಗುಗ್ಗರಹಟ್ಟಿ ಹತ್ತಿರ, ಬಳ್ಳಾರಿ ಬೈಪಾಸ್ ರಸ್ತೆ ಹತ್ತಿರ, ದರೋಜಿ ನಿಲ್ದಾಣ ಹತ್ತಿರ ಸೇತುವೆಗಳ ನಿರ್ಮಾಣ ಆಗಬೇಕೆಂದು ರೈಲ್ವೇ ಕ್ರಿಯಾ ಸಮಿತಿಯ ಅಧ್ಯಕ್ಷ ಕೆ.ಎಂ. ಮಹೇಶ್ವರಸ್ವಾಮಿ ಮೊದಲಾದವರು ಮನವಿ ಸಲ್ಲಿಸಿದರು.

## ಶಸ್ತ್ರ ಚಿಕಿತ್ಸೆ ಇಲ್ಲದೆ ಐದು ವರ್ಷದ ಮಗುವಿನ ಗಂಟಲಿನಲ್ಲಿದ್ದ ಪ್ಲಾಸ್ಟಿಕ್ ಕ್ಲಿಪ್ ಹೊರ ತೆಗೆದ ವೈದ್ಯರು

• ಉದಯವಾಹಿನಿ ಯಾದಗಿರಿ

5 ವರ್ಷದ ಪುಟ್ಟ ಬಾಲಕನ ಗಂಟಲಿನಲ್ಲಿ ಸಿಕ್ಕಿಹಾಕಿಕೊಂಡಿದ್ದ ಸೀರೆಗೆ ಹಚ್ಚುವ ಪಿನ್ನಿನ ಪ್ಲಾಸ್ಟಿಕ್ ಕ್ಲಿಪ್ ವಸ್ತುವೊಂದನ್ನು ನಗರದ ನಾಯ್ಕೋಡಿ ಆಸ್ಪತ್ರೆಯ ಕಿವಿ ಮೂಗು ಗಂಟಲು ರೋಗ ತಜ್ಞ ಡಾ. ರಾಹುಲ್. ಎಸ್ ನಾಯ್ಕೋಡಿ ನೇತೃತ್ವದ ವೈದ್ಯರ ತಂಡ ಶಸ್ತ್ರ ಚಿಕಿತ್ಸೆ ಇಲ್ಲದೆ ಸ್ಕೋಪಿ ಮೂಲಕ ಪಿನ್ನಿನ ಪ್ಲಾಸ್ಟಿಕ್ ಕ್ಲಿಪ್ ಅನ್ನು ಯಶಸ್ವಿಯಾಗಿ ಹೊರ ತೆಗೆದು ಮಗುವಿನ ಪ್ರಾಣ ರಕ್ಷಿಸಿದ್ದಾರೆ.

ಈ ಕುರಿತ ಡಾ. ರಾಹುಲ್ .ಎಸ್ ನಾಯ್ಕೋಡಿ ಮಾತನಾಡಿ ನಮ್ಮ ಆಸ್ಪತ್ರೆಗೆ ತಾಲ್ಲೂಕಿನ ಗಡ್ಡೆಸೂಗುರ ಗ್ರಾಮದ ಸಾಹೇಬರೆಡ್ಡಿ ಎಂಬುವರ ಐದು ವರ್ಷದ ಪುಟ್ಟ ಬಾಲಕ ಆಕಾಶ್ ಮನೆಯಲ್ಲಿ ಆಟವಾಡುವ ಸಮಯದಲ್ಲಿ ಪಿನ್ನಿನ ಪ್ಲಾಸ್ಟಿಕ್ ಕ್ಲಿಪ್ ನುಂಗಿದ್ದಾನೆ ಎಂದು ದಾಖಲಿಸಿದ್ದರು ನಾವು ಕೆಲವು ಪರೀಕ್ಷೆಗಳನ್ನು ಮಾಡುವ ಮೂಲಕ ಅದನ್ನು ಪತ್ತೆ ಹಚ್ಚಿದೆವು ಅದು ಗಂಟಲಿನಲ್ಲಿ ಸಿಕ್ಕಿಹಾಕಿಕೊಂಡ ಕಾರಣ ಮಗುವಿನ ಉಸಿರಾಟದ ತೊಂದರೆ ಉಂಟಾಗಿ ಆರೋಗ್ಯದಲ್ಲಿ ಏರುಪೇರಾಗಿತ್ತು ತಕ್ಷಣ ನಮ್ಮ ವೈದ್ಯರ ತಂಡ ಸಕಾಲದಲ್ಲಿ ಚಿಕಿತ್ಸೆ ನೀಡುವ ಮೂಲಕ ಮಗುವನ್ನು ಪ್ರಾಣಪಾಯದಿಂದ ಪಾರು ಮಾಡಿದ್ದೇವೆ ಪಾಲಕರು ಚಿಕ್ಕ ಮಕ್ಕಳ ಕೈಗೆ ಮತ್ತು ಅವರ ಮುಂದೆ ಸಣ್ಣಪುಟ್ಟ ವಸ್ತುಗಳು ನಾಣ್ಯಗಳನ್ನು ಕೊಡಬಾರದು ಮಕ್ಕಳ ಗಂಟಲಿನಲ್ಲಿ ಪ್ಲಾಸ್ಟಿಕ್ ಅಥವಾ ನಾಣ್ಯದಂತ ವಸ್ತುಗಳು ಸಿಕ್ಕಿಹಾಕಿಕೊಂಡಾಗ ಮಗುವಿನ ಪ್ರಾಣ ಹಾನಿ ಸಂಭವ ಹೆಚ್ಚು ಇರುತ್ತದೆ ಆದ್ದರಿಂದ ಪಾಲಕರು ಜಾಗೃತಿ ವಯಸುವಂತೆ ಹೇಳಿದರು.

ಈ ಒಂದು ಯಶಸ್ವಿ ಸ್ಕೋಪಿ ಚಿಕಿತ್ಸೆ ಕಾರ್ಯದಲ್ಲಿ ಡಾ. ರಾಹುಲ್ ಎಸ್.ನಾಯ್ಕೋಡಿ, ಅರವಳಿಕೆ ತಜ್ಞ ಡಾ. ಚೇತನ್ ಜೆವುರ, ಡಾ.ರಾಜೇಶ್ವರಿ ಆರ್. ನಾಯ್ಕೋಡಿ ಹಾಗೂ ಆಸ್ಪತ್ರೆಯ ಸಿಬ್ಬಂದಿ ವರ್ಗದವರು ಇದ್ದರು.



ಉದಯವಾಹಿನಿ ಚಿತ್ರ

## ದೋಣಿ ಮಗುಚಿ ಮೀನುಗಾರ ಸಾವು

• ಉದಯವಾಹಿನಿ ಮಲ್ಪೆ

ಮಲ್ಪೆ ಬಂದರಿನಿಂದ ಮೀನುಗಾರಿಕೆಗೆ ತೆರಳಿದ್ದ ಮೀನುಗಾರರೊಬ್ಬರು ಸಮುದ್ರದಲ್ಲಿ ಮುಳುಗಿ ಮೃತಪಟ್ಟ ಘಟನೆ ನಡೆದಿದೆ. ನೀಲಾಧರ ತಿಂಗಳಾಯ (51) ಮೃತರು.ಶುಕ್ರವಾರ ಬೆಳಗ್ಗೆ ಕೃಷ್ಣ ಜಿ. ಕೊಟ್ಯಾನ್ ಎಂಬವರ ಮಾಲಿಕತ್ವದ ದೋಣಿಯಲ್ಲಿ ಒಟ್ಟು 24 ಜನ ಮೀನುಗಾರರು ಸಮುದ್ರಕ್ಕೆ ತೆರಳಿದ್ದರು.

ಸಮುದ್ರದಲ್ಲಿ ಬಲೆ ಹಾಕಲು ತಯಾರಿ ಮಾಡುತ್ತಿರುವಾಗ ಬಂದ ಸುಳಿಗಾಳಿಗೆ ದೋಣಿ ಸಿಕ್ಕಿಹಾಕಿಕೊಂಡು ಮಗುಚಿ ಬಿತ್ತು. ಇತರ ಮೀನುಗಾರರು ಈಜಿಕೊಂಡು ದಡಕ್ಕೆ ಸೇರಿದರೂ, ದುರಾದೃಷ್ಟವಶಾತ್ ನೀಲಾಧರ ಅವರು ನೀರಿನಲ್ಲಿದ್ದ ಮೀನಿನ ಬಲೆಗೆ ಸಿಕ್ಕಿ ಹಾಕಿಕೊಂಡರು. ಇದನ್ನು ತಕ್ಷಣ ಉಳಿದ ಮೀನುಗಾರರು ಗಮನಸಿ ಅವರನ್ನು ಬಲೆಯಿಂದ ಬಿಡಿಸಿ ದಡಕ್ಕೆ ತಂದಾಗ ಅವರು ತೀವ್ರ ಅಸ್ವಸ್ಥಗೊಂಡಿದ್ದರು. ಅವರನ್ನು ಉಡುಪಿ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಅವರು ಅದಾಗಲೇ ಮೃತಪಟ್ಟಿದ್ದರು. ಮಲ್ಪೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೀನುಗಾರನ ಮನೆಗೆ ಶಾಸಕ ಯಶ್ಪಾಲ್ ಭೇಟಿ, ಸಾಂತ್ವಾನ, ಮಲ್ಪೆ ಬಂದರಿನಿಂದ ನಾಡದೋಣಿ ಮೀನುಗಾರಿಕೆಗೆ ತೆರಳಿದ್ದ ಸಂದರ್ಭದಲ್ಲಿ ದೋಣಿ ಮಗುಚಿ ಮೃತಪಟ್ಟ ಉದ್ಯಾವರ ಗ್ರಾಮದ ಪಿತ್ರೋಡಿಯ ಮೀನುಗಾರ ನೀಲಾಧರ ಜಿ. ತಿಂಗಳಾಯ ಅವರ ಮನೆಗೆ ಉಡುಪಿ ಶಾಸಕ ಯಶ್ಪಾಲ್ ಸುವರ್ಣ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವಾನ ಹೇಳಿದರು.

## ಹಾಳಾದ ರಸ್ತೆ: ಸರಿಪಡಿಸಲು ಆಗ್ರಹ

• ಉದಯವಾಹಿನಿ ಚನ್ನಮ್ಮನ ಕಿತ್ತೂರು

ರಾಷ್ಟ್ರೀಯ ಹೆದ್ದಾರಿ 4ಕ್ಕೆ ಹೊಂದಿಕೊಂಡಿರುವ ಆಡಳಿತ ಸೌಧ ಪಕ್ಕದಲ್ಲಿಯೇ ಅಗ್ನಿಶಾಮಕ ಠಾಣೆ ಕಛೇರಿ ಉದ್ಘಾಟನೆಗೊಂಡಿದ್ದು ಈ ಕಛೇರಿಗೆ ಸಂಪರ್ಕಿಸುವ ರಸ್ತೆ ಕಿತ್ತೋಗಿದೆ. (ಹಾಳಾಗಿದ್ದು) ಇದನ್ನು ಸರಿಪಡಿಸುತ್ತಿಲ್ಲ ಎಂದು ಸಾರ್ವಜನಿಕರು ಮಾತನಾಡುತ್ತಿದ್ದಾರೆ. ಐತಿಹಾಸಿಕ ಚನ್ನಮ್ಮನ ನಾಡಿಗೆ ಕಿಲ್ಲೆ ವೀಕ್ಷಿಸಲು ಸಾಕಷ್ಟು ಪ್ರವಾಸಿಗರು ಬರುತ್ತಾರೆ. ಬರುವ ಸಂದರ್ಭದಲ್ಲಿ ಕಛೇರಿಗೆ ತೆರೆಳುವ ರಸ್ತೆ ನೋಡಿ ನಗುವಂತಾಗಿದೆ. ಪಕ್ಕದಲ್ಲಿಯೇ ಕೋರ್ಟ ಕಟ್ಟಡ ಪ್ರಾರಂಭವಾಗಿದೆ ಹಾಗೂ ಎನ್‌ಡಬ್ಲೂಕೆಎಸ್‌ಆರ್‌ಟಿಸಿ ಡಿಪೋ ನಿರ್ಮಾಣವಾಗಿದ್ದು ಇವುಗಳಿಗೆ ರಸ್ತೆ ಮಾರ್ಗವಿದ್ದು ಅಗ್ನಿಶಾಮಕ ಠಾಣೆಗೆ ಮಾತ್ರ ಮಲತಾಯಿ ಧೋರಣೆ ಏಕೆ ಇಲ್ಲಿಯ ರಸ್ತೆಗೆ ಏಕೆ ಡಾಂಬರೀಕರಣವಾಗುತ್ತಿಲ್ಲವೆಂಬುದು ಸಾರ್ವಜನಿಕರ ಪ್ರಶ್ನೆಯಾಗಿದೆ.

## ಕೆನರಾ ಬ್ಯಾಂಕ್ ಕಳ್ಳತನ ಪ್ರಕರಣ: ಮತ್ತೆ 12 ಜನರ ಬಂಧನ

• ಉದಯವಾಹಿನಿ ವಿಜಯಪುರ

ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನ ಮನಗೂಳಿ ಕೆನರಾ ಬ್ಯಾಂಕ್ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೆ 12 ಜನರನ್ನು ಬಂಧಿಸಲಾಗಿದ್ದು, ಇದುವರೆಗೆ ಬಂಧಿತರ ಸಂಖ್ಯೆ 15ಕ್ಕೇರಿದೆ ಎಂದು ಬೆಳಗಾವಿ ಉತ್ತರ ವಲಯ ಐಜಿಪಿ ಚೇತನಕುಮಾರ ರಾಠೋಡ ತಿಳಿಸಿದ್ದಾರೆ. ನಗರದಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಈಗಾಗಲೇ ಪೊಲೀಸರು 3 ಆರೋಪಿಗಳನ್ನು ಬಂಧಿಸಿದ್ದಾರೆ. ಅವರು ನೀಡಿದ ಮಾಹಿತಿಯನ್ನು ಆಧರಿಸಿ ಪ್ರಕರಣದ ಮತ್ತೆ 12 ಜನ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ತಿಳಿಸಿದರು. ಮೇ 25ರಂದು ಮನಗೂಳಿ ಕೆನರಾ ಬ್ಯಾಂಕ್ ನಲ್ಲಿ ಭಾರಿ ಪ್ರಮಾಣದ ಕಳ್ಳತನವಾಗಿತ್ತು. ಈ ಪ್ರಕರಣವನ್ನು ವಿಜಯಪುರ ಜಿಲ್ಲಾ ಪೊಲೀಸರು ಗಂಭೀರವಾಗಿ ಪರಿಗಣಿಸಿ, 100 ಸಿಬ್ಬಂದಿಗಳನ್ನು ಒಳಗೊಂಡ 8 ವಿಶೇಷ ತನಿಖಾ ತಂಡಗಳನ್ನು ರಚಿಸಲಾಗಿತ್ತು. ಈ ಪ್ರಕರಣದಲ್ಲಿ ಬೇಕಾಗಿದ್ದ ಒಟ್ಟು 15 ಜನರನ್ನು ಈಗ ಪೊಲೀಸರು ಬಂಧಿಸಿದ್ದಾರೆ ಎಂದವರು ತಿಳಿಸಿದರು. ಬಂಧಿತ ಒಟ್ಟು 15 ಆರೋಪಿಗಳಿಂದ 39 ಕೆಜಿ ಗಟ್ಟಿ ಬಂಗಾರ, 1.16 ಕೋಟಿ ನಗದು, ಕೃತ್ಯಕ್ಕೆ ಬಳಸಿದ ವಾಹನಗಳು ಸೇರಿದಂತೆ 39.26 ಕೋಟಿ ಅಧಿಕ ಮೌಲ್ಯದ ವಸ್ತುಗಳನ್ನು ಜಪ್ತು ಮಾಡಲಾಗಿದೆ ಎಂದು ತಿಳಿಸಿದರು. ಬಾಲರಾಜ್ ಮಣಿಕಮ್ ಯರೆಕುಲಾ, ಚಂದನರಾಜ್ ಪಿಳ್ಳೈ, ಗುಂಡು ಜೋಸೆಫ್ ಶ್ಯಾಮಬಾಬು, ಪೀಟರ್ ಚಂದ್ರಪಾಲ್, ಇಜಾಜ್ ಧಾರವಾಡ, ಸುಸೈರಾಜ್ ಡ್ಯಾನಿಯಲ್, ಬಾಬುರಾವ್ ಮಿರಿಯಾಲ್, ಮಹಮ್ಮದ್ ಆಸೀಫ್ ಕಲ್ಲೂರ, ಅನಿಲ್ ಮಿರಿಯಾಲ್, ಮೋಹನಕುಮಾರ, ಸುಲೇಮನ್‌ವೇಸ್ಲಿ ಪಲುಕುರಿ, ಮರಿಯಾದಾಸ ಗೋನಾ ಬಂಧಿತ ಆರೋಪಿಗಳು. ಅಲ್ಲದೇ ಈ ಹಿಂದೆ ಮೂವರು ಆರೋಪಿಗಳಾದ ವಿಜಯಕುಮಾರ ಮೋಹನ್ ರಾವ್ ಮಿರಿಯಾಲ, ಚಂದ್ರಶೇಖರ್ ಕೋಟಿಲಿಂಗಂ ನೆರೆಲ್ಲಾ, ಸುನಿಲ್ ನರಸಿಂಹಲು ಮೋಕಾ ಬಂಧಿತರಾಗಿದ್ದರು ಎಂದು ಅವರು ಹೇಳಿದ್ದಾರೆ.



ಉದಯವಾಹಿನಿ ಚಿತ್ರ

## ವಿಶ್ವ ಜನಸಂಖ್ಯಾ ದಿನಾಚರಣೆ

• ಉದಯವಾಹಿನಿ ಗದಗ

ಗದಗ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಹಾಗೂ ತಾಲ್ಲೂಕಾ ಆರೋಗ್ಯಾಧಿಕಾರಿಗಳ ಕಾರ್ಯಾಲಯ, ಗದಗ ಇವರುಗಳ ಸಂಯುಕ್ತ ಆಶ್ರಯದಲ್ಲಿ ಶುಕ್ರವಾರ ತಾಲ್ಲೂಕಾ ಆಸ್ಪತ್ರೆ, ಹಾಗೂ ದುಂಡಪ್ಪ ಮಾನ್ವಿ ಹೆರಿಗೆ ಆಸ್ಪತ್ರೆ, ಗದಗ ಆವರಣದಲ್ಲಿ ವಿಶ್ವ ಜನಸಂಖ್ಯಾ ದಿನಾಚರಣೆ 2025ರ ನಿಮಿತ್ಯ ಜಾಥಾ ಕಾರ್ಯಕ್ರಮವು ಜರುಗಿತು.

ಜಿಲ್ಲಾ ಕುಟುಂಬ ಕಲ್ಯಾಣ ಯೋಜನಾ ಅಧಿಕಾರಿ ಡಾ. ವಾಯ್, ಕೆ, ಭಜಂತ್ರಿ ಹಾಗೂ ಜಿಲ್ಲಾ ಸಮೀಕ್ಷಣಾ ಅಧಿಕಾರಿ ಡಾ. ವೆಂಕಟೇಶ ರಾಠೋಡ ಇವರು ಹಸಿರು ನಿಶಾನೆ ತೋರಿಸಿ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.



ಉದಯವಾಹಿನಿ ಚಿತ್ರ

# ಪುತ್ತೂರು ಶಿಕ್ಷಣ ಕಚೇರಿಗೆ ಸ್ವಂತ ವಾಹನವೇ ಇಲ್ಲ

### ಅಧಿಕಾರಿಗಳ ಕೊರತೆ ನಡುವೆ ಎಲ್ಲಾ ಉಸ್ತುವಾರಿಯ ಜವಾಬ್ದಾರಿ, ಆದರೆ ಈ ಇಲಾಖೆಗೆ ಕನಿಷ್ಟ ಒಂದೇ ಒಂದು ವಾಹನವಿಲ್ಲ


• ಉದಯವಾಹಿನಿ ಪುತ್ತೂರು

179 ಪ್ರಾಥಮಿಕ ಶಾಲೆಗಳು 31 ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು 51 ಅನುದಾನರಹಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳು ಪುತ್ತೂರು ಅವಿಭಜಿತ ತಾಲ್ಲೂಕಿನ ಸುಮಾರು 70 ಕಿಮೀ ವ್ಯಾಪ್ತಿ. ಅಧಿಕಾರಿಗಳ ಕೊರತೆ ನಡುವೆ ಎಲ್ಲಾ ಉಸ್ತುವಾರಿಯ ಜವಾಬ್ದಾರಿ. ಆದರೆ ಈ ಇಲಾಖೆಗೆ ಕನಿಷ್ಟ ಒಂದೇ ಒಂದು ವಾಹನವಿಲ್ಲ. ಇದು ಪುತ್ತೂರು ಕ್ಷೇತ್ರಶಿಕ್ಷಣಾಧಿಕಾರಿ ಕಚೇರಿ ಕಥೆ.

ಪುತ್ತೂರು ಹಾಗೂ ಕಡಬ ತಾಲ್ಲೂಕಿಗಳಿಗೆ ಇರುವ ಏಕೈಕ ಕ್ಷೇತ್ರಶಿಕ್ಷಣಾಧಿಕಾರಿ ಕಚೇರಿ. ಕಳೆದ ತಿಂಗಳಷ್ಟೇ ಸುಂದರವಾದ ಕಟ್ಟಡ ನಿರ್ಮಾಣಗೊಂಡಿದೆ. ಕಡಬ ತಾಲ್ಲೂಕು ಘೋಷಣೆಯಾದರೂ ಈ ತನಕ ಪ್ರತ್ಯೇಕ ಶಿಕ್ಷಣ ಕಚೇರಿ ಅಲ್ಲಿ ಪ್ರಾರಂಭವಾಗಿಲ್ಲ. ಹಾಗಾಗಿ ಕಡಬ ತಾಲ್ಲೂಕಿನ ಶೈಕ್ಷಣಿಕ ಜವಾಬ್ದಾರಿಯೂ ಪುತ್ತೂರು ಶಿಕ್ಷಣ ಕಚೇರಿಯ ಮೇಲೆಯೇ ಇದೆ. ಆದರೆ ಇಲ್ಲಿನ ಅಧಿಕಾರಿ ವರ್ಗಕ್ಕೆ ಓಡಾಡಲು ವಾಹನದ ವ್ಯವಸ್ಥೆ ಇಲ್ಲ. ಪುತ್ತೂರಿನಿಂದ 60ಕಿಮೀಗೂ ಹೆಚ್ಚು ದೂರವಿರುವ ಕಡಬ ತಾಲ್ಲೂಕಿನ ಬಿಳಿನೆಲೆ ಅಷ್ಟೇ ದೂರವಿರುವ ಗುಂಡ್ಯ, ಇನ್ನೊಂದೆಡೆ ಸುಳ್ಯ ತಾಲ್ಲೂಕಿನ ಗಡಿಯಲ್ಲಿರುವ ಪೆರ್ನಾಜೆ, ಮತ್ತೊಂದೆಡೆ ಬೊಬ್ಬೆಕೇರಿ. ಮಗದೊಂದು ಕಡೆ ಪಾಣಾಜೆ ಇದು ಕ್ಷೇತ್ರಶಿಕ್ಷಣಾಧಿಕಾರಿ ಕಚೇರಿಯ ವ್ಯಾಪ್ತಿ. ಕಳೆದ 6 ತಿಂಗಳ ಹಿಂದಿನ ತನಕ ಕ್ಷೇತ್ರಶಿಕ್ಷಣಾಧಿಕಾರಿ ಅವರಿಗೆ ಸರ್ಕಾರಿ ಜೀಪು ಇತ್ತು. ಆದರೆ ಈಗಿಲ್ಲ. ಅದರೊಂದಿಗೆ ಚಾಲಕನ ಹುದ್ದೆಯೂ ಖಾಲಿ.

ಇಷ್ಟೊಂದು ಶಾಲೆಗಳ ಸಮಸ್ಯೆಗಳು, ಅಲ್ಲಿನ ಚಟುವಟಿಕೆಗಳ ಮೇಲೆ ನಿಗಾ ಇಡಬೇಕಾದ ಸರ್ಕಾರಿ ಇಲಾಖೆಗೆ ಸ್ವಂತ ವಾಹನ ಅತೀ ಅಗತ್ಯ. ಹಾಗಿದ್ದರೂ ಕಳೆದ 6 ತಿಂಗಳಿನಿಂದ ಸರ್ಕಾರಿ ವಾಹನಕ್ಕೆ ಇಲಾಖೆ ಕಾಯುತ್ತಿದೆ. ಶಿಕ್ಷಣ ಇಲಾಖೆಯಲ್ಲಿದ್ದ ಸರ್ಕಾರ ಜೀಪಿಗೆ ಆಯಸ್ಸು ಮುಗಿದ ಕಾರಣ ಅದನ್ನು ಸ್ಕ್ರಾಪ್‌ಗೆ ಹಾಕಲಾಗಿದೆ. ಅದಕ್ಕಾಗಿ ಸರ್ಕಾರ ವಾಹನಭತ್ಯೆ ಎಂದು 22 ಸಾವಿರ ನೀಡುತ್ತಿದೆ. ಆದರೆ ಪ್ರಸ್ತುತ ಈ ಹಣಕ್ಕೆ ಬಾಡಿಗೆ ವಾಹನ ಲಭ್ಯವಾಗುವುದು ಸುಲಭವಲ್ಲ. ದಿನಕ್ಕೆ ಕನಿಷ್ಠ ಒಂದು ಸಾವಿರಕ್ಕಿಂತ ಕಡಿಮೆಗೆ ಯಾವ ವಾಹನವೂ ಬಾಡಿಗೆ ದೊರೆಯುವ ಸ್ಥಿತಿ ಇಲ್ಲ. ಹಾಗಾಗಿ ಸರ್ಕಾರ ನೀಡುವ ಈ ವಾಹನಭತ್ಯೆ ಶಿಕ್ಷಣ ಇಲಾಖೆಗೆ ಬಾಡಿಗೆ ವಾಹನದ ವ್ಯವಸ್ಥೆ ಮಾಡುವಲ್ಲಿ ಯಾವ ಪ್ರಯೋಜನವೂ ಆಗುತ್ತಿಲ್ಲ.

ಒಂದು ವೇಳೆ ಹಳೆಯ ವಾಹನವೊಂದನ್ನು ಬಾಡಿಗೆಗೆ ಪಡೆದುಕೊಂಡರೆ ಅದರಲ್ಲಿ 60 ಕಿಮೀ ಹೋಗುವಾಗ ಕಾರ್ಯಕ್ರಮ ಮುಗಿದಿರುತ್ತದೆ. ವಾಹನ ಅರ್ಧದಲ್ಲಿ ಕೈ ಕೊಟ್ಟರೆ ಮತ್ತೆ ಫಜೀತಿ.



ಉದಯವಾಹಿನಿ ಚಿತ್ರ

**ಬಹುತೇಕ ಎಲ್ಲಾ ಹುದ್ದೆಗಳೂ ಖಾಲಿ**

**ಕೊರತೆಯ ನಡುವೆಯೂ ಸಾಧನೆ**

ವಾಹನದ ಸಮಸ್ಯೆ ಒಂದು ಕಡೆಯಾದರೆ ಈ ಶಿಕ್ಷಣಾಧಿಕಾರಿ ಕಚೇರಿಯಲ್ಲಿ ಬಹುತೇಕ ಎಲ್ಲಾ ಹುದ್ದೆಗಳೂ ಖಾಲಿ. ಸಿಆರ್‌ಪಿ, ಬಿಆರ್‌ಪಿ, ದೈಹಿಕಶಿಕ್ಷಣ ಪರಿವೀಕ್ಷಣಾಧಿಕಾರಿ, ಪ್ರಥಮದರ್ಜೆ-ದ್ವಿತೀಯ ದರ್ಜೆ ಗುಮಾಸ್ತರು, ಎಫ್‌ಡಿಸಿ, ಡಿಗ್ರೂಫ್ ಸಿಬಂದಿ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕರು ಹೀಗೆ ಸಾಲು ಸಾಲು ಹುದ್ದೆಗಳು ಖಾಲಿಯಾಗಿವೆ. ಇಂತಹ ಸ್ಥಿತಿಯಲ್ಲೂ ಶಿಕ್ಷಣಾಧಿಕಾರಿ ಲೊಕೇಶ್ ಎಸ್.ಆರ್ ಹಾಗೂ ಅವರ ತಂಡದ ಪರಿಶ್ರಮದಿಂದ ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಜಿಲ್ಲೆಯಲ್ಲಿಯೇ ಪ್ರಥಮ ಸ್ಥಾನ ಪಡೆದುಕೊಂಡ ಹೆಗ್ಗಳಿಕೆ ಪುತ್ತೂರಿನ ಶಿಕ್ಷಣ ಇಲಾಖೆಯದ್ದಾಗಿದೆ. ಹಾಗಾಗಿಯೇ ಈ ಶಿಕ್ಷಣ ಕಚೇರಿಗೆ ಸ್ವಂತ ವಾಹನದ ಅಗತ್ಯತೆ ಮತ್ತಷ್ಟು ಹೆಚ್ಚಿನದ್ದಾಗಿದೆ. ಈ ನಿಟ್ಟಿನಲ್ಲಿ ಸರ್ಕಾರದ ಶಿಕ್ಷಣ ಇಲಾಖೆ ಆದ್ಯತೆಯ ನೆಲೆಯಲ್ಲಿ ವಾಹನ ಒದಗಿಸುವ ಕೆಲಸಕ್ಕೆ ಮುಂದಾಗಬೇಕಾಗಿದೆ.

**ವಾಹನ ವ್ಯವಸ್ಥೆಗೆ ಕ್ರಮ**

ಪುತ್ತೂರು ಶಿಕ್ಷಣ ಇಲಾಖೆಯ ವ್ಯಾಪ್ತಿ ದೊಡ್ಡದಿದೆ. ಹಾಗಾಗಿ ಇಲ್ಲಿಗೆ ಸ್ವಂತ ವಾಹನದ ಆವಶ್ಯಕತೆ ಅತೀ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಸರ್ಕಾರದಿಂದ ಶಿಕ್ಷಣ ಇಲಾಖೆಗೆ ಸ್ವಂತ ವಾಹನ ನೀಡುವ ಬಗ್ಗೆ ಪ್ರಯತ್ನ ಮಾಡಲಾಗುತ್ತಿದೆ. ಈ ಬಗ್ಗೆ ಈಗಾಗಲೇ ಮಾತುಕತೆ ನಡೆಸಲಾಗಿದೆ. ವಾಹನ ಬರುವ ತನಕ ಶಿಕ್ಷಣ ಇಲಾಖೆಗೆ ವಾಹನಭತ್ಯೆ ನೀಡಲಾಗುತ್ತಿದೆ. ಈ ಹಣದಲ್ಲಿ ಬಾಡಿಗೆ ನೆಲೆಯಲ್ಲಿ ವಾಹನವನ್ನು ಪಡೆದುಕೊಂಡು ಬಳಸಿಕೊಳ್ಳಬೇಕು. ಸರ್ಕಾರಿ ಮಟ್ಟದಲ್ಲಿ ಇದಕ್ಕೊಂದು ವ್ಯವಸ್ಥೆ ಮಾಡಲು ಚಿಂತನೆ ನಡೆಸಲಾಗಿದೆ- ಅಶೋಕ್ ರೈ ಶಾಸಕರು.

# 1.25 ಲಕ್ಷ ಕೋಟಿ ರೂ. ಮೀರಿದ ಭಾರತದ ರಕ್ಷಣಾ ಉತ್ಪಾದನೆ: ಪ್ರಧಾನಿ ಮೋದಿ

**ನವದೆಹಲಿ:** ಭಾರತದ ರಕ್ಷಣಾ ಉತ್ಪಾದನೆಯು 1.25 ಲಕ್ಷ ಕೋಟಿ ರೂ. ಮೀರಿದ್ದು, ಇಂದು ನಾವು ಹೊಸ ದಾಖಲೆಗಳನ್ನು ನಿರ್ಮಿಸುತ್ತಿದ್ದೇವೆ ಎಂದು ಪ್ರಧಾನಿ ನರೇಂದ್ರಮೋದಿ ಹೇಳಿದ್ದಾರೆ. 16ನೇ ರೋಜ್‌ಗಾರ್ ಮೇಳದಲ್ಲಿ ಯುವಜನತೆಯನ್ನು ಉದ್ದೇಶಿಸಿ ಮಾತನಾಡಿ, ಹಿಂದೆ ಭಾರತದಲ್ಲಿ ಎರಡರಿಂದ ನಾಲ್ಕು ಮೊಬೈಲ್ ಉತ್ಪಾದನಾ ಘಟಕಗಳು ಮಾತ್ರ ಇದ್ದವು. ಈಗ ಮೊಬೈಲ್ ಫೋನ್ ತಯಾರಿಕೆಗೆ ಸಂಬಂಧಿಸಿ 300 ಘಟಕಗಳಿವೆ. ಲಕ್ಷಾಂತರ ಯುವಜನರಿಗೆ ಉದ್ಯೋಗ ನೀಡಿದ್ದೇವೆ ಎಂದರು.



ಅದೇ ರೀತಿ ಆಪರೇಷನ್ ಸಿಂಧೂರ್ ನಂತರ ವ್ಯಾಪಕವಾಗಿ ಹೆಮ್ಮೆಯಿಂದ ಚರ್ಚಿಸಲಾದ ಮತ್ತೊಂದು ವಲಯವೆಂದರೆ ಅದು ರಕ್ಷಣಾ ವಲಯ. ರಕ್ಷಣಾ ಉತ್ಪಾದನೆಯಲ್ಲೂ ಭಾರತ ಹೊಸ ದಾಖಲೆಗಳನ್ನು ಸ್ಥಾಪಿಸುತ್ತಿದೆ. ನಮ್ಮ ರಕ್ಷಣಾ ಉತ್ಪಾದನೆಯು 1.25 ಲಕ್ಷ ಕೋಟಿ ರೂ.ಗಳನ್ನು ಮೀರಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಭಾರತದ ಯುವಕರು ದೇಶದ ಅತಿದೊಡ್ಡ ಆಸ್ತಿ, ಉಜ್ವಲ ಭವಿಷ್ಯದ ಬಲವಾದ ಭರವಸೆಯಿದೆ. ಇಂದು ಭಾರತವು ಯುವಜನತೆ ಅಪರಿಮಿತ ಶಕ್ತಿಗಳನ್ನು ಹೊಂದಿದೆ ಎಂದು ಜಗತ್ತು ಒಪ್ಪಿಕೊಂಡಿದೆ. ಮೊದಲನೆಯದಾಗಿ, ಜನಸಂಖ್ಯಾಶಾಸ್ತ್ರ ಎರಡನೆಯದಾಗಿ, ಪ್ರಜಾಪ್ರಭುತ್ವ, ಈ ಯುವಶಕ್ತಿಯು ಭಾರತದ ಉಜ್ವಲ ಭವಿಷ್ಯದ ದೊಡ್ಡ ಆಸ್ತಿ, ದೊಡ್ಡ ಖಾತರಿಯಾಗಿದೆ ಎಂದು ಬಣ್ಣಿಸಿದರು. ಖಾಸಗಿ ವಲಯದಲ್ಲಿ ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುವತ್ತ ತಮ್ಮ ಸರ್ಕಾರ ಗಮನಹರಿಸಿದೆ. ಉದ್ಯೋಗ ಸಂಬಂಧಿತ ಪ್ರೋತ್ಸಾಹಕ ಯೋಜನೆ ಎಂಬ ಹೊಸ ಯೋಜನೆಯನ್ನು ಅನುಮೋದಿಸಲಾಗಿದೆ. ಈ ಯೋಜನೆಯಡಿ ಖಾಸಗಿ ವಲಯದಲ್ಲಿ ತಮ್ಮ ಮೊದಲ ಉದ್ಯೋಗವನ್ನು ಪಡೆಯುವ ಯುವಕರಿಗೆ ಸರ್ಕಾರ 15,000ರೂ. ನೀಡುತ್ತದೆ ಎಂದರು.

> ನಮ್ಮ ಸರ್ಕಾರವು ಈ ಆಸ್ತಿಯನ್ನು ಸಮೃದ್ಧಿಯ ಸೂತ್ರವನ್ನಾಗಿ ಮಾಡುವಲ್ಲಿ ಅವಿಶ್ರಾಂತವಾಗಿ ತೊಡಗಿಸಿಕೊಂಡಿದೆ. ನಾನು ಐದು ದೇಶಗಳ ಭೇಟಿಯಿಂದ ಹಿಂದಿರುಗಿದೆ. ಪ್ರತಿ ದೇಶದಲ್ಲೂ ಭಾರತದ ಯುವ ಶಕ್ತಿಯ ಪ್ರತಿಧ್ವನಿ ಕೇಳಿಬಂತು. ಈ ಸಮಯದಲ್ಲಿ, ಮಾಡಿಕೊಂಡ ಎಲ್ಲಾ ಒಪ್ಪಂದಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತದ ಯುವಕರಿಗೆ ಖಂಡಿತವಾಗಿಯೂ ಪ್ರಯೋಜನ ನೀಡುತ್ತವೆ
>
> – ನರೇಂದ್ರಮೋದಿ, ಪ್ರಧಾನಿ


**ಲಕ್ಷಾಂತರ ಯುವಜನರಿಗೆ ಉದ್ಯೋಗ**

ಉದ್ಯೋಗ ಆಧಾರಿತ ಪ್ರೋತ್ಸಾಹಕ ಯೋಜನೆಗಾಗಿ ಕೇಂದ್ರ ಸರ್ಕಾರ ಸುಮಾರು 1 ಲಕ್ಷ ಕೋಟಿ ರೂ.ಗಳನ್ನು ಬಜೆಟ್‌ನಲ್ಲಿ ನಿಗದಿಪಡಿಸಿದೆ. ಇದು ಸುಮಾರು 3.5 ಕೋಟಿ ಉದ್ಯೋಗಗಳನ್ನು ಸೃಷ್ಟಿಸಲು ಸಹಾಯ ಮಾಡುತ್ತದೆ ಎಂದು ನಿರೀಕ್ಷಿಸಲಾಗಿದೆ ಎಂದು ತಿಳಿಸಿದರು. ಇದೇ ವೇಳೆ ವಿವಿಧ ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳಲ್ಲಿ ಹೊಸದಾಗಿ ನೇಮಕಗೊಂಡ 51,000ಕ್ಕೂ ಹೆಚ್ಚು ಯುವಕರಿಗೆ ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ನೇಮಕಾತಿ ಪತ್ರಗಳನ್ನು ಪ್ರಧಾನಿ ವಿತರಿಸಿದರು.

## ರಷ್ಯಾದಿಂದ ತೈಲ ಖರೀದಿಸೋ ದೇಶಗಳ ಮೇಲೆ 500% ಸುಂಕ

**ವಾಷಿಂಗ್ಟನ್:** ರಷ್ಯಾದಿಂದ ತೈಲ, ಅನಿಲ ಅಥವಾ ಯುರೇನಿಯಂನಂತಹ ಇಂಧನ ಉತ್ಪನ್ನಗಳನ್ನು ಖರೀದಿಸುವುದನ್ನು ಮುಂದುವರಿಸುವ ದೇಶಗಳ ಮೇಲೆ 500% ಸುಂಕ ವಿಧಿಸುವ ಬಗ್ಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗಂಭೀರವಾಗಿ ಪರಿಗಣಿಸಿದ್ದಾರೆ. ಒಂದು ವೇಳೆ ಇದನ್ನು ಜಾರಿಗೊಳಿಸಿದರೆ, ಭಾರತ ಮತ್ತು ಚೀನಾದಂತಹ ಪ್ರಮುಖ ಆಮದುದಾರರನ್ನು ನೇರವಾಗಿ ಟಾರ್ಗೆಟ್ ಮಾಡಿದಂತಾಗುತ್ತದೆ. ರಷ್ಯಾದ ಇಂಧನ ಆದಾಯವನ್ನು ಕುಂಠಿತಗೊಳಿಸುವುದು ಮತ್ತು ಉಕ್ರೇನ್‌ನಲ್ಲಿನ ಸಂಘರ್ಷವನ್ನು ಕೊನೆಗೊಳಿಸಲು ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಮೇಲೆ ಒತ್ತಡ ಹೇರುವ ಉದ್ದೇಶ ಇದಾಗಿದೆ. ಸೆನೆಟರ್ ಲಿಂಡ್ಸೆ ಗ್ರಹಾಂ ಅವರಂತಹ ಪ್ರಭಾವಿ ವ್ಯಕ್ತಿಗಳು ಈ ಪ್ರಸ್ತಾಪವನ್ನು ಬೆಂಬಲಿಸಿದ್ದಾರೆ. 'ನೀವು ರಷ್ಯಾದಿಂದ ಇಂಧನವನ್ನು ಖರೀದಿಸುತ್ತಿದ್ದರೆ ಮತ್ತು ಉಕ್ರೇನ್‌ಗೆ ಸಹಾಯ ಮಾಡದಿದ್ದರೆ, ಅಮೆರಿಕದಲ್ಲಿರುವ ನಿಮ್ಮ ಸರಕುಗಳಿಗೆ 500% ಸುಂಕ ವಿಧಿಸಬೇಕಾಗುತ್ತದೆ ಎಂದು ಎಚ್ಚರಿಸಿದ್ದರು.

ಒಂದು ವೇಳೆ ಈ ನಿರ್ಣಯ ಅಂಗೀಕಾರವಾದರೆ, ಜಾಗತಿಕ ನಿರ್ಬಂಧಗಳ ಸಮಯದಲ್ಲಿ ರಷ್ಯಾದ ತೈಲ, ಅನಿಲದ ಆಮದನ್ನು ಹೆಚ್ಚಿಸಿರುವ ಭಾರತ ಮತ್ತು ಚೀನಾದಂತಹ ದೇಶಗಳು, ಅಮೆರಿಕದ ಮಾರುಕಟ್ಟೆಗೆ ಪ್ರವೇಶಿಸುವ ತಮ್ಮ ಉತ್ಪನ್ನಗಳ ಮೇಲೆ 500% ವರೆಗಿನ ಅಭೂತಪೂರ್ವ ಸುಂಕವನ್ನು ಎದುರಿಸಬೇಕಾಗುತ್ತದೆ. ಈ ಕ್ರಮವು ವ್ಯಾಪಾರ ಸಂಬಂಧಗಳಲ್ಲಿ, ವಿಶೇಷವಾಗಿ ಪ್ರಮುಖ ಕಾರ್ಯತಂತ್ರದ ಪಾಲುದಾರ ಭಾರತದೊಂದಿಗೆ ಉದ್ವಿಗ್ನತೆಯನ್ನು ಹೆಚ್ಚಿಸುವ ಸಾಧ್ಯತೆಯಿದೆ.



ಈಚೆಗೆ 14 ದೇಶಗಳ ಮೇಲೆ ಹೊಸ ಸುಂಕ ವಿಧಿಸಿ ಟ್ರಂಪ್ ಆದೇಶ ಹೊರಡಿಸಿದ್ದರು. ರಷ್ಯಾದ ಇಂಧನ ಆಮದುದಾರರ ಮೇಲಿನ 500% ತೆರಿಗೆ ಸೇರಿದಂತೆ ಹೊಸ ಸುಂಕಗಳು 2025ರ ಆಗಸ್ಟ್ 1ರಿಂದ ಜಾರಿಗೆ ಬರಲಿವೆ ಎಂದು ಅಧ್ಯಕ್ಷ ಟ್ರಂಪ್ ಹೇಳಿದ್ದಾರೆ.

# ಜಾಗತಿಕವಾಗಿ ಮುಸ್ಲಿಮರ ಜನಸಂಖ್ಯೆ ಏರಿಕೆ

## 2050ರ ವೇಳೆಗೆ ಭಾರತದಲ್ಲಿ ಮುಸ್ಲಿಮರ ಸಂಖ್ಯೆಯು 30 ಕೋಟಿ ತಲುಪುವ ಸಾಧ್ಯತೆ

**ಹೊಸದಿಲ್ಲಿ:** ಪ್ಯೂ ರಿಸರ್ಚ್ ಸೆಂಟರ್ ವರದಿಯ ಪ್ರಕಾರ, ಇಸ್ಲಾಂ ಧರ್ಮವು ಜಗತ್ತಿನಲ್ಲಿ ಅತಿ ವೇಗವಾಗಿ ಬೆಳೆಯುತ್ತಿದೆ. ಕಳೆದ 10 ವರ್ಷಗಳಲ್ಲಿ ಮುಸ್ಲಿಂ ಜನಸಂಖ್ಯೆ ಗಣನೀಯವಾಗಿ ಏರಿಕೆಯಾಗುತ್ತಿರುವ ಬಗ್ಗೆ ವರದಿ ಬಿಡುಗಡೆ ಮಾಡಲಾಗಿದೆ. ಕ್ರೈಸ್ತರು ಜಗತ್ತಿನ ಅತಿದೊಡ್ಡ ಧಾರ್ಮಿಕ ಗುಂಪಾಗಿದ್ದರೂ, ಅವರ ಸಂಖ್ಯೆ ಕಡಿಮೆಯಾಗುತ್ತಿದೆ ಎಂದು ಹೇಳಲಾಗಿದೆ 2010 ರಿಂದ 2020ರವರೆಗೆ ಜಗತ್ತಿನಲ್ಲಿ ಮುಸ್ಲಿಮರು ಅತಿ ವೇಗವಾಗಿ ಬೆಳೆಯುತ್ತಿದೆ ಎಂದು ಪ್ಯೂ ರಿಸರ್ಚ್ ಸೆಂಟರ್ ಈ ಬಗ್ಗೆ ವರದಿ ನೀಡಿದೆ. ಜತೆಗೆ ಹಿಂದೂಗಳ ಸಂಖ್ಯೆಯೂ ಜಗತ್ತಿನ ಜನಸಂಖ್ಯೆಯಷ್ಟೇ ವೇಗದಲ್ಲಿ ಬೆಳೆದಿದೆ ಎನ್ನಲಾಗಿದೆ. 2020ರಲ್ಲಿ ಮುಸ್ಲಿಂರ ಸಂಖ್ಯೆ ನೂರಾ ಇಪ್ಪತ್ತು ಕೋಟಿ ತಲುಪಿದೆ. ಜಗತ್ತಿನಲ್ಲಿ ಧರ್ಮವಿಲ್ಲದ ಜನರ ಸಂಖ್ಯೆಯೂ ಹೆಚ್ಚಾಗಿದೆ ಎಂದು ಹೇಳಲಾಗಿದೆ.

**ಮುಸ್ಲಿಂರ ಸಂಖ್ಯೆ ಎಷ್ಟಿತ್ತು ಎಷ್ಟಾಯ್ತು?:** ಪ್ಯೂ ರಿಸರ್ಚ್ ಸೆಂಟರ್‌ನ ವಿಶ್ಲೇಷಣೆಯ ಪ್ರಕಾರ, 2010 ರಿಂದ 2020ರ ಅವಧಿಯಲ್ಲಿ ಜಗತ್ತಿನಲ್ಲಿ ಮುಸ್ಲಿಮರ ಜನಸಂಖ್ಯೆ ಅತಿ ವೇಗವಾಗಿ ಬೆಳೆದಿದೆ. ಕ್ರೈಸ್ತರ ಸಂಖ್ಯೆ ಜಾಗತಿಕ ಜನಸಂಖ್ಯೆಯಲ್ಲಿ ಶೇ.1.8 ರಷ್ಟು ಕಡಿಮೆಯಾಗಿ ಶೇ.28.8 ಕ್ಕೆ ತಲುಪಿದೆ. 2020ರಲ್ಲಿ ಅವರ ಸಂಖ್ಯೆ 1.2 ಬಿಲಿಯನ್ ಅಂದರೆ, ನೂರಾ ಇಪ್ಪತ್ತು ಕೋಟಿ ತ ಆಗಿದ್ದು, ಶೇ. 95ರಷ್ಟು ಹಿಂದೂಗಳು ಭಾರತದಲ್ಲಿದ್ದಾರೆ ಎನ್ನಲಾಗಿದೆ. ಇಸ್ಲಾಂ ಜಗತ್ತಿನ ಎರಡನೇ ಅತಿದೊಡ್ಡ ಧರ್ಮವಾಗಿದೆ. ಇದು ವೇಗವಾಗಿ ಬೆಳೆಯುತ್ತಿರುವ ಧರ್ಮವಾಗಿದೆ. ಕಳೆದ ಒಂದು ದಶಕದಲ್ಲಿ ಜನಸಂಖ್ಯೆ ಹೇಗೆ ಬೆಳೆದಿದೆ ಎಂಬುದರ ಬಗೆಗಿನ ಸಂಪೂರ್ಣ ಮಾಹಿತಿ ಇಲ್ಲಿದೆ.

**ಕ್ರೈಸ್ತರ ಸಂಖ್ಯೆ ಕಡಿಮೆ**

ಭಾರತದಲ್ಲಿ ಹಿಂದೂಗಳ ಸಂಖ್ಯೆ 2010 ರಲ್ಲಿ ಶೇ.80 ಇದ್ದದ್ದು 2020 ರಲ್ಲಿ ಶೇ.79 ಕ್ಕೆ ಇಳಿದಿದೆ. ಆದರೆ, ಮುಸ್ಲಿಮರ ಸಂಖ್ಯೆ 2010 ರಲ್ಲಿ ಶೇ.14.3 ಇದ್ದದ್ದು 2020 ರಲ್ಲಿ ಶೇ.15.2 ಕ್ಕೆ ಏರಿದೆ. 2010 ಟು 2020 ಎಂಬ ವಿಶ್ಲೇಷಣೆಯಲ್ಲಿ ಈ ವಿಷಯಗಳನ್ನು



ಬಹಿರಂಗಪಡಿಸಲಾಗಿದೆ. ಅಂದರೆ, 2010 ರಿಂದ 2020 ರವರೆಗೆ ಜಾಗತಿಕ ಧಾರ್ಮಿಕ ಚಿತ್ರಣ ಬದಲಾದ ಬಗ್ಗೆ ವಿವರಿಸಲಾಗಿದೆ. ಜನಸಂಖ್ಯಾ ವರದಿ ಪ್ರಕಾರ, ಯಾವುದೇ ನಿರ್ದಿಷ್ಟ ಧಾರ್ಮಿಕ ಸಂಬಂಧವನ್ನು ಹೊಂದಿರದ, ನೋನ್ಸ್ ಎಂದು ಕರೆಯಲ್ಪಡುವ ಜನರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ. ಈ ಗುಂಪು 27 ಕೋಟಿಯಾಗಿದೆ.

**ಯಾವ ಧರ್ಮದ ಸಂಖ್ಯೆ ಎಷ್ಟಿದೆ?:** ಜಾಗತಿಕ ಜನಸಂಖ್ಯೆಯ ಪ್ರಮಾಣದಲ್ಲಿ ಹಿಂದೂಗಳು 2020ರಲ್ಲಿ ಶೇ.14.9 ರಷ್ಟಿದ್ದರು. 2010 ರಲ್ಲಿ ಈ ಸಂಖ್ಯೆ 15% ಆಗಿತ್ತು. 2010 ರಿಂದ 2020 ರವರೆಗೆ ಹಿಂದೂಗಳ ಸಂಖ್ಯೆ 12% ರಷ್ಟು ಹೆಚ್ಚಾಗಿದೆ. ಇದು ಸುಮಾರು 1.1 ಬಿಲಿಯನ್‌ನಿಂದ 1.2 ಬಿಲಿಯನ್‌ಗೆ ಏರಿದೆ. ಬೌದ್ಧರು ಮಾತ್ರ 2020ರಲ್ಲಿ ಹಿಂದಿನ ದಶಕಕ್ಕಿಂತ ಕಡಿಮೆ ಸಂಖ್ಯೆಯಲ್ಲಿದ್ದರು. 2010ರಲ್ಲಿ ಕ್ರೈಸ್ತರು ಜಾಗತಿಕ ಜನಸಂಖ್ಯೆಯ 30.6% ರಷ್ಟಿದ್ದರು. ನಂತರ ಮುಸ್ಲಿಮರು ಶೇ. 23.9ರಷ್ಟಾಯಿತು. ಹಿಂದೂಗಳು ಶೇ.15ರಷ್ಟಿತ್ತು. ಬೌದ್ಧರು (4.9%), ಧರ್ಮವಿಲ್ಲದವರು (23.3%), ಇತರ ಧರ್ಮಗಳು (2.2%), ಯಹೂದಿಗಳು (1% ಕ್ಕಿಂತ ಕಡಿಮೆ) ಇದ್ದರು.

**ಪ್ಯೂ ರಿಸರ್ಚ್ ಸೆಂಟರ್‌ನ ವರದಿಯ ಪ್ರಕಾರ, ಇಸ್ಲಾಂ ಜಗತ್ತಿನಲ್ಲಿ ಅತಿ ವೇಗವಾಗಿ ಬೆಳೆಯುತ್ತಿರುವ ಧರ್ಮವಾಗಿದೆ. 2010 ರಿಂದ 2020ರವರೆಗೆ ಮುಸ್ಲಿಂ ಜನಸಂಖ್ಯೆಯು ಗಣನೀಯವಾಗಿ ಏರಿಕೆಯಾಗಿದೆ, ಆದರೆ ಕ್ರೈಸ್ತರ ಸಂಖ್ಯೆ ಕಡಿಮೆಯಾಗುತ್ತಿದೆ. ಹಿಂದೂಗಳ ಸಂಖ್ಯೆಯು ಜಾಗತಿಕ ಜನಸಂಖ್ಯೆಯಷ್ಟೇ ವೇಗದಲ್ಲಿ ಬೆಳೆದಿದೆ. 2050ರ ವೇಳೆಗೆ ಭಾರತದಲ್ಲಿ ಮುಸ್ಲಿಂ ಜನಸಂಖ್ಯೆಯು ಗಣನೀಯ ಪ್ರಮಾಣದಲ್ಲಿ ಹೆಚ್ಚಾಗುವ ಸಾಧ್ಯತೆಯಿದೆ ಎಂದು ವರದಿ ತಿಳಿಸಿದೆ.**

### 1.8 ಶೇ. ಅಂಕಗಳಿಂದ 25.6%ಕ್ಕೆ ಏರಿಕೆ

**ವಿಶ್ವದ ಜನಸಂಖ್ಯೆಯಲ್ಲಿ ನೋನ್ಸ್ ಪಾಲು ಸುಮಾರು ಒಂದು ಪೂರ್ಣ ಶೇಕಡಾವಾರು ಪಾಯಿಂಟ್‌ನಿಂದ 24.2% ಕ್ಕೆ ಏರಿದೆ. ಆದರೆ, ಈ ಅವಧಿಯಲ್ಲಿ ಮುಸ್ಲಿಮರು ವಿಶ್ವದ ಜನಸಂಖ್ಯೆಯಲ್ಲಿ ಅತಿ ದೊಡ್ಡ ಬೆಳವಣಿಗೆ ಪಡೆದಿದೆ. ಮುಸ್ಲಿಮರ ಸಂಖ್ಯೆ 347 ಮಿಲಿಯನ್ ಅಂದರೆ, 34.7 ಕೋಟಿ ಹೆಚ್ಚಾಗಿದೆ. ಇದರ ಪರಿಣಾಮವಾಗಿ, ವಿಶ್ವದ ಒಟ್ಟು ಜನಸಂಖ್ಯೆಯಲ್ಲಿ ಮುಸ್ಲಿಮರ ಪಾಲು 1.8 ಶೇಕಡಾ ಅಂಕಗಳಿಂದ 25.6% ಕ್ಕೆ ಏರಿದೆ.**

2050ರ ವೇಳೆಗೆ ಭಾರತದ ಜನಸಂಖ್ಯೆ 166 ಕೋಟಿ ಆಗಲಿದೆ. ಅದರಲ್ಲಿ ಹಿಂದೂಗಳ ಜನಸಂಖ್ಯೆ 130 ಕೋಟಿ ಇರಲಿದೆ. 2050ರ ವೇಳೆಗೆ ಮುಸ್ಲಿಂ ಜನಸಂಖ್ಯೆ 30 ಕೋಟಿಯ ಆಸುಪಾಸಿನಲ್ಲಿ ಇರಲಿದೆ. 2050 ರಲ್ಲಿ ಜಗತ್ತಿನ ಒಟ್ಟು ಮುಸ್ಲಿಂ ಜನಸಂಖ್ಯೆಯಲ್ಲಿ ಭಾರತದ ಪಾಲು 11 ಪ್ರತಿಶತ ಇರುತ್ತದೆ ಎಂದು ರೀಸರ್ಚ್ ನಿಂದ ಬಹಿರಂಗಗೊಂಡಿದೆ.

# ಮ್ಯಾನ್ಮಾರ್‌ನ ಬೌದ್ಧ ಮಠದ ಮೇಲೆ ವೈಮಾನಿಕ ದಾಳಿ

**ಮ್ಯಾನ್ಮಾರ್:** ಮ್ಯಾನ್ಮಾರ್‌ನ ಮಧ್ಯ ಸಾಗೈಂಗ್ ಪ್ರದೇಶದ ಬೌದ್ಧ ಮಠವೊಂದರ ಮೇಲೆ ಮ್ಯಾನ್ಮಾರ್ ಸೇನೆ ನಡೆಸಿದ ವೈಮಾನಿಕ ದಾಳಿಯಲ್ಲಿ 4 ಮಕ್ಕಳು ಸೇರಿದಂತೆ 23 ನಾಗರಿಕರು ಪ್ರಾಣ ಕಳೆದುಕೊಂಡಿದ್ದಾರೆ. ಸಾಗೈಂಗ್ ಪಟ್ಟಣದಲ್ಲಿರುವ ಲಿನ್ ಟಾಲು ಗ್ರಾಮದಲ್ಲಿ ಮುಂಜಾನೆ ಈ ದುರಂತ ದಾಳಿ ಸಂಭವಿಸಿದೆ.

**30 ಮಂದಿಗೆ ಗಾಯ**

ಅಲ್ಲಿ ಆ ಪ್ರದೇಶದಲ್ಲಿ ನಡೆಯುತ್ತಿರುವ ಸಂಘರ್ಷದಿಂದ ತಪ್ಪಿಸಿಕೊಳ್ಳಲು 150ಕ್ಕೂ ಹೆಚ್ಚು ಜನರು ಆಶ್ರಯ ಪಡೆದಿದ್ದರು. ಇಂದು ರಾತ್ರಿ ನಡೆದ ದಾಳಿಯಲ್ಲಿ ಸುಮಾರು 30 ಜನರು ಗಾಯಗೊಂಡಿದ್ದಾರೆ, ಅವರಲ್ಲಿ 10 ಜನರ ಸ್ಥಿತಿ ಗಂಭೀರವಾಗಿದೆ ಎಂದು ವರದಿಯಾಗಿದೆ. ಮಿಲಿಟರಿ ಜೆಟ್ ಇಂದು ಬೆಳಗಿನ ಜಾವ 1 ಗಂಟೆ ಸುಮಾರಿಗೆ ಮಠದ ಆವರಣದೊಳಗಿನ ಕಟ್ಟಡದ ಮೇಲೆ ಬಾಂಬ್ ಹಾಕಿತು. ಇತ್ತೀಚಿನ ಘರ್ಷಣೆಯಲ್ಲಿ ಸಿಲುಕಿದ ಸ್ಥಳಾಂತರಗೊಂಡ ಗ್ರಾಮಸ್ಥರು ಈ



ಮಠವನ್ನು ಆಶ್ರಯ ತಾಣವಾಗಿ ಬಳಸುತ್ತಿದ್ದರು. ಕೊಲ್ಲಲ್ಪಟ್ಟವರೆಲ್ಲರೂ ರಕ್ಷಣೆ ಬಯಸಿ ಬಂದಿದ್ದ ನಾಗರಿಕರು. 2021ರಲ್ಲಿ ಮಿಲಿಟರಿ ಅಧಿಕಾರವನ್ನು ವಶಪಡಿಸಿಕೊಂಡಾಗಿನಿಂದ ಮ್ಯಾನ್ಮಾರ್‌ನಲ್ಲಿ ನಡೆಯುತ್ತಿರುವ ಮಾನವೀಯ ಬಿಕ್ಕಟ್ಟಿನ ನಡುವೆ ಈ ಘಟನೆಯು ಮತ್ತಷ್ಟು ಆತಂಕ ಸೃಷ್ಟಿಸಿದೆ. ಮ್ಯಾನ್ಮಾರ್‌ನ ಸ್ವತಂತ್ರ ಡೆಮಾಕ್ರಟಿಕ್ ವಾಯ್ಸ್ ಆಫ್ ಬರ್ಮಾ ಆನ್‌ಲೈನ್ ಮಾಧ್ಯಮವು ಸಾವಿನ ಸಂಖ್ಯೆ 30ರಷ್ಟಿರಬಹುದು ಎಂದು ವರದಿ ಮಾಡಿದೆ. ಆ ಬಗ್ಗೆ ಯಾವುದೇ ದೃಢೀಕರಣ ಸಿಗಲಿಲ್ಲ. ದೇಶದ ಎರಡನೇ ಅತಿದೊಡ್ಡ ನಗರವಾದ ಮಂಡಲೆಯಿಂದ ವಾಯುವ್ಯಕ್ಕೆ ಸುಮಾರು 35 ಕಿ.ಮೀ ದೂರದಲ್ಲಿರುವ ಮಠದಲ್ಲಿ ನಡೆದ ಘಟನೆಯ ಬಗ್ಗೆ ಮಿಲಿಟರಿ ಇನ್ನೂ ಪ್ರತಿಕ್ರಿಯಿಸಲಿಲ್ಲ. ಫೆಬ್ರವರಿ 2021ರಲ್ಲಿ ಸೈನ್ಯವು ಆಂಗ್ ಸಾನ್ ಸೂಕಿ ಅವರ ಚುನಾಯಿತ ಸರ್ಕಾರದಿಂದ ಅಧಿಕಾರವನ್ನು ವಶಪಡಿಸಿಕೊಂಡಾಗಿನಿಂದ ಮ್ಯಾನ್ಮಾರ್‌ನಲ್ಲಿ ಪ್ರಕ್ಷುಬ್ಧತೆ ನಿರ್ಮಾಣವಾಗಿದೆ. ಈ ದೇಶದ ಹೆಚ್ಚಿನ ಭಾಗಗಳು ಈಗ ಸಂಘರ್ಷದಲ್ಲಿ ಸಿಲುಕಿಕೊಂಡಿವೆ.

**23 ಜನ ಸಾವು**

ಸಶಸ್ತ್ರ ಪ್ರತಿರೋಧದ ಭದ್ರಕೋಟೆಯಾದ ಸಾಗೈಂಗ್ ಪ್ರದೇಶದಲ್ಲಿ ಸಶಸ್ತ್ರ ಪೀಪಲ್ಸ್ ಡಿಫೆನ್ಸ್ ಫೋರ್ಸಸ್ ಸೇರಿದಂತೆ ವಿರೋಧ ಪಡೆಗಳನ್ನು ಎದುರಿಸಲು ಸೇನೆಯು ವಾಯುದಾಳಿಗಳನ್ನು ಹೆಚ್ಚಾಗಿ ಬಳಸುತ್ತಿದೆ.

## ಜರ್ದಾರಿ ಪದಚ್ಯುತಿಗೊಳಿಸಿ ಅಧ್ಯಕ್ಷನಾಗಲು ಆಸಿಮ್ ಮುನೀರ್ ಕಣ್ಣು

**ಇಸ್ಲಾಮಾಬಾದ್:** ಪಾಕಿಸ್ತಾನದ ಅಧ್ಯಕ್ಷ ಆಸಿಫ್ ಅಲಿ ಜರ್ದಾರಿ ಅವರನ್ನು ಪದಚ್ಯುತಗೊಳಿಸಿ, ಸೇನಾ ಮುಖ್ಯಸ್ಥ ಆಸಿಮ್ ಮುನೀರ್ ಅವರು ಅಧ್ಯಕ್ಷನಾಗಲು ಪ್ರಬಲ ಆಕಾಂಕ್ಷಿಯಾಗಿದ್ದಾರೆ ಎನ್ನುವ ಸಂದೇಶಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ. ಇಂತಹ ಸಂದೇಶಗಳನ್ನು ಬಲವಾಗಿ ನಿರಾಕರಿಸಿರುವ ಪ್ರಧಾನಿ ಶೆಹಬಾಜ್ ಶರೀಫ್, ಅಂತಹ ಹೇಳಿಕೆಗಳು ಕೇವಲ ವದಂತಿಗಳಷ್ಟೇ ಎಂದಿದ್ದಾರೆ. ಫೀಲ್ಡ್ ಮಾರ್ಷಲ್ ಆಸಿಮ್ ಮುನೀರ್ ಅಧ್ಯಕ್ಷರಾಗುವ ಯಾವುದೇ ಇಚ್ಛೆಯನ್ನು ವ್ಯಕ್ತಪಡಿಸಿಲ್ಲ ಅಥವಾ ಅಂತಹ ಯಾವುದೇ ಯೋಜನೆಯೂ ಇಲ್ಲ ಎಂದು ಶರೀಫ್ ದಿ ನ್ಯೂಸ್‌ಗೆ ತಿಳಿಸಿದ್ದಾರೆ.

**ಹೇಳಿಕೆಗಳು ಕೇವಲ ವದಂತಿಗಳಷ್ಟೇ**

ಜರ್ದಾರಿ, ಮುನೀರ್ ಅವರು ಪರಸ್ಪರ ಗೌರವ ಹೊಂದಿದ್ದಾರೆ. ಅಲ್ಲದೇ ಪಾಕಿಸ್ತಾನದ ಪ್ರಗತಿ ಮತ್ತು ಸಮೃದ್ಧಿಯ ಗುರಿ ಹೊಂದಿದ್ದಾರೆ ಎಂದು ಅವರು ಹೇಳಿದ್ದಾರೆ. ಅಧ್ಯಕ್ಷ ಜರ್ದಾರಿ, ಪ್ರಧಾನಿ ಶೆಹಬಾಜ್ ಶರೀಫ್ ಮತ್ತು ಸೇನಾ ಮುಖ್ಯಸ್ಥರನ್ನು ಗುರಿಯಾಗಿಸಿ ಈ ಅಪ ಪ್ರಚಾರ ಯಾರು ಮಾಡುತ್ತಿದ್ದಾರೆ ಎಂದು



ನಮಗೆ ಸಂಪೂರ್ಣವಾಗಿ ತಿಳಿದಿದೆ ಎಂದು ಗೃಹ ಸಚಿವ ಮೋಸಿನ್ ನಖ್ವಿ ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಹೇಳಿದ್ದರು. ಮುನೀರ್ ಅವರನ್ನು ಮೂರು ವರ್ಷಗಳ ಅವಧಿಗೆ 2022 ರಲ್ಲಿ ಸೇನಾ ಮುಖ್ಯಸ್ಥರ ಹುದ್ದೆಗೆ ಬಡ್ತಿ ನೀಡಲಾಗಿತ್ತು. ಆದರೆ ಕಳೆದ ವರ್ಷ ಅವರ ಅವಧಿಯನ್ನು ಐದು ವರ್ಷಕ್ಕೆ ಸರ್ಕಾರ ವಿಸ್ತರಿಸಿತ್ತು. ಅವರನ್ನು ಮತ್ತೊಂದು ಅವಧಿ ವಿಸ್ತರಿಸುವ ಸಾಧ್ಯತೆಯೂ ಇದೆ. ಪ್ರಧಾನಿ ಹುದ್ದೆಗೆ ಷರೀಫ್ ಅವರ ಹೆಸರನ್ನು ಬೆಂಬಲಿಸಿದ್ದಕ್ಕಾಗಿ ಐದು ವರ್ಷಗಳ ಅವಧಿಗೆ ಅಧ್ಯಕ್ಷರಾಗಿ ಜರ್ದಾರಿ ಕಳೆದ ವರ್ಷ ಆಯ್ಕೆಯಾಗಿದ್ದರು.

> **ಈ ಹೇಳಿಕೆ ಹಿನ್ನೆಲೆಯಲ್ಲಿ ಶರೀಫ್ ಅವರು ಪ್ರತಿಕ್ರಿಯಿಸಿದ್ದಾರೆ. ಅಧ್ಯಕ್ಷರನ್ನು ರಾಜೀನಾಮೆ ಕೇಳುವ ಬಗ್ಗೆ ಅಥವಾ COAS ಅಧ್ಯಕ್ಷ ಸ್ಥಾನವನ್ನು ವಹಿಸಿಕೊಳ್ಳಲು ಆಕಾಂಕ್ಷಿಯಾಗುವುದರ ಬಗ್ಗೆ ಯಾವುದೇ ಚರ್ಚೆ ನಡೆದಿಲ್ಲ ಅಥವಾ ಅಂತಹ ಯಾವುದೇ ಆಲೋಚನೆ ಅಸ್ತಿತ್ವದಲ್ಲಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ ಎಂದು ಅವರು ಹೇಳಿದರು.**

ಜರ್ದಾರಿ ಮತ್ತು ಅವರ ಪುತ್ರ ಬಿಲಾವಲ್ ಭುಟ್ಟೋ ಜರ್ದಾರಿ ಇಬ್ಬರೂ ಸರ್ಕಾರದೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದಾರೆ. ಬಿಲಾವಲ್ ಇತ್ತೀಚಿನ ಭಾರತ–ಪಾಕಿಸ್ತಾನ ಸೇನಾ ಸಂಘರ್ಷ ಕುರಿತು ವಿವರಿಸಲು ವಿವಿಧ ರಾಷ್ಟ್ರಗಳಿಗೆ ಭೇಟಿ ನೀಡಿದ ನಿಯೋಗದ ನೇತೃತ್ವ ವಹಿಸಿದ್ದರು. ಇದು ಅಧಿಕಾರದ ವಲಯದಲ್ಲಿ ಅವರು ಹೊಂದಿರುವ ನಂಬಿಕೆಯನ್ನು ತೋರಿಸುತ್ತದೆ ಎಂದು ರಾಜಕೀಯ ವೀಕ್ಷಕರು ಹೇಳಿದ್ದಾರೆ.

## ಏರ್ ಇಂಡಿಯಾ ವಿಮಾನ ದುರಂತದ ಪ್ರಾಥಮಿಕ ವರದಿ ಕುರಿತು ಆತುರದ ತೀರ್ಮಾನ ಬೇಡ

**ವಿಶಾಖಪಟ್ಟಣ:** ಗುಜರಾತ್‌ನ ಅಹಮದಾಬಾದ್‌ನಲ್ಲಿ ಸಂಭವಿಸಿದ ಏರ್ ಇಂಡಿಯಾ ವಿಮಾನ ದುರಂತ ಪ್ರಕರಣ ಸಂಬಂಧ ಪ್ರಾಥಮಿಕ ವರದಿ ಕುರಿತು ಆತುರದ ತೀರ್ಮಾನಗಳಿಗೆ ಬರಬೇಡಿ ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವ ಕಿಂಜರಪು ರಾಮ್ ಮೋಹನ್ ನಾಯ್ಡು ಹೇಳಿದ್ದಾರೆ. ವಿಶಾಖಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾವು ಪೈಲಟ್‌ಗಳ ಕಲ್ಯಾಣ ಮತ್ತು ಯೋಗಕ್ಷೇಮದ ಬಗ್ಗೆಯೂ ಕಾಳಜಿ ವಹಿಸುತ್ತೇವೆ. ಆದ್ದರಿಂದ ಈ ಹಂತದಲ್ಲಿ ಯಾವುದೇ ತೀರ್ಮಾನಗಳಿಗೆ ಧಾವಿಸಬೇಡಿ, ಅಂತಿಮ ವರದಿಗಾಗಿ ಕಾಯೋಣ ಎಂದು ಅವರು ಮನವಿ ಮಾಡಿದರು.

ಕಳೆದ ತಿಂಗಳು ಅಹಮದಾಬಾದ್–ಲಂಡನ್ ಏರ್ ಇಂಡಿಯಾ ವಿಮಾನ ಅಪಘಾತದ ಕುರಿತು ವಿಮಾನ ಅಪಘಾತ ತನಿಖಾ ಬ್ಯೂರೋ ನೀಡಿದ ವರದಿಯು ಪ್ರಾಥಮಿಕ ಸಂಶೋಧನೆಗಳನ್ನು ಆಧರಿಸಿದೆ ಅಂತಿಮ ವರದಿ ಬಿಡುಗಡೆಯಾಗುವವರೆಗೆ ಯಾರೂ ತೀರ್ಮಾನಗಳಿಗೆ ಬರಬಾರದು ಎಂದು ಕೋರಿದ್ದಾರೆ. ಇದರ ಬಗ್ಗೆ ನಾವು ಯಾವುದೇ ತೀರ್ಮಾನಗಳಿಗೆ ಧಾವಿಸಬಾರದು ಎಂದು




ನಾನು ಭಾವಿಸುತ್ತೇನೆ. ಇಡೀ ವಿಶ್ವದಲ್ಲೇ ಅತ್ಯಂತ ಅದ್ಭುತವಾದ ಪೈಲಟ್‌ಗಳು, ಸಿಬ್ಬಂದಿ ನಮ್ಮಲ್ಲಿದ್ದಾರೆ ಎಂದು ನಾನು ನಂಬುತ್ತೇನೆ. ದೇಶದ ಪೈಲಟ್‌ಗಳು, ಸಿಬ್ಬಂದಿ ಮಾಡುತ್ತಿರುವ ಎಲ್ಲಾ ಪ್ರಯತ್ನಗಳನ್ನು ನಾನು ಪ್ರಶಂಸಿಸಲೇಬೇಕು, ಅವರು ನಾಗರಿಕ ವಿಮಾನಯಾನದ ಬೆನ್ನೆಲುಬು. ಅವರು ನಾಗರಿಕ ವಿಮಾನಯಾನದ ಪ್ರಾಥಮಿಕ ಸಂಪನೂಲ. ನಾವು ಪೈಲಟ್‌ಗಳ ಕಲ್ಯಾಣ, ಯೋಗಕ್ಷೇಮದ ಬಗ್ಗೆಯೂ ಕಾಳಜಿ ವಹಿಸುತ್ತೇವೆ. ಆದ್ದರಿಂದ ಈ ಹಂತದಲ್ಲಿ ಯಾವುದೇ ತೀರ್ಮಾನಗಳಿಗೆ ಧಾವಿಸಬೇಡಿ ಮತ್ತು ಅಂತಿಮ ವರದಿಗಾಗಿ ಕಾಯೋಣ ಎಂದು ಅವರು ತಿಳಿಸಿದರು.

## ಜನನ ಪ್ರಮಾಣ ಹೆಚ್ಚಳಕ್ಕೆ ಶೀಘ್ರದಲ್ಲೇ ಚಂದ್ರಬಾಬು ನಾಯ್ಡು ಸರ್ಕಾರದಿಂದ ಹೊಸ ನೀತಿ

# ಜನಸಂಖ್ಯೆಯು ನಮ್ಮ ಪ್ರಬಲ ಆರ್ಥಿಕ ಸಂಪನ್ಮೂಲ

**ಅಮರಾವತಿ:** ದಕ್ಷಿಣ ಭಾರತದ ಕಡಿಮೆ ಜನನ ಪ್ರಮಾಣವು ಸಂಸತ್ತಿನಲ್ಲಿ ತನ್ನ ಪ್ರಾತಿನಿಧ್ಯದ ಮೇಲೆ ಪರಿಣಾಮ ಬೀರಬಹುದು ಎಂಬ ಕಳವಳ ವ್ಯಕ್ತಪಡಿಸಿರುವ ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು, ಹೆಚ್ಚು ಮಕ್ಕಳನ್ನು ಹೊಂದುವಂತೆ ಜನರನ್ನು ಪ್ರೋತ್ಸಾಹಿಸಲು ಸರ್ಕಾರ ಶೀಘ್ರದಲ್ಲೇ ಒಂದು ನೀತಿ ಆರಂಭಿಸಲಿದೆ ಎಂದು ಹೇಳಿದದ್ದಾರೆ. ಜನಸಂಖ್ಯಾ ಬೆಳವಣಿಗೆಯ ಕುರಿತು ನಾವು ಶೀಘ್ರದಲ್ಲೇ ದೃಢವಾದ ನೀತಿಯನ್ನು ಪ್ರಾರಂಭಿಸುತ್ತೇವೆ. ಜನಸಂಖ್ಯೆಯು ನಮ್ಮ ಪ್ರಬಲ ಆರ್ಥಿಕ ಸಂಪನ್ಮೂಲವಾಗಿದೆ. ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ದೇಶಗಳ ಮೇಲೆ ಜಗತ್ತು ಹೆಚ್ಚು ಅವಲಂಬಿತವಾಗಿದೆ ಎಂದು ವಿಶ್ವ ಜನಸಂಖ್ಯಾ ಶೃಂಗಸಭೆಯಲ್ಲಿ ಪ್ರಸ್ತಾಪಿಸಿದ್ದಾರೆ. ಭವಿಷ್ಯದಲ್ಲಿ ಮಾನವ ಸಂಪನ್ಮೂಲ ಬಿಕ್ಕಟ್ಟನ್ನು ತಪ್ಪಿಸಲು, ರಾಜ್ಯದಲ್ಲಿ ಫಲವತ್ತತೆ ದರ ಹೆಚ್ಚಾಗಬೇಕು. ಅವಿಭಕ್ತ ಕುಟುಂಬಗಳು ಕಣ್ಮರೆಯಾಗುತ್ತಿವೆ. ದಕ್ಷಿಣ ಭಾರತದಲ್ಲಿ ಕ್ಷೀಣಿಸುತ್ತಿರುವ ಜನಸಂಖ್ಯೆಯ ಬಗ್ಗೆ ಕಳವಳ ಹೆಚ್ಚುತ್ತಿದೆ. ಭವಿಷ್ಯದಲ್ಲಿ ಸಂಸತ್ ಸ್ಥಾನಗಳು ಹೆಚ್ಚಾಗಬಹುದಾದರೂ, ದಕ್ಷಿಣ ರಾಜ್ಯಗಳ ಪ್ರಾತಿನಿಧ್ಯ ಕಡಿಮೆಯಾಗಬಹುದು. ಜನಸಂಖ್ಯಾ ಬೆಳವಣಿಗೆ ಕಡಿಮೆಯಾಗುವುದರಿಂದ ಆರ್ಥಿಕ ಬೆಳವಣಿಗೆಗೆ ಅಡ್ಡಿಯಾಗುತ್ತದೆ ಎಂದು ಮುಖ್ಯಮಂತ್ರಿ ಕಳವಳ ವ್ಯಕ್ತಪಡಿಸಿದರು.



ಜೀವನ ವೆಚ್ಚ ಏರಿಕೆಯ ಪರಿಣಾಮವನ್ನು ಒಪ್ಪಿಕೊಂಡ ಅವರು, ದಂಪತಿಗಳಿಗೆ ಪ್ರೋತ್ಸಾಹ ನೀಡುವ ಯೋಜನೆಯನ್ನು ಸರ್ಕಾರ ಪರಿಚಯಿಸಲಿದೆ. ಕುಟುಂಬದ ಗಾತ್ರ ಹೆಚ್ಚಾದರೆ ಫಲಾನುಭವಿ ಕುಟುಂಬಗಳಿಗೆ ತಿಂಗಳಿಗೆ 25 ಕೆಜಿಯಿಂದ 50 ಕೆಜಿಗೆ ನೀಡಲಾಗುವ ಪಿಡಿಎಸ್ ಅಕ್ಕಿಯ ಪ್ರಮಾಣವನ್ನು ಹೆಚ್ಚಿಸುವುದು ಕಾರ್ಡ್‌ಗಳಲ್ಲಿರುವ ಪ್ರಸ್ತಾಪಗಳಲ್ಲಿ ಒಂದಾಗಿದೆ. ಮಹಿಳಾ ಸರ್ಕಾರಿ ಉದ್ಯೋಗಿಗಳನ್ನು ಪ್ರೋತ್ಸಾಹಿಸುವ ಮತ್ತೊಂದು ಪ್ರಸ್ತಾಪವೆಂದರೆ ಸರ್ಕಾರಿ ಕಚೇರಿಗಳಲ್ಲಿ ಮಕ್ಕಳ ಆರೈಕೆ ಕೇಂದ್ರಗಳನ್ನು ಸ್ಥಾಪಿಸುವುದು ಎಂದು ಘೋಷಣೆ ಮಾಡಿದರು. ಒಂದು ಕಾಲದಲ್ಲಿ ಜನಸಂಖ್ಯೆಯನ್ನು ಒಂದು ಪ್ರಮುಖ ಸಮಸ್ಯೆಯಾಗಿ ನೋಡಲಾಗುತ್ತಿತ್ತು. 2004ಕ್ಕಿಂತ ಮೊದಲು, ನಾನು ಮುಖ್ಯಮಂತ್ರಿಯಾಗಿದ್ದಾಗ, ಕುಟುಂಬ ಯೋಜನೆಯನ್ನು ಪ್ರೋತ್ಸಾಹಿಸಿದ್ದೆ. ಎರಡಕ್ಕಿಂತ ಹೆಚ್ಚು ಮಕ್ಕಳಿರುವವರು ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಸ್ಪರ್ಧಿಸುವುದನ್ನು ಅನರ್ಹಗೊಳಿಸುವ ಕಾನೂನನ್ನು ನಾವು ತಂದಿದ್ದೇವೆ.

ಆದರೆ ಇಂದು, ಎರಡಕ್ಕಿಂತ ಹೆಚ್ಚು ಮಕ್ಕಳಿರುವವರು ಸ್ಪರ್ಧಿಸಲು

### ಹೆಚ್ಚಿನ ಮಕ್ಕಳನ್ನು ಹೊಂದಲು ಪ್ರೋತ್ಸಾಹ

**ಪ್ರಸ್ತಾವಿತ ಜನಸಂಖ್ಯಾ ಬೆಳವಣಿಗೆಯ ನೀತಿಯ ಬಗ್ಗೆ ಟಿಡಿಪಿ ನಾಯಕ ಮತ್ತು ಎನ್‌ಡಿಎ ಮಿತ್ರ ಪಕ್ಷ ಮಾತನಾಡುತ್ತಿರುವುದು ಇದೇ ಮೊದಲಲ್ಲ, ಅಕ್ಟೋಬರ್ 2024ರಲ್ಲಿ ಆಂಧ್ರದ ಜನಸಂಖ್ಯೆಯ ಪರಿಣಾಮಗಳ ವಿರುದ್ಧ ಎಚ್ಚರಿಕೆ ನೀಡಿದ್ದ ಅವರು, ಕುಟುಂಬಗಳು ಹೆಚ್ಚಿನ ಮಕ್ಕಳನ್ನು ಹೊಂದಲು ಪ್ರೋತ್ಸಾಹಿಸಲು ತಮ್ಮ ಸರ್ಕಾರವು ಶಾಸನವನ್ನು ಜಾರಿಗೆ ತರುವ ಬಗ್ಗೆ ಚಿಂತಿಸುತ್ತಿದೆ ಎಂದು ಭರವಸೆ ನೀಡಿದ್ದರು.**

ಅವಕಾಶ ನೀಡುವಂತೆ ಕಾನೂನನ್ನು ತಿದ್ದುಪಡಿ ಮಾಡುವ ಅವಶ್ಯಕತೆಯಿದೆ ಎಂದು ಅಭಿಪ್ರಾಯಪಟ್ಟರು. ಜಾಗತಿಕ ಜನಸಂಖ್ಯೆ ಹೆಚ್ಚುತ್ತಿರುವಾಗ, ಜನನ ಪ್ರಮಾಣ ಕಡಿಮೆಯಾಗುತ್ತಿದೆ, ಯುವಜನರ ಜನಸಂಖ್ಯೆ ಕುಗ್ಗುತ್ತಿರುವಾಗ ವೃದ್ಧರ ಸಂಖ್ಯೆ ಹೆಚ್ಚುತ್ತಿದೆ ಎಂದು ಅವರು ಕಳವಳ ವ್ಯಕ್ತಪಡಿಸಿದರು. ಶ್ರೀಮಂತ ರಾಷ್ಟ್ರಗಳಲ್ಲಿ ಕಡಿಮೆ ಜನನ ದರಗಳು ರೂಢಿಯಾಗುತ್ತಿವೆ. ದರ 2.1ಕ್ಕಿಂತ ಕಡಿಮೆಯಾದಾಗ ಜನಸಂಖ್ಯೆ ಕುಸಿಯಲು ಪ್ರಾರಂಭಿಸುತ್ತದೆ. ಭಾರತದಲ್ಲಿ

**ವೃದ್ಧರ ಸಂಖ್ಯೆ ಹೆಚ್ಚುತ್ತಿದೆ**

> **ಹಿಂದೆ ರಾಜ್ಯ ಸರ್ಕಾರವು ಸಂಯುಕ್ತ ಆಂಧ್ರಪ್ರದೇಶದಲ್ಲಿ ಜನಸಂಖ್ಯಾ ನಿಯಂತ್ರಣಕ್ಕಾಗಿ ಆಂದೋಲನವನ್ನು ಪ್ರಾರಂಭಿಸಿತ್ತು, ಆದರೆ ಇಂದಿನ ಅಗತ್ಯವೆಂದರೆ ಜನಸಂಖ್ಯಾ ನಿರ್ವಹಣೆ, ಭಾರತವು ತನ್ನ ಜನಸಂಖ್ಯೆಯಿಂದಾಗಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳೊಂದಿಗೆ ಸ್ಪರ್ಧಿಸುವ ಸಾಮರ್ಥ್ಯ ಹೊಂದಿದೆ**
>
> **– ಚಂದ್ರಬಾಬು ನಾಯ್ಡು**
> **ಆಂಧ್ರಪ್ರದೇಶದ ಮುಖ್ಯಮಂತ್ರಿ**

ಬಿಹಾರ 3.0, ಮೇಘಾಲಯ 2.9, ಯುಪಿ 2.4, ಜಾರ್ಖಂಡ್ 2.3, ಮಣಿಪುರ 2.2, ತಮಿಳುನಾಡು 1.8, ತೆಲಂಗಾಣ 1.8, ಕೇರಳ 1.8, ಕರ್ನಾಟಕ 1.7, ಆಂಧ್ರಪ್ರದೇಶ 1.7 ರಷ್ಟಿದೆ, ಜನಸಂಖ್ಯಾ ಸಮತೋಲನವನ್ನು ಕಾಪಾಡಿಕೊಳ್ಳಲು, 2.1 ದರ ಅತ್ಯಗತ್ಯ ಎಂದು ಪ್ರತಿಪಾದಿಸಿದರು. ಕ್ಷೇತ್ರ ಪುನರ್‌ವಿಂಗಡಣೆಯ ನಂತರ ಹೆಚ್ಚಿನ ಸಂಸದರನ್ನು ಪಡೆಯಲು ಹೆಚ್ಚಿನ ಜನಸಂಖ್ಯೆಯು ಮಾನದಂಡವಾಗಿರುವುದರಿಂದ ದಕ್ಷಿಣ ರಾಜ್ಯದ ಮತ್ತೊಬ್ಬ ಸಿಎಂ ಎಂ.ಕೆ.ಸ್ಟಾಲಿನ್ ಕೂಡ ಜನರು ಹೆಚ್ಚು ಮಕ್ಕಳನ್ನು ಹೊಂದಬೇಕೆಂದು ಒತ್ತಾಯಿಸಿದ್ದಾರೆ.

## ಮಿನಿ ನ್ಯೂಸ್

### ಚಿರಾಗ್ ಪಾಸ್ವಾನ್‌ಗೆ ಜೀವ ಬೆದರಿಕೆ

**ಪಾಟ್ನಾ:** ಬಿಹಾರ ವಿಧಾನಸಭಾ ಚುನಾವಣೆಗೂ ಮುನ್ನ ಕೇಂದ್ರ ಸಚಿವ, ಲೋಕ ಜನಶಕ್ತಿ ಪಕ್ಷದ ಅಧ್ಯಕ್ಷ ಚಿರಾಗ್ ಪಾಸ್ವಾನ್ ಅವರಿಗೆ ಜೀವ ಬೆದರಿಕೆ ಹಾಕಲಾಗಿದೆ ಎಂದು ಪಕ್ಷದ ವಕ್ತಾರ ರಾಜೇಶ್ ಭಟ್ ತಿಳಿಸಿದ್ದಾರೆ. ಜೀವ ಬೆದರಿಕೆ ಹಿನ್ನಲೆ ರಾಜೇಶ್ ಭಟ್ ಪಾಟ್ನಾದ ಸೈಬರ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಟೈಗರ್ ಮೆರಾಜ್ ಇಡಿಸಿ ಎಂಬ ಹೆಸರಿನ ಇನ್‌ಸ್ಟಾಗ್ರಾಂ ಖಾತೆಯಿಂದ ಚಿರಾಗ್ ಪಾಸ್ವಾನ್‌ಗೆ ಜೀವ ಬೆದರಿಕೆ ಬಂದಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಪಾಸ್ವಾನ್ ಅವರ ಜನಪ್ರಿಯತೆ ಹೆಚ್ಚುತ್ತಿರುವ ಕಾರಣ ಈ ಬೆದರಿಕೆ ಹಾಕಲಾಗಿದೆ. ಈ ಕೃತ್ಯ ಕ್ರಿಮಿನಲ್ ಉದ್ದೇಶ, ಕಾನೂನುಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತದೆ.

ವಿಷಯದ ಗಂಭೀರತೆಯನ್ನು ತಕ್ಷಣವೇ ಅರಿತು ತ್ವರಿತ ಕ್ರಮ ಕೈಗೊಳ್ಳಬೇಕು. ತಕ್ಷಣವೇ ಜೀವ ಬೆದರಿಕೆ ಹಾಕಿದ ಆರೋಪಿಯನ್ನು ಬಂಧಿಸಿ ಕಠಿಣ ಶಿಕ್ಷೆ ನೀಡಿ ಎಂದು ರಾಜೇಶ್ ಭಟ್ ದೂರಿನಲ್ಲಿ ತಿಳಿಸಿದ್ದಾರೆ. ಈ ಕುರಿತು ಮಾತನಾಡಿದ ಸೈಬರ್ ಡಿಸಿಪಿ ನಿತೀಶ್‌ಚಂದ್ರ ಧರಿಯಾ, ಜುಲೈ 11ರ ರಾತ್ರಿ 9 ಗಂಟೆ ಸುಮಾರಿಗೆ ಕೇಂದ್ರ ಸಚಿವ ಚಿರಾಗ್ ಪಾಸ್ವಾನ್ ಅವರಿಗೆ ಸಾಮಾಜಿಕ ಮಾಧ್ಯಮದ ಮೂಲಕ ಜೀವ ಬೆದರಿಕೆ ಹಾಕಲಾಗಿದೆ. ಪಾಟ್ನಾ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದ್ದಾರೆ.

### ಐಐಎಂ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ

**ಕೋಲ್ಕತ್ತಾ:** ಕೋಲ್ಕತ್ತಾದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿ ಮೇಲೆ ವಿದ್ಯಾರ್ಥಿಯೊಬ್ಬ ಅತ್ಯಾಚಾರ ಎಸಗಿರುವ ಘಟನೆ ನಡೆದಿದೆ. ಹರಿದೇವಪುರ ಪೊಲೀಸ್ ಠಾಣೆಯಲ್ಲಿ ವಿದ್ಯಾರ್ಥಿನಿ ದಾಖಲಿಸಿದ ಎಫ್‌ಐಆರ್ ಆಧಾರದ ಮೇಲೆ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಐಐಎಂ–ಕಲ್ಕತ್ತಾದ ಬಾಲಕರ ಹಾಸ್ಟೆಲ್ ಒಳಗೆ ಈ ಘಟನೆ ನಡೆದಿದೆ.

ಸಂತ್ರಸ್ತ ಮಹಿಳೆ ನೀಡಿರುವ ದೂರಿನಲ್ಲಿ ತನ್ನನ್ನು ಕೌನ್ಸೆಲಿಂಗ್ ಅವಧಿಗಾಗಿ ಹಾಸ್ಟೆಲ್‌ಗೆ ಕರೆಸಲಾಗಿತು.ನಂತರ ಹಾಸ್ಟೆಲ್‌ನಲ್ಲಿ ಮಾದಕದ್ರವ್ಯ ಬೆರೆಸಿದ ಪಾನೀಯ ಸೇವಿಸಿ ಪ್ರಜ್ಞಾಹೀನಳಾದೆ. ಪ್ರಜ್ಞೆ ಮರಳಿದ ನಂತರ ತನ್ನ ಮೇಲೆ ಅತ್ಯಾಚಾರ ನಡೆದಿರುವುದು ಗಮನಕ್ಕೆ ಬಂದಿತು ಎಂದು ತಿಳಿಸಿದ್ದಾರೆ. ಈ ವಿಷಯವನ್ನು ಯಾರಿಗಾದರೂ ಬಹಿರಂಗಪಡಿಸಿದರೆ ಭೀಕರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಆರೋಪಿ ಬೆದರಿಕೆ ಹಾಕಿದ್ದಾನೆ ಎಂದು ಆಕೆ ಆರೋಪಿಸಿದ್ದಾರೆಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಆರೋಪಿ ವಿದ್ಯಾರ್ಥಿಯನ್ನು ಬಂಧಿಸಿ ಹೆಚ್ಚಿನ ತನಿಖೆಗೆ ಒಳಪಡಿಸಲಾಗಿದೆ. ಕೋಲ್ಕತ್ತಾದ ಕಾನೂನು ಕಾಲೇಜಿನೊಳಗೆ ವಿದ್ಯಾರ್ಥಿನಿಯೊಬ್ಬಳ ಮೇಲೆ ಸಾಮೂಹಿಕ ಅತ್ಯಾಚಾರ ನಡೆದ ಸುಮಾರು ಹದಿನೈದು ದಿನಗಳ ನಂತರ ಈ ಘಟನೆ ನಡೆದಿದೆ.

### ಭಾರತದ ಕಾನೂನು ವ್ಯವಸ್ಥೆಯ ವಿಶಿಷ್ಟ ಸವಾಲುಗಳು: ಗವಾಯಿ ಕಳವಳ

**ಹೈದರಾಬಾದ್:** ಭಾರತದ ಕಾನೂನು ವ್ಯವಸ್ಥೆಯು ಸದ್ಯ ವಿಶಿಷ್ಟವಾದ ಸವಾಲನ್ನು ಎದುರಿಸುತ್ತಿದೆ, ಕೆಲ ಪ್ರಕರಣಗಳು ದಶಕಗಳಿಗೂ ಹೆಚ್ಚು ಕಾಲ ವಿಚಾರಣೆ ನಡೆಯುತ್ತಿವೆ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಶನಿವಾರ ಹೇಳಿದ್ದಾರೆ. ಹೈದರಾಬಾದ್‌ನ ನಲ್ಸಾರ್ ಕಾನೂನು ವಿಶ್ವವಿದ್ಯಾಲಯದಲ್ಲಿ ಘಟಿಕೋತ್ಸವ ಭಾಷಣ ಮಾಡಿ ಅವರು ಮಾತನಾಡಿದರು. ಕೆಲವೊಂದು ಪ್ರಕರಣಗಳಲ್ಲಿ ವಿಚಾರಣಾಧೀನ ಕೈದಿ ಹಲವು ವರ್ಷಗಳ ಸೆರೆವಾಸಗಳ ನಂತರ ನಿರಪರಾಧಿ ಎಂದು ಸಾಬೀತಾಗುತ್ತದೆ. ನಾವು ಇಂದು ಎದುರಿಸುತ್ತಿರುವ ಇಂಥ ಹಲವು ಸಮಸ್ಯೆಗಳನ್ನು ಪರಿಹರಿಸಲು ನಮ್ಮ ಪ್ರತಿಭೆ ನೆರವಾಗಲಿದೆ ಎಂದಿದ್ದಾರೆ.

ನಿರಪರಾಧಿ ತಪ್ಪಿತಸ್ಥನಾಗುತ್ತಾನೆ, ತಪ್ಪಿತಸ್ಥ ಮುಕ್ತವಾಗಿ ಓಡಾಡಿಕೊಂಡಿರುತ್ತಾನೆ. ನಮ್ಮ ಅವ್ಯವಸ್ಥಿತ ಕಾನೂನಿನ ವಿರೋಧಾಭಾಸಗಳಿವು. ನಮ್ಮ ಕಾನೂನು ವ್ಯವಸ್ಥೆಯನ್ನು ಸರಿಪಡಿಸಬೇಕಾದ ಜರೂರು ಈಗ ಎದುರಾಗಿದೆ. ಈ ಸವಾಲಿನ ಕುರಿತು ನಮ್ಮ ನಾಗರಿಕರು ಧ್ವನಿ ಎತ್ತಲಿದ್ದಾರೆ ಎಂಬ ಆಶಾಭಾವ ನನ್ನದು ಎಂಬ ಅಮೆರಿಕದ ಮುಖ್ಯ ನ್ಯಾಯಮೂರ್ತಿ ಜೆಡ್ ಎಸ್. ರಾಕಾಫ್ ಅವರ ಮಾತುಗಳನ್ನು ನ್ಯಾ. ಗವಾಯಿ ಉಲ್ಲೇಖಿಸಿದರು. ಕಾನೂನು ಪದವಿ ಪಡೆದ ನಮ್ಮ ವಿದ್ಯಾರ್ಥಿಗಳು ಸಮಗ್ರತೆಗಾಗಿ ಒಬ್ಬ ಉತ್ತಮ ಮಾರ್ಗದರ್ಶಕನನ್ನು ಹುಡುಕಿಕೊಳ್ಳಬೇಕೇ ಹೊರತು ತಮ್ಮ ಶಕ್ತಿ ಪ್ರದರ್ಶನಕ್ಕಲ್ಲ. ಹಾಗೆಯೇ ಕುಟುಂಬದವರ ಮೇಲೆ ಆರ್ಥಿಕ ಒತ್ತಡ ಸೃಷ್ಟಿಸುವ ಬದಲು, ಶಿಷ್ಯವೇತನ ಬಳಸಿಕೊಂಡು ವಿದೇಶಗಳಿಗೆ ಹೋಗಿ ಕಲಿಯಿರಿ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದ್ದಾರೆ.

### ಡ್ರಗ್ಸ್ ಕಳ್ಳಸಾಗಣೆ ಪತ್ತೆ: 112 ಕೋಟಿ ಮೌಲ್ಯದ ಎಂಡಿಎಂಎ ವಶ


**ಐಜ್ವಾಲ್:** ಮ್ಯಾನ್ಮಾರ್ ಗಡಿ ಬಳಿ ಮಿಜೋರಾಂನ ಚಂಫೈ ಜಿಲ್ಲೆಯಲ್ಲಿ 112.40 ಕೋಟಿ ಮೌಲ್ಯದ ಎಂಡಿಎಂಎಯನ್ನು ಅಸ್ಸಾಂ ರೈಫಲ್ಸ್ ಸಿಬ್ಬಂದಿ ಶನಿವಾರ ವಶಪಡಿಸಿಕೊಂಡಿದೆ. ಜೋಖಾಡ್ತಾರ್ ಗ್ರಾಮದಲ್ಲಿ ಅಸ್ಸಾಂ ರೈಫಲ್ಸ್ ಸಿಬ್ಬಂದಿ ಗಸ್ತು ತಿರುಗುತ್ತಿದ್ದಾಗ ವೇಳೆ ಇಬ್ಬರು ಭಾರೀ ಗಾತ್ರದ ಬ್ಯಾಗ್‌ಗಳನ್ನು ಹೊತ್ತೊಯ್ಯುತ್ತಿದ್ದರು. ಈ ವೇಳೆ ಅನುಮಾನಗೊಂಡು ಪರಿಶೀಲನೆ ನಡೆಸಿದಾಗ ಈ ಪ್ರಕರಣ ಬೆಳಕಿಗೆ ಬಂದಿದೆ ಎಂದು ಅರೆಸೈನಿಕ ಪಡೆ ಪ್ರಕಟಣೆಯಲ್ಲಿ ತಿಳಿಸಿದೆ. ಅಸ್ಸಾಂ ರೈಫಲ್ಸ್ ಸಿಬ್ಬಂದಿ 3.33 ಲಕ್ಷ ನಿಷೇಧಿತ ಮಾದಕ ಪದಾರ್ಥ ಮೀಥೈಲ್ ಡಯಾಕ್ಸಿ ಮೆಥಾಂಫೆಟಮೈನ್ ಮಾತ್ರೆಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ಅದು ಹೇಳಿದೆ.



ಆರೋಪಿಗಳು ಇಂಡೋ–ಮ್ಯಾನ್ಮಾರ್ ಗಡಿಯಲ್ಲಿ ಹರಿಯುವ ಟಿಯಾವು ನದಿಗೆ ಹಾರಿ ಮ್ಯಾನ್ಮಾರ್‌ಗೆ ಪರಾರಿಯಾಗಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಆರೋಪಿಗಳು ಚಂಫೈ ಜಿಲ್ಲೆಯಲ್ಲಿ ಮಾದಕ ವಸ್ತುಗಳನ್ನು ವಿತರಿಸಲು ತಂದಿದ್ದರು ಎಂದು ಶಂಕಿಸಲಾಗಿದೆ. ವಶಪಡಿಸಿಕೊಂಡ ಮಾದಕ ವಸ್ತುಗಳನ್ನು ಮಿಜೋರಾಂ ಪೊಲೀಸರಿಗೆ ಹಸ್ತಾಂತರಿಸಲಾಗಿದೆ. ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

### ಜೀಪ್ ಅಪಘಾತದಲ್ಲಿ ಇಬ್ಬರು ಸಾವು, ಆರು ಮಂದಿಗೆ ಗಾಯ


**ಕಠ್ಮಂಡು:** ಜೀಪೊಂದು ಕಣಿವೆಗೆ ಉರುಳಿ ಬಿದ್ದ ಪರಿಣಾಮ ಇಬ್ಬರು ಮೃತಪಟ್ಟು, ಬಾಲಕಿ ಸೇರಿದಂತೆ ಆರು ಜನರು ಗಾಯಗೊಂಡಿರುವ ಘಟನೆ ನೇಪಾಳದ ಸುದೂರಪಶ್ಚಿಮ ಪ್ರಾಂತ್ಯದಲ್ಲಿ ಸಂಭವಿಸಿದೆ ಎಂದು ಮಾಧ್ಯಮಗಳು ಶನಿವಾರ ವರದಿ ಮಾಡಿವೆ. ಜೀಪ್ ಚಾಲಕ ಸಂತೋಷ್ ಬಹದ್ದೂರ್ ರಾಣಾ (24) ಮತ್ತು ಕಿರಣ್ ಬೊಹೊರಾ (32) ಮೃತರು. ಅಪಘಾತಕ್ಕೆ ಕಾರಣವೇನು ಎಂಬ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.



# ರಾಮ್ ಚರಣ್ ಸಿನಿಮಾದಲ್ಲಿ ಶಿವಣ್ಣ ಖಡಕ್ ಲುಕ್

ಗ್ಲೋಬಲ್ ಸ್ಟಾರ್ ರಾಮ್‌ಚರಣ್ ನಾಯಕನಾಗಿ ನಟಿಸುತ್ತಿರುವ ಪೆದ್ದಿ ಸಿನಿಮಾತಂಡ ಶಿವಣ್ಣ ಬರ್ತ್‌ಡೇಗೆ ಶುಭ ಕೋರಿದೆ. ಶಿವಣ್ಣ ಅವರ ಫಸ್ಟ್ ಲುಕ್ ಅನ್ನೂ ಬಿಡುಗಡೆ ಮಾಡಲಾಗಿದೆ. ಗೌರ್ ನಾಯ್ಡು ಪಾತ್ರದಲ್ಲಿ ಹ್ಯಾಟ್ರಿಕ್ ಹೀರೋ ನಟಿಸುತ್ತಿದ್ದು, ಉಗ್ರ ನೋಟ, ದಪ್ಪ ಮೀಸೆ ಮತ್ತು ರಗಡ್ ಆಗಿ ಶಿವಣ್ಣ ಕಾಣಿಸಿಕೊಂಡಿದ್ದಾರೆ. ಪೆದ್ದಿ ಸಿನಿಮಾದಲ್ಲಿ ಶಿವರಾಜ್ ಕುಮಾರ್ ಪವರ್ ಫುಲ್ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ.

ಉಪ್ಪೇನ ನಿರ್ದೇಶಕ ಬುಚ್ಚಿಬಾಬು ಸನಾ ನಿರ್ದೇಶನ ಪೆದ್ದಿ ಸ್ಪೋರ್ಟ್ಸ್ ಆಕ್ಷನ್ ಡ್ರಾಮಾ ಕಥಾಹಂದರವೊಂದಿದೆ. ರಾಮ್ ಚರಣ್‌ಗೆ ಜಾನ್ವಿ ಕಪೂರ್ ನಾಯಕಿಯಾಗಿ ನಟಿಸಿದ್ದಾರೆ. ಜಗಪತಿ ಬಾಬು ಮತ್ತು ದಿವೇಂದು ಶರ್ಮಾ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಈ ಚಿತ್ರಕ್ಕೆ ಎ ಆರ್ ರೆಹಮಾನ್ ಸಂಗೀತ ನೀಡುತ್ತಿದ್ದು, ವೆಂಕಟ ಸತೀಶ್ ಕಿಲಾರು ಹಣ ಹಾಕುತ್ತಿದ್ದಾರೆ. ಮೈತ್ರಿ ಮೂವೀ ಮೇಕರ್ಸ್ ಮತ್ತು ಸುಕುಮಾರ್ ರೈಟಿಂಗ್ಸ್ ನಿರ್ಮಾಣದಲ್ಲಿ ಸಾಥ್ ನೀಡಿದೆ. ಆರ್. ರತ್ನವೇಲು ಅವರು ಛಾಯಾಗ್ರಹಣ ಮಾಡುತ್ತಿದ್ದಾರೆ. ಸದ್ಯ ಚಿತ್ರೀಕರಣ ಭರದಿಂದ ಸಾಗುತ್ತಿದೆ.



# ವೃತ್ತಿ ಜೀವನದ ಉತ್ತುಂಗದಲ್ಲಿರುವಾಗ ಇದೆಂಥಾ ನಿರ್ಧಾರ

ವೃತ್ತಿ ಜೀವನ ಉತ್ತುಂಗದಲ್ಲಿರುವಾಗ ಎಲ್ಲರೂ ಹೆಚ್ಚು ಎಚ್ಚರಿಕೆ ವಹಿಸುತ್ತಾರೆ. ಸಿನಿಮಾ ಸೆಲೆಬ್ರಿಟಿಗಳು ತಾವು ಒಪ್ಪಿಕೊಳ್ಳುವ ಚಿತ್ರದ ಬಗ್ಗೆ ಹೆಚ್ಚು ಗಮನ ಹರಿಸುತ್ತಾರೆ. ಈಗ ರಶ್ಮಿಕಾ ಮಂದಣ್ಣ ಅವರು ಇದೆಲ್ಲ ಬದಿಗಿಟ್ಟು ಒಂದು ದಿಟ್ಟ ನಿರ್ಧಾರ ತೆಗೆದುಕೊಂಡಿದ್ದಾರೆ. ಇದಕ್ಕೆ ಮೆಚ್ಚುಗೆ ಸಿಕ್ಕಿದೆ. ಭಾರತೀಯ ಚಿತ್ರರಂಗದಲ್ಲಿ ರಶ್ಮಿಕಾ ಮಂದಣ್ಣ ಅವರು ತಮ್ಮದೇ ಸಾಮ್ರಾಜ್ಯ ಸ್ಥಾಪಿಸಿಕೊಂಡಿದ್ದಾರೆ ಎಂದರೂ ತಪ್ಪಾಗಲಾರದು. ಅವರು ಹಲವು ಸೂಪರ್ ಹಿಟ್ ಚಿತ್ರಗಳನ್ನು ನೀಡಿ ಪ್ಯಾನ್ ಇಂಡಿಯಾ ನಟಿ ಆಗಿದ್ದಾರೆ. ಈಗ ಅವರು ವೃತ್ತಿ ಜೀವನದಲ್ಲಿ ಒಂದು ದಿಟ್ಟ ನಿರ್ಧಾರ ತೆಗೆದುಕೊಂಡಿದ್ದಾರೆ. ರಶ್ಮಿಕಾ ಮಂದಣ್ಣ ಅವರು ಸಿನಿಮಾದಲ್ಲಿ ನಟಿಸುತ್ತಿದ್ದಾರೆ ಎಂದು ವರದಿ ಆಗಿದೆ. ಈ ಚಿತ್ರದಲ್ಲಿ ಈಗಾಗಲೇ ದೀಪಿಕಾ ಪಡುಕೋಣೆ, ಮೃಣಾಲ್ ಠಾಕೂರ್ ಅವರು ಸ್ಥಾನ ಪಡೆದಾಗಿದೆ. ಹೀಗಿರುವಾಗ ರಶ್ಮಿಕಾಗೇನು ಕೆಲಸ ಎಂಬ ಪ್ರಶ್ನೆ ಮೂಡೋದು ಸಹಜ. ಇದಕ್ಕೆ ಉತ್ತರ ಸಿಕ್ಕಿದೆ. ರಶ್ಮಿಕಾ ಮಂದಣ್ಣ ಅವರು ಈ ಚಿತ್ರದಲ್ಲಿ ನಾಯಕಿ ಅಲ್ಲ, ಬದಲಿಗೆ ಅವರದ್ದು ನೆಗೆಟಿವ್ ಶೇಡ್‌ನ ಪಾತ್ರ ಎಂದು ಹೇಳಲಾಗುತ್ತಿದೆ. ಇದನ್ನು ಕೇಳಿ ಅನೇಕರಿಗೆ ಅಚ್ಚರಿ ಆಗಿದೆ. ರಶ್ಮಿಕಾ ಅವರ ವೃತ್ತಿ ಜೀವನ ಉತ್ತುಂಗದಲ್ಲಿರುವಾಗ ಇಂಥ ನಿರ್ಧಾರ ತೆಗೆದುಕೊಂಡಿದ್ದಾರೆ. ನೆಗೆಟಿವ್ ಪಾತ್ರ ಮಾಡಿದರೆ ಅವರ ವೃತ್ತಿ ಜೀವನದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ ಎಂಬುದು ಒಂದು ನಂಬಿಕೆ ಅಷ್ಟೇ. ಈ ಮೊದಲು ರಮ್ಯಾ ಕೃಷ್ಣ ಅವರು 'ನೀಲಾಂಬರಿ' ಸಿನಿಮಾದಲ್ಲಿ ನೆಗೆಟಿವ್ ಪಾತ್ರ ಮಾಡಿ ಭೇಷ್ ಎನಿಸಿಕೊಂಡರು. ಈಗ ರಶ್ಮಿಕಾಗೆ ಅಂಥದ್ದೊಂದು ಅವಕಾಶ ಸಿಕ್ಕಿದೆ.

## ಅವರದ್ದು ನೆಗೆಟಿವ್ ಶೇಡ್‌ನ ಪಾತ್ರ

# ಕರೀನಾ ಕಪೂರ್ ಮೇಲೂ ದಾಳಿ; ದಂಪತಿಗೆ ಕಷ್ಟಕಾಲ

ಸೈಫ್ ಅಲಿ ಖಾನ್ ಅವರ ಮನೆ ಮೇಲೆ ನಡೆದ ದಾಳಿಯಲ್ಲಿ ಕರೀನಾ ಕಪೂರ್ ಕೂಡ ಗುರಿಯಾಗಿದ್ದರು ಎಂಬ ಆಘಾತಕಾರಿ ವಿಷಯ ಬಹಿರಂಗಗೊಂಡಿದೆ. ರೋನಿತ್ ರಾಯ್ ಅವರ ಮಾಹಿತಿಯ ಪ್ರಕಾರ, ಕರೀನಾ ಅವರ ಕಾರಿಗೆ ದಾಳಿ ನಡೆದಿತ್ತು. ಈ ದಂಪತಿ ಈ ಘಟನೆಯಿಂದ ತೀವ್ರ ಆಘಾತಕ್ಕೊಳಗಾಗಿದ್ದಾರೆ. ಸೈಫ್ ಅವರ ಮನೆಯ ಭದ್ರತೆಯನ್ನು ಬಿಗಿಗೊಳಿಸಲಾಗಿದೆ.

ಸೈಫ್ ಅಲಿ ಖಾನ್ ಅವರ ಮನೆಗೆ ನುಗ್ಗಿ ವ್ಯಕ್ತಿಯೋರ್ವ ಹಲ್ಲೆ ಮಾಡಿದ ಸುದ್ದಿ ಇನ್ನೂ ಹಸಿಯಾಗೇ ಇದೆ. ಹೀಗಿರುವಾಗಲೇ ಒಂದು ಶಾಕಿಂಗ್ ವಿಚಾರ ಹೊರ ಬಿದ್ದಿದೆ. ಸೈಫ್ ಮಾತ್ರವಲ್ಲ ಕರೀನಾ ಕಪೂರ್ ಮೇಲೂ ದಾಳಿ ಆಗಿತ್ತು ಎಂಬ ವಿಚಾರ ಈಗ ರಿವೀಲ್ ಆಗಿದೆ. ಈ ವಿಚಾರವನ್ನು ಕರೀನಾ ಕುಟುಂಬದ ಆಪ್ತ ರೋನಿತ್ ರಾಯ್ ಹೇಳಿದ್ದಾರೆ. ಈ ದಂಪತಿಗೆ ಕಷ್ಟಕಾಲ ಎಂದು ಅನೇಕರು ಹೇಳಿದ್ದಾರೆ. ಈ ವರ್ಷ ಜನವರಿ 16ರಂದು ಸೈಫ್ ಅಲಿ ಖಾನ್ ಅವರು ಮುಂಬೈ ನಿವಾಸದಲ್ಲಿ ಮಲಗಿದ್ದರು. ಈ ವೇಳೆ ಬಂದ ಅನಾಮಧೇಯ ವ್ಯಕ್ತಿ ಸೈಫ್ ಮೇಲೆ ಹಲ್ಲೆ ಮಾಡಿದ. ಅಲ್ಲದೆ, ಚಾಕುವಿನಿಂದ ಇರಿದ. ಇದರಿಂದ ಸೈಫ್ ಸಾಕಷ್ಟು ರಕ್ತಸ್ರಾವ ಎದುರಿಸಿದರು. ಸೈಫ್ ಅಲಿ ಖಾನ್ ಕೆಲವೇ ದಿನಗಳಲ್ಲಿ ಆಸ್ಪತ್ರೆಯಿಂದ ಮರಳಿದರು. ಈ ರೀತಿ ಮರಳುವಾಗ ಕರೀನಾ ಮೇಲೆ ದಾಳಿಯ ಪ್ರಯತ್ನ ನಡೆದಿತ್ತು. 'ಸೈಫ್ ಅಲಿ ಖಾನ್ ಆಸ್ಪತ್ರೆಯಿಂದ ಮನೆಗೆ ಬರುವವರಿದ್ದರು. ಈ ವೇಳೆ ಸಾಕಷ್ಟು ಜನರು ಸೇರಿದ್ದರು.





# ವೈಟ್ ಡ್ರೆಸ್‌ನಲ್ಲಿ ಚೈತ್ರಾ ಬ್ಯೂಟ್

ಕನ್ನಡದ 'ಟೋಬಿ' ನಟಿ ಚೈತ್ರಾ ಆಚಾರ್ ಸದಾ ಒಂದಲ್ಲಾ ಒಂದು ಫೋಟೋ ಶೂಟ್‌ನಲ್ಲಿ ಸದ್ದು ಮಾಡುತ್ತಲೇ ಇದ್ದಾರೆ. ಟೀಕೆ ಮಾಡೋರಿಗೆ ಡೋಂಟ್ ಕೇರ್ ಅನ್ನುತ್ತಲೇ ಹೊಸ ಹೊಸ ಹಾಟ್ ಅವತಾರದಲ್ಲಿ ಕಾಣಿಸಿಕೊಳ್ತಿದ್ದಾರೆ. ಇದೀಗ ಬಿಳಿ ಬಣ್ಣದ ಬನಿಯನ್ ಹಾಗೂ ಬ್ರೌನ್ ಜೀನ್ಸ್ ಉಡುಗೆ ತೊಟ್ಟು ಬಿಳಿ ಒಳ ಉಡುಪು ಕಾಣುವಂತ ಫೋಟೋಗಳನ್ನ ತಮ್ಮ ಇನ್‌ಸ್ಟಾ ಖಾತೆಯಲ್ಲಿ ಹಂಚಿಕೊಂಡಿದ್ದು, ಪಡ್ಡೆಗಳ ಹೃದಯಕ್ಕೆ ಬೆಂಕಿಯಿಟ್ಟಿದ್ದಾರೆ. ಪ್ರತಿ ಫೋಟೋದಲ್ಲೂ ಚೈತ್ರಾರ ವಿಭಿನ್ನವಾದ ಭಾವುಗಳು ವ್ಯಕ್ತವಾಗಿವೆ. ಒಂದಕ್ಕಿಂತ ಕಿಂತ ಒಂದು ಚಂದ ಅನ್ನುವ ಹಾಗೇನೆ ಚೈತ್ರಾ ಎಕ್ಸ್‌ಪ್ರೆಷನ್ ಕ್ಯಾಪ್ಚರ್ ಆಗಿವೆ. ನಟಿಯ ಹೊಸ ಅವತಾರಕ್ಕೆ ಬೆಂಕಿ ಅಂತ ನೆಟ್ಟಿಗರೊಬ್ಬರು ಕಾಮೆಂಟ್ ಮಾಡಿದ್ದಾರೆ. ಸದ್ಯ ತಮಿಳು ನಟ ಸಿದ್ಧಾರ್ಥ್, ಶರತ್ ಕುಮಾರ್ ಅವರೊಂದಿಗೆ ಫ್ಯಾಮಿಲಿ ಓರಿಯಂಟೆಡ್ ಸಿನಿಮಾದಲ್ಲಿ ಬ್ಯುಸಿ ಆಗಿರುವ ಚೈತ್ರಾ ಆಚಾರ್, ಕನ್ನಡದಲ್ಲಿ ಮಾರ್ನಮಿ ಸಿನಿಮಾ ಮಾಡಿದ್ದಾರೆ. ಈ ಚಿತ್ರದಲ್ಲಿ ದೀಕ್ಷಾ ಅನ್ನೋ ಹಳ್ಳಿ ಹುಡುಗಿ ಪಾತ್ರದಲ್ಲಿ ಚೈತ್ರಾ ಕಾಣಿಸಿಕೊಂಡಿದ್ದಾರೆ. ಈಗಾಗಲೇ ಪಾತ್ರದ ಫಸ್ಟ್ ಲುಕ್ ಟೀಸರ್ ರಿಲೀಸ್ ಆಗಿದ್ದು, ಇದಕ್ಕೆ ಸ್ಯಾಂಡಲ್‌ವುಡ್ ಕ್ವೀನ್ ರಮ್ಯಾ ಕೂಡ ಸಪೋರ್ಟ್ ಮಾಡಿದ್ದಾರೆ. ಇನ್ನೂ ಕೆಲ ದಿನಗಳ ಹಿಂದೆ ನಟಿ ಇನ್‌ಸ್ಟಾ ಖಾತೆಯಲ್ಲಿ ಅಭಿಮಾನಿಗಳ ಪ್ರಶ್ನೆಗೆ ಉತ್ತರಿಸಲು ಆಸ್ಕ್ ಮಿ ಸೆಷನ್ ಮಾಡಿದ್ದರು. ಈ ವೇಳೆ ಅಭಿಮಾನಿಯೊಬ್ಬ, ನೀವು ಸಿನಿಮಾ ಅವಕಾಶಕ್ಕಾಗಿ ಸೆಕ್ಸ್ ಮಾಡಿದ್ದೀರಾ ಎಂದು ನೇರವಾಗಿ ಪ್ರಶ್ನೆ ಕೇಳಿದ್ದರು. ಅದಕ್ಕೆ ನಟಿ ತಕ್ಕ ಉತ್ತರವನ್ನೇ ನೀಡಿದ್ದರು.

# ಜನಾರ್ದನ ರೆಡ್ಡಿ ಪುತ್ರನ ಸಿನಿಮಾ ಟ್ರೈಲರ್

ಕರ್ನಾಟಕದ ಜನಪ್ರಿಯ ರಾಜಕಾರಣಿಗಳಲ್ಲಿ ಒಬ್ಬರಾಗಿರುವ ಜನಾರ್ದನ ರೆಡ್ಡಿ ಅವರ ಪುತ್ರ, ಕಿರೀಟಿ ರೆಡ್ಡಿ ಚಿತ್ರರಂಗ ಪ್ರವೇಶಿಸಿದ್ದು, ಅವರ ನಟನೆಯ ಮೊದಲ ಸಿನಿಮಾ 'ಜೂನಿಯರ್' ಬಿಡುಗಡೆಗೆ ರೆಡಿಯಾಗಿದೆ. ಸಿನಿಮಾದಲ್ಲಿ ರವಿಚಂದ್ರನ್, ಸುಧಾರಾಣಿ, ಶ್ರೀಲೀಲಾ, ಜೆನಿಲಿಯಾ ಡಿಸೋಜಾ ಇನ್ನೂ ಹಲವರು ನಟಿಸಿದ್ದು, ಸಿನಿಮಾದ ಟ್ರೈಲರ್ ಇದೀಗ ಬಿಡುಗಡೆ ಆಗಿದೆ. ಮಾಜಿ ಸಚಿವ, ರಾಜ್ಯದ ಜನಪ್ರಿಯ ರಾಜಕಾರಣಿ ಜನಾರ್ದನ ರೆಡ್ಡಿ ಅವರ ಪುತ್ರ ಕಿರೀಟಿ ಚಿತ್ರರಂಗಕ್ಕೆ ಕಾಲಿಟ್ಟಿದ್ದು, ಅವರ ನಟನೆಯ ಮೊದಲ ಸಿನಿಮಾ 'ಜೂನಿಯರ್'ದ ಟ್ರೈಲರ್ ಬಿಡುಗಡೆ ಆಗಿದೆ. ಶ್ರೀಲೀಲಾ ನಾಯಕಿಯಾಗಿ ನಟಿಸಿರುವ ಈ ಸಿನಿಮಾ ಸೆಟ್ಟೇರಿ ಬಹಳ ಸಮಯ ಆಗಿತ್ತು, ಕಾರಣಾಂತರಗಳಿಂದ ಮಧ್ಯದಲ್ಲಿ ಕೆಲ ಸಮಯ ಚಿತ್ರೀಕರಣ ನಿಂತಿತ್ತು. ಬಳಿಕ ಚಿತ್ರೀಕರಣ, ಪೋಸ್ಟ್ ಪ್ರೊಡಕ್ಷನ್ ಮುಗಿಸಿ ಇದೀಗ ಸಿನಿಮಾ ಬಿಡುಗಡೆಗೆ ರೆಡಿಯಾಗಿದ್ದು, ಸಿನಿಮಾದ ಟ್ರೈಲರ್ ಬಿಡುಗಡೆ ಆಗಿದೆ.



ಸಿನಿಮಾದ ಟ್ರೈಲರ್‌ನಲ್ಲಿ ಕಿರೀಟಿ ಗಮನ ಸೆಳೆದಿದ್ದಾರೆ. ಟ್ರೈಲರ್‌ನಲ್ಲಿಯೇ ಅವರ ಡ್ಯಾನ್ಸ್, ಆಕ್ಷನ್, ವಿವಿಧ ಲುಕ್, ಮಾಸ್ ಎಂಟ್ರಿ ಎಲ್ಲವನ್ನೂ ತೋರಿಸಿಬಿಟ್ಟಿದ್ದಾರೆ ನಿರ್ದೇಶಕ. ಈ ಸಿನಿಮಾ ಸೆಂಟಿಮೆಂಟ್ ಜೊತೆಗೆ ಆಕ್ಷನ್ ಅನ್ನು ಒಳಗೊಂಡಿರುವ ಸಿನಿಮಾ ಎಂಬುದು ಟ್ರೈಲರ್‌ನಿಂದ ತಿಳಿದು ಬರುತ್ತಿದೆ. ಅಪ್ಪ-ಅಮ್ಮನ ಮುದ್ದಿನ ಮಗ, ಪೋಷಕರ ಅತಿಯಾದ ಪ್ರೀತಿ, ಕಾಳಜಿಯಿಂದ ಬೇಸತ್ತು ಅವರನ್ನು ಬಿಟ್ಟು ದೂರ ಹೋಗುವ ಆ ನಂತರ ಪೋಷಕರ ಮಹತ್ವ, ಅಪ್ಪ ಕಂಡಿದ್ದ ಕನಸು ಅದನ್ನು ನನಸು ಮಾಡಲು ಮತ್ತೊಂದು ಪ್ರಯಾಣ ಅಲ್ಲಿ ಎದುರಾಗುವ ಅಡೆ-ತಡೆ ಹೀಗೆ ಸಾಕಷ್ಟು ಟ್ವಿಸ್ಟ್‌ಗಳನ್ನು ಹೊಂದಿರುವ ಕತೆ ಸಿನಿಮಾನಲ್ಲಿ ಇರುವುದು ಟ್ರೈಲರ್‌ನಿಂದ ತಿಳಿದು ಬರುತ್ತಿದೆ.



# ಧೋನಿ ದಾಖಲೆ ಮುರಿದ ಪಂತ್

## ಗಾಯದ ನಡುವೆಯೂ ಲಾರ್ಡ್ಸ್ ಅಂಗಳಕ್ಕಿಳಿದ ರಿಷಬ್

ಲಾರ್ಡ್ಸ್ ಟೆಸ್ಟ್ ಪಂದ್ಯದ ಮೊದಲ ದಿನದಾಟದಲ್ಲಿ ವಿಕೆಟ್ ಕೀಪಿಂಗ್ ಮಾಡುವ ವೇಳೆ ಬೆರಳಿನ ಗಾಯಕ್ಕೆ ತುತ್ತಾಗಿ ಮೈದಾನದಿಂದ ಹೊರನಡೆದಿದ್ದ ರಿಷಭ್ ಪಂತ್, ಈ ಪಂದ್ಯದಲ್ಲಿ ಆಡುತ್ತಾರೋ ಇಲ್ಲವೋ ಎಂಬುದರ ಬಗ್ಗೆ ಅನುಮಾನವಿತ್ತು. ಆದಾಗ್ಯೂ, ಭಾರತದ ಇನ್ನಿಂಗ್ಸ್ ಆರಂಭವಾದ ಬಳಿಕ ಎಂದಿನಂತೆ ಐದನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬಂದಿದ್ದ ಪಂತ್ ಅರ್ಧಶತಕದ ಇನ್ನಿಂಗ್ಸ್ ಆಡಿದರು.

107 ರನ್‌ಗಳಿಗೆ ಟೀಂ ಇಂಡಿಯಾ ಮೂರು ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದಾಗ ಕ್ರೀಸ್‌ಗಿಳಿದ ರಿಷಭ್ ಪಂತ್, ಎಂದಿನಂತೆ ತಮ್ಮ ಹೊಡಿಬಡಿ ಆಟದ ಮೂಲಕ ಆಂಗ್ಲ ಬೌಲರ್‌ಗಳ ನಿದ್ದೆಗೆಡಿಸಿದರು.

ಇದರ ಜೊತೆಗೆ ಟೀಂ ಇಂಡಿಯಾದ ಮಾಜಿ ನಾಯಕ ಮಹೇಂದ್ರ ಸಿಂಗ್ ಧೋನಿಯವರ ದಾಖಲೆಯನ್ನು ಮುರಿದರು. ವಾಸ್ತವವಾಗಿ 2014 ರಲ್ಲಿ ಇಂಗ್ಲೆಂಡ್‌ನಲ್ಲಿ ನಡೆದ ಟೆಸ್ಟ್ ಸರಣಿಯಲ್ಲಿ ಮಹೇಂದ್ರ ಸಿಂಗ್ ಧೋನಿ 349 ರನ್ ಗಳಿಸಿದ್ದರು. ಇದೀಗ ಮೂರನೇ ಟೆಸ್ಟ್ ಪಂದ್ಯದಲ್ಲೇ ರಿಷಭ್ ಪಂತ್ ಧೋನಿಯ ಈ ದಾಖಲೆಯನ್ನು ಮುರಿದಿದ್ದಾರೆ. ಅಷ್ಟೇ ಅಲ್ಲ, ಅವರು ಎರಡನೇ ಬಾರಿಗೆ ಸೆನಾ (ದಕ್ಷಿಣ ಆಫ್ರಿಕಾ, ಇಂಗ್ಲೆಂಡ್, ನ್ಯೂಜಿಲೆಂಡ್, ಆಸ್ಟ್ರೇಲಿಯಾ) ದೇಶಗಳಲ್ಲಿ 350 ಕ್ಕೂ ಹೆಚ್ಚು ರನ್ ಕಲೆಹಾಕಿದ್ದಾರೆ. ಇದಕ್ಕೂ ಮೊದಲು ಅಂದರೆ 2018 ರ ಆಸ್ಟ್ರೇಲಿಯಾ ಪ್ರವಾಸದಲ್ಲಿ ರಿಷಭ್ ಪಂತ್ 350 ರನ್ ಗಳಿಸಿದ್ದರು. ಇದೀಗ ಭಾರತ ಮತ್ತು ಇಂಗ್ಲೆಂಡ್ ನಡುವಿನ ಮೊದಲ ಟೆಸ್ಟ್ ಪಂದ್ಯದ ಎರಡೂ ಇನ್ನಿಂಗ್ಸ್‌ಗಳಲ್ಲಿ ಶತಕ ಬಾರಿಸಿದ್ದ ರಿಷಭ್ ಪಂತ್, ಮೊದಲ ಇನ್ನಿಂಗ್ಸ್‌ನಲ್ಲಿ 134 ರನ್ ಗಳಿಸಿದರೆ, ಎರಡನೇ ಇನ್ನಿಂಗ್ಸ್‌ನಲ್ಲಿ 118 ರನ್‌ಗಳ ಕೊಡುಗೆ ನೀಡಿದ್ದರು.

ಎರಡನೇ ಟೆಸ್ಟ್ ಪಂದ್ಯದ ಬಗ್ಗೆ ಹೇಳುವುದಾದರೆ, ಮೊದಲ ಇನ್ನಿಂಗ್ಸ್‌ನಲ್ಲಿ 25 ರನ್ ಗಳಿಸಿದ್ದ ಪಂತ್, ಎರಡನೇ ಇನ್ನಿಂಗ್ಸ್‌ನಲ್ಲಿ 65 ರನ್‌ಗಳ ಕೊಡುಗೆ ನೀಡಿದರು. ಇದರಿಂದಾಗಿ ಟೀಂ ಇಂಡಿಯಾ ಇಂಗ್ಲೆಂಡ್ ವಿರುದ್ಧ ಗೆದ್ದು ಬೀಗಿತ್ತು. ಇದೀಗ ಮೂರನೇ ಟೆಸ್ಟ್ ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ 74 ರನ್ ಬಾರಿಸಿದ ಪಂತ್, ಧೋನಿಯನ್ನು ಹಿಂದಿಕ್ಕಿದ್ದಾರೆ. ಇದಕ್ಕೂ ಮೊದಲು, ರಿಷಭ್ ಪಂತ್ 2021 ರಲ್ಲಿ ಇಂಗ್ಲೆಂಡ್ ವಿರುದ್ಧದ ಒಂದೇ ಟೆಸ್ಟ್ ಸರಣಿಯಲ್ಲಿ 349 ರನ್ ಗಳಿಸಿದ್ದರು.

ರಿಷಭ್ ಪಂತ್ ಟೆಸ್ಟ್ ಕ್ರಿಕೆಟ್‌ನಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಇಲ್ಲಿಯವರೆಗೆ, ಅವರು ಟೀಂ ಇಂಡಿಯಾ ಪರ 46 ಟೆಸ್ಟ್ ಪಂದ್ಯಗಳಲ್ಲಿ 44.71 ಸರಾಸರಿಯಲ್ಲಿ 3309 ರನ್ ಗಳಿಸಿದ್ದಾರೆ. ಇದರಲ್ಲಿ 16 ಅರ್ಧಶತಕಗಳು ಮತ್ತು 8 ಶತಕಗಳಳು ಸೇರಿವೆ.



# ವಿಶ್ವ ದಾಖಲೆಯ ಚೇಸಿಂಗ್!

## 41 ಸಿಕ್ಸ್ 487 ರನ್ಸ್ 14.2 ಓವರ್

ಟಿ20 ಕ್ರಿಕೆಟ್ ಇತಿಹಾಸದಲ್ಲೇ ಅತೀ ಹೆಚ್ಚು ರನ್ ರೇಟ್‌ನಲ್ಲಿ ಚೇಸಿಂಗ್ ಮಾಡಿ ಗೆದ್ದ ವಿಶ್ವ ದಾಖಲೆ ಬಲ್ಗೇರಿಯಾ ತಂಡದ ಪಾಲಾಗಿದೆ.

ಸರ್ಬಿಯಾ ದೇಶದ ಹೆಸರಿನಲ್ಲಿದ್ದ ಈ ದಾಖಲೆಯನ್ನು ಕೇವಲ 14.2 ಓವರ್‌ಗಳಲ್ಲಿ ಚೇಸ್ ಮಾಡುವ ಮೂಲಕ ಬಲ್ಗೇರಿಯಾ ಬ್ಯಾಟರ್‌ಗಳು ತಮ್ಮದಾಗಿಸಿಕೊಂಡಿದ್ದಾರೆ. ಟಿ20 ಕ್ರಿಕೆಟ್‌ನಲ್ಲಿ ಹೊಸ ವಿಶ್ವ ದಾಖಲೆ ನಿರ್ಮಾಣವಾಗಿದೆ. ಈ ವಿಶ್ವ ದಾಖಲೆ ನಿರ್ಮಿಸಿರುವುದು ಬಲ್ಗೇರಿಯಾ ತಂಡ. ಬಲ್ಗೇರಿಯಾ ಟಿ20 ಸರಣಿಯ 4ನೇ ಪಂದ್ಯದಲ್ಲಿ ಜಿಬ್ರಾಲ್ಟರ್ ಮತ್ತು ಬಲ್ಗೇರಿಯಾ ತಂಡಗಳು ಮುಖಾಮುಖಿಯಾಗಿದ್ದವು.

ಸೋಫಿಯಾದ ನ್ಯಾಷನಲ್ ಕ್ರಿಕೆಟ್ ಅಕಾಡೆಮಿ ಮೈದಾನದಲ್ಲಿ ನಡೆದ ಈ ಪಂದ್ಯದಲ್ಲಿ ಬಲ್ಗೇರಿಯಾ ತಂಡವು ಟಾಸ್ ಗೆದ್ದ ಬೌಲಿಂಗ್ ಆಯ್ದುಕೊಂಡರು.

ಅದರಂತೆ ಮೊದಲು ಬ್ಯಾಟ್ ಮಾಡಿದ ಜಿಬ್ರಾಲ್ಟರ್ ತಂಡದ ಪರ ಆರಂಭಿಕ ದಾಂಡಿಗ ಫಿಲಿಪ್ ರೈಕ್ಸ್ ಕೇವಲ 33 ಎಸೆತಗಳಲ್ಲಿ 8 ಸಿಕ್ಸ್ ಹಾಗೂ 4 ಫೋರ್‌ಗಳೊಂದಿಗೆ 73 ರನ್ ಬಾರಿಸಿದರು. ಇನ್ನು ನಾಯಕ ಇಯಾನ್ ಲ್ಯಾಟಿನ್ 28 ಎಸೆತಗಳಲ್ಲಿ 2 ಸಿಕ್ಸ್ ಹಾಗೂ 7 ಫೋರ್‌ಗಳೊಂದಿಗೆ 52 ರನ್ ಸಿಡಿಸಿದರು.

ಇನ್ನುಳಿದ ಬ್ಯಾಟರ್‌ಗಳು ಕೂಡ ಎರಡಂಕಿ ರನ್‌ಗಳನ್ನು ಕಲೆಹಾಕುವ ಮೂಲಕ ರನ್ ಗತಿ ಹೆಚ್ಚಿಸಿದರು. ಈ ಮೂಲಕ ಜಿಬ್ರಾಲ್ಟರ್ ತಂಡವು 20 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 243 ರನ್ ಕಲೆಹಾಕಿತು.

**244 ರನ್‌ಗಳ ಕಠಿಣ ಗುರಿ:** ಈ ಗುರಿಯನ್ನು ಬೆನ್ನತ್ತಿದ ಬಲ್ಗೇರಿಯಾ ಪರ ಇಸಾ ಜಾರೊ 24 ಎಸೆತಗಳಲ್ಲಿ 5 ಭರ್ಜರಿ ಸಿಕ್ಸ್ ಹಾಗೂ 9 ಫೋರ್‌ಗಳೊಂದಿಗೆ 69 ರನ್ ಸಿಡಿಸಿದರು. ಇನ್ನು ಮಿಲೆನ್ ಗೊಗೆವ್ 27 ಎಸೆತಗಳಲ್ಲಿ 7 ಸಿಕ್ಸ್ ಹಾಗೂ 5 ಫೋರ್‌ಗಳೊಂದಿಗೆ 69 ರನ್ ಚಚ್ಚಿದರು. ಆ ಬಳಿಕ ಬಂದ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಮನನ್ ಬಶೀರ್ 21 ಎಸೆತಗಳಲ್ಲಿ 9 ಸಿಕ್ಸ್ ಹಾಗೂ 3 ಫೋರ್‌ಗಳೊಂದಿಗೆ 71 ರನ್ ಬಾರಿಸಿ ಅಬ್ಬರಿಸಿದರು. ಈ ಮೂಲಕ ಬಲ್ಗೇರಿಯಾ ತಂಡವು 14.2 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 244 ರನ್ ಬಾರಿಸಿ 6 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ.




# ಮಿಂಚಿನ ದಾಳಿ ಸಂಘಟಿಸಿದ ಬುಮ್ರಾಗೆ ಸಿಕ್ಕ ಸ್ವಾಗತ

ಲಾರ್ಡ್ಸ್ ಮೈದಾನದಲ್ಲಿ ನಡೆಯುತ್ತಿರುವ ಭಾರತ ಮತ್ತು ಇಂಗ್ಲೆಂಡ್ ನಡುವಣ ಮೂರನೇ ಟೆಸ್ಟ್ ಪಂದ್ಯದಲ್ಲಿ ಟೀಮ್ ಇಂಡಿಯಾ ವೇಗಿ ಜಸ್‌ಪ್ರೀತ್ ಬುಮ್ರಾ ಮಾರಕ ದಾಳಿ ಸಂಘಟಿಸಿದ್ದಾರೆ. ಈ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ 27 ಓವರ್‌ಗಳನ್ನು ಎಸೆದಿರುವ ಬುಮ್ರಾ 74 ರನ್ ನೀಡಿ 5 ವಿಕೆಟ್ ಕಬಳಿಸಿದರು. ಈ ಮೂಲಕ ಕ್ರಿಕೆಟ್ ಕಾಶಿ ಲಾರ್ಡ್ಸ್ ಮೈದಾನದಲ್ಲಿ ಐದು ವಿಕೆಟ್ ಕಬಳಿಸಬೇಕೆಂಬ ತಮ್ಮ ಬಹುಕಾಲದ ಕನಸನ್ನು ಬುಮ್ರಾ ಈಡೇರಿಸಿಕೊಂಡಿದ್ದಾರೆ.

ಈ ಭರ್ಜರಿ ಬೌಲಿಂಗ್‌ನೊಂದಿಗೆ ಮೊದಲ ಇನಿಂಗ್ಸ್‌ನಲ್ಲಿ ಇಂಗ್ಲೆಂಡ್ ತಂಡವನ್ನು 382 ರನ್‌ಗಳಿಗೆ ಆಲೌಟ್ ಮಾಡಿದ ಬುಮ್ರಾಗೆ ಟೀಮ್ ಇಂಡಿಯಾ ಕೋಚ್ ಗೌತಮ್ ಗಂಭೀರ್ ಸೇರಿದಂತೆ ಸಹ ಆಟಗಾರರು ಭವ್ಯ ಸ್ವಾಗತ ನೀಡಿದರು. ಈ ವಿಡಿಯೋವನ್ನು ಬಿಸಿಸಿಐ ತನ್ನ ಸೋಷಿಯಲ್ ಮೀಡಿಯಾ ಖಾತೆಯಲ್ಲಿ ಹಂಚಿಕೊಂಢಿದೆ.

ಇನ್ನು ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಇಂಗ್ಲೆಂಡ್ ತಂಡವು ಪ್ರಥಮ ಇನಿಂಗ್ಸ್‌ನಲ್ಲಿ 382 ರನ್‌ಗಳಿಸಿ ಆಲೌಟ್ ಆಗಿದೆ. ಇದಕ್ಕುತ್ತರವಾಗಿ ಪ್ರಥಮ ಇನಿಂಗ್ಸ್ ಆರಂಭಿಸಿರುವ ಟೀಮ್ ಇಂಢಿಯಾ 2ನೇ ದಿನದಾಟದ ಅಂತ್ಯಕ್ಕೆ 3 ವಿಕೆಟ್ ಕಳೆದುಕೊಂಡು 145 ರನ್ ಕಲೆಹಾಕಿದೆ.



# ಪೊಲಾರ್ಡ್ ಪೂರನ್ ಸಿಡಿಲಬ್ಬರ

ಅಮೆರಿಕದಲ್ಲಿ ನಡೆಯುತ್ತಿರುವ ಮೇಜರ್ ಲೀಗ್ ಕ್ರಿಕೆಟ್ ಟೂರ್ನಿಯ ದ್ವಿತೀಯ ಕ್ವಾಲಿಫೈಯರ್ ಪಂದ್ಯದಲ್ಲಿ ನಿಕೋಲಸ್ ಪೂರನ್ ಮುಂದಾಳತ್ವದ ಎಂಐ ನ್ಯೂಯಾರ್ಕ್ ತಂಡವು ಭರ್ಜರಿ ಜಯ ಸಾಧಿಸಿದೆ. ಈ ಗೆಲುವಿನೊಂದಿಗೆ ಎಂಐ ಪಡೆ ಫೈನಲ್‌ಗೆ ಲಗ್ಗೆಯಿಟ್ಟಿದೆ. ಡಲ್ಲಾಸ್‌ನ ಗ್ರ್ಯಾಂಡ್ ಪ್ರೈರಿ ಸ್ಟೇಡಿಯಂನಲ್ಲಿ ನಡೆದ ನಿರ್ಣಾಯಕ ಪಂದ್ಯದಲ್ಲಿ ಟೆಕ್ಸಾಸ್ ಸೂಪರ್ ಕಿಂಗ್ಸ್ ಹಾಗೂ ಎಂಐ ನ್ಯೂಯಾರ್ಕ್ ತಂಡಗಳು ಮುಖಾಮುಖಿಯಾಗಿದ್ದವು. ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಟೆಕ್ಸಾಸ್ ಸೂಪರ್ ಕಿಂಗ್ಸ್ ತಂಡವು ನಾಯಕ ಫಾಫ್ ಡುಪ್ಲೆಸಿಸ್ (59) ಅವರ ಅರ್ಧಶತಕದ ನೆರವಿನೊಂದಿಗೆ 20 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 166 ರನ್ ಕಲೆಹಾಕಿತು. ಈ ಸ್ಪರ್ಧಾತ್ಮಕ ಗುರಿ ಬೆನ್ನತ್ತಿದ ಎಂಐ ನ್ಯೂಯಾರ್ಕ್ ತಂಡವು ಉತ್ತಮ ಆರಂಭ ಪಡೆದಿರಲಿಲ್ಲ. ಆದರೆ 4ನೇ ಕ್ರಮಾಂಕದಲ್ಲಿ ಕಣಕ್ಕಿಳಿದ ನಿಕೋಲಸ್ ಪೂರನ್ 36 ಎಸೆತಗಳಲ್ಲಿ 3 ಭರ್ಜರಿ ಸಿಕ್ಸ್ ಹಾಗೂ 4 ಫೋರ್‌ಗಳೊಂದಿಗೆ ಅಜೇಯ 52 ರನ್ ಬಾರಿಸಿದರೆ, 5ನೇ ಕ್ರಮಾಂಕದಲ್ಲಿ ಬ್ಯಾಟ್ ಬೀಸಿದ ಕೀರನ್ ಪೊಲಾರ್ಡ್ 22 ಎಸೆತಗಳಲ್ಲಿ 4 ಫೋರ್ ಹಾಗೂ 3 ಭರ್ಜರಿ ಸಿಕ್ಸ್‌ಗಳೊಂದಿಗೆ ಅಜೇಯ 47 ರನ್ ಚಚ್ಚಿದರು. ಈ ಮೂಲಕ ಎಂಐ ನ್ಯೂಯಾರ್ಕ್ ತಂಡವು 19 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು ಭರ್ಜರಿ ಜಯ ಸಾಧಿಸಿದೆ.




Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966